ರಾಜ್ಯೋತ್ಸವ ವಿಶೇಷಾಂಕ

ಡಿಸೆಂಬರ್ 2024
ಬೆಲೆ ರೂ.1

# ದೆಹಲಿ ಕರ್ನಾಟಕ ಸಂಘದ
# ಅಭಿಮತ




ಸಂಘದಲ್ಲಿ 'ಕರ್ನಾಟಕ ರಾಜ್ಯೋತ್ಸವ ಸಂಭ್ರಮವನ್ನು' ದೀಪ ಪ್ರಜ್ವಲಿಸಿ ರಾಜ್ಯಸಭಾ ಸಂಸದೆ ಶ್ರೀಮತಿ ಡಾ. ಸುಧಾ ಮೂರ್ತಿ ಅವರು ಉದ್ಘಾಟಿಸಿದ ಅವಿಸ್ಮರಣೀಯ ಕ್ಷಣ



ಶ್ರೀ ಸರವು ಕೃಷ್ಣ ಭಟ್




ಡಾ. ಕೆ.ಎಸ್. ಸೋಮಶೇಖರ್



ಶ್ರೀ ಬಸ್ತಿ ದಿನೇಶ್ ಶೆಣೈ



ಶ್ರೀಮತಿ ರಾಜೇಶ್ವರಿ ಭಟ್

ದೆಹಲಿ ಕರ್ನಾಟಕ ಸಂಘದ 2024 ರ 'ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತರು'



**ಅಭಿನಂದನೆ**

ಮುಖ್ಯ ಅತಿಥಿ ರಾಜ್ಯಸಭಾ ಸಂಸದೆ ಶ್ರೀಮತಿ ಡಾ. ಸುಧಾಮೂರ್ತಿ ಅವರನ್ನು ಗೌರವಿಸಿ ಅಭಿನಂದಿಸಿದ ದೃಶ್ಯ



ಸಂಘದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿದ್ದ ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಇಲಾಖೆಯಲ್ಲಿ ಜಂಟಿ ಕಾರ್ಯದರ್ಶಿಗಳಾಗಿರುವ ಐಎಫ್‌ಎಸ್ ಅಧಿಕಾರಿ ಡಾ. ಕೆ.ಜೆ. ಶ್ರೀನಿವಾಸ್ ಅವರಿಗೆ ಗೌರವ ಸಮರ್ಪಣೆ ನೀಡಿದ ಸಂದರ್ಭ.

## ದೆಹಲಿಯ ಉಪರಾಜ್ಯಪಾಲರೊಂದಿಗೆ ರಾಜಭವನದಲ್ಲಿ ಕರ್ನಾಟಕ ಹಾಗು ವಿವಿಧ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸ್ಥಾಪನಾ ದಿನಾಚರಣೆ







69ನೇ ಕರ್ನಾಟಕ ರಾಜ್ಯೋತ್ಸವವನ್ನು ದೆಹಲಿ ಕನ್ನಡಿಗರು ಸಂಘದಲ್ಲಿ, ಕನ್ನಡ ಶಾಲೆಯಲ್ಲಿ ಹಾಗು ದೆಹಲಿ ಎನ್‌ಸಿಆರ್. ಪ್ರದೇಶದಲ್ಲಿ ಒಟ್ಟಾರೆ ಸೇರಿ ಆಚರಿಸಿದ್ದೇವೆ, ಪೂರ್ತಿ ನವೆಂಬರ್ ತಿಂಗಳು ಕನ್ನಡದ ಹಬ್ಬವನ್ನು ಸಂಭ್ರಮಿಸಿದ್ದೇವೆ. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಹರಿಯಾಣ, ಪಂಜಾಬ್, ಮಧ್ಯಪ್ರದೇಶ, ಛತ್ತೀಸ್‌ಗಡ, ಜಾರ್ಖಂಡ್, ಉತ್ತರಾಖಂಡ್ ಸೇರಿದಂತೆ ಹತ್ತು ರಾಜ್ಯಗಳ ಸ್ಥಾಪನಾ ದಿನ (ಸ್ಟೇಟ್‌ಹುಡ್ ಡೇ)ಮತ್ತು ದೆಹಲಿ, ಚಂಡೀಗಡ, ಪಾಂಡಿಚೇರಿ, ಜಮ್ಮು ಮತ್ತು ಕಾಶ್ಮೀರ, ಲಡಾಖ್, ಲಕ್ಷದ್ವೀಪ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಸೇರಿದಂತೆ ಏಳು ಕೇಂದ್ರಾಡಳಿತ ಪ್ರದೇಶಗಳ ಸ್ಥಾಪನಾ ದಿನ (ಫೌಂಡೇಷನ್ ಡೇ) ವನ್ನು ಆಚರಿಸುವ ಅಂಗವಾಗಿ 09.11.2024 ರಂದು ದೆಹಲಿಯ ಉಪ ರಾಜ್ಯಪಾಲರಾದ ಶ್ರೀ ವಿನಯ್ ಕುಮಾರ್ ಸಕ್ಸೇನಾ ಅವರು ನೀಡಿದ ಆಹ್ವಾನದ ಮೇರೆಗೆ ಅವರ ಅಧಿಕೃತ ನಿವಾಸವಾದ ದೆಹಲಿ ಸಿವಿಲ್ ಲೈನ್ಸ್‌ನಲ್ಲಿರುವ ರಾಜಭವನದಲ್ಲಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಹತ್ತು ರಾಜ್ಯಗಳ ಹಾಗು ಏಳು ಕೇಂದ್ರಾಡಳಿತ ಪ್ರದೇಶಗಳ ದೆಹಲಿಯಲ್ಲಿ ವಾಸವಾಗಿರುವ ಪ್ರತಿನಿಧಿಗಳನ್ನು ಉಪ ರಾಜ್ಯಪಾಲರ ಕಚೇರಿಯಿಂದ ಆಮಂತ್ರಿಸಲಾಗಿತ್ತು. ಕರ್ನಾಟಕ ರಾಜ್ಯದ ಪರವಾಗಿ ಪ್ರತಿನಿಧಿಸಲು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಪದಾಧಿಕಾರಿಗಳು, ಸದಸ್ಯರು ಹಾಗು ದೆಹಲಿ ಎನ್‌ಸಿಆರ್‌ನ ಕನ್ನಡಿಗರಿಗೆ ಆಮಂತ್ರಣ ಪತ್ರಿಕೆ ಮತ್ತು ಪ್ರವೇಶ ಪಾಸ್ ನೀಡಲಾಗಿತ್ತು.

5ನೇ ಪುಟಕ್ಕೆ ಮುಂದುವರಿಯುವುದು

ಅಭಿಮತ
ದೆಹಲಿ ಕರ್ನಾಟಕ ಸಂಘದ
ಸಂಪುಟ 35 । ಸಂಚಿಕೆ 3
ಡಿಸೆಂಬರ್ 2024

**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ
ಕೆ.ಎಸ್. ಮೂರ್ತಿ
ಸದಸ್ಯರು
ಸರವು ಕೃಷ್ಣ ಭಟ್
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಜಿ.ಆರ್.
ಎಸ್. ರಮೇಶ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ–2024–26**

ಅಧ್ಯಕ್ಷರು
ಸಿ.ಎಂ. ನಾಗರಾಜ
9811325440
ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಪೂಜಾ ಪಿ. ರಾವ್
9810882498
ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183
ಖಜಾಂಚಿ
ಆಶಾಲತಾ ಎಂ.
9891249149
ಜಂಟಿ ಕಾರ್ಯದರ್ಶಿಗಳು
ನಾರಾಯಣ ಬಿ.
9868393978
ಅಶ್ವಿನಿ ಬಿ.ಎಸ್.
9036235665
ಸಮಿತಿ ಸದಸ್ಯರು
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಕೆ.ಎಸ್. ಮೂರ್ತಿ
9871140222
ಪ್ರಭಾಕರ ಮಡ್ಡಿತೋಟ್
9910091978
ನವೀನ್ ಕುಮಾರ್ ವಿ.
9871945819
ಅರುಣ್ ಸಿ.ಎಸ್.
9741282211
ಜಯಶ್ರೀ ಬಸವರಾಜು ಬಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಮಾಲಿನಿ ಪ್ರಹ್ಲಾದ
9910269085
ಎನ್.ಆರ್. ಶ್ರೀನಾಥ
7836954402
ಶಶಿಕಾಂತ ಪಿ. ಪಾಟೀಲ್
9650182413

# ಸಂಪಾದಕರ ಮನದಾಳದಿಂದ...

**"ನಿವಾರಣೆಯಾಗಲಿ ಪ್ರಕೃತಿ ವಿಕೋಪ, ಪ್ರತಿಕೂಲ ವಾತಾವರಣ ಮತ್ತು ಪ್ರದೂಷಣೆ
ನೆಲ, ಜಲ ಹಾಗು ವಾಯು ಮಾಲಿನ್ಯಗಳಿಂದ ಸಿಗಲಿ ರಕ್ಷಣೆ, ಮುಕ್ತವಾಗಲಿ ಜನರ ಬವಣೆ"**

ಆತ್ಮೀಯ ಕನ್ನಡಿಗ ಬಂಧುಗಳೇ,

ನವೆಂಬರ್ ತಿಂಗಳಿನಲ್ಲಿ ರಾಜ್ಯದೆಲ್ಲೆಡೆ, ದೇಶ ವಿದೇಶಗಳಲ್ಲಿ ಹಾಗು ರಾಷ್ಟ್ರ ರಾಜಧಾನಿ ದೆಹಲಿ ಎನ್‌ಸಿಆರ್ ಪ್ರದೇಶಗಳಲ್ಲಿ ಕರುನಾಡಿನ, ಗಡಿನಾಡಿನ, ಹೊರನಾಡಿನ ಎಲ್ಲಾ ಕನ್ನಡಿಗರು ಸಂಭ್ರಮಿಸಿದ ರಾಜ್ಯದ ಸ್ಥಾಪನಾ ದಿನಾಚರಣೆ, ಕನ್ನಡದ ಹಬ್ಬ 69ನೇ ಕರ್ನಾಟಕ ರಾಜ್ಯೋತ್ಸವದ ತುಂಬು ಹೃದಯದ ಶುಭಾಶಯಗಳು ಮತ್ತು ಕನ್ನಡ ತಾಯಿ ಭುವನೇಶ್ವರಿಗೆ ನನ್ನ ನಮನಗಳು. ಹಾಗೇಯೇ, ನವೆಂಬರ್ 14 ರಂದು ಮಕ್ಕಳೆಲ್ಲಾ ಆನಂದಿಸಿದ 'ಮಕ್ಕಳ ದಿನಾಚರಣೆ' ಮತ್ತು ನವೆಂಬರ್ 26 ರ ಸಂವಿಧಾನ ದಿನಾಚರಣೆಯ ಹಾರ್ದಿಕ ಅಭಿನಂದನೆಗಳು.

ಸನ್ಮಿತ್ರರೇ, ದೇಶದ ಹಲವೆಡೆ ಸಮಶೀತೋಷ್ಣ ವಾತಾವರಣದಲ್ಲಿ ಶರತ್ಕಾಲ ಹಾಗೂ ವಸಂತ ಕಾಲಗಳ ನಡುವೆ ಬರುವ ಶೀತಲ ಋತು 'ಚಳಿಗಾಲ' ಆರಂಭವಾಗಿದೆ. ಹಾಗೇನೇ, ಭಾರತದ ದಕ್ಷಿಣ ಮತ್ತು ಪೂರ್ವ ಭಾಗಗಳಲ್ಲಿ ಉತ್ತರ–ಪೂರ್ವ ಮಳೆ (North- East Monsoon) ಯಾಗಿದ್ದು ಜೊತೆ ಜೊತೆಗೆ ತಮಿಳುನಾಡು, ಪುದುಚೇರಿ, ತೆಲಂಗಾಣ, ಆಂಧ್ರಪ್ರದೇಶ ಹಾಗೂ ಕರ್ನಾಟಕದಲ್ಲಿ ಬಂಗಾಳ ಕೊಲ್ಲಿಯಲ್ಲಿ ಗೋಚರಿಸಿದ ಫೆಂಗಾಲ್ ಚಂಡಮಾರುತದ ಚಳಿ ತಟ್ಟಿದೆ, ಈ ಪ್ರಕೃತಿ ವಿಕೋಪದ ಕಾರಣ ಈ ರಾಜ್ಯಗಳಲ್ಲಿ ನಿರಂತರ ಭೀಕರ ಗಾಳಿ ಮಳೆಯಾಗಿದ್ದು, ಜನ ಜೀವನ ಅಸ್ತವ್ಯಸ್ತವಾಗಿ ಕೆಲವೆಡೆ ಅತಿವೃಷ್ಟಿಯಿಂದಾಗಿ ನೆರೆ, ಜಲಾವೃತ, ಭೂಕುಸಿತದಂತಹ ಸಮಸ್ಯೆಗಳು ಉದ್ಭವಿಸಿ ಅಪಾರ ಆಸ್ತಿ ಪಾಸ್ತಿ ನಷ್ಟ ಹಾಗೂ ಜೀವಹಾನಿಯಾಗಿದ್ದು ದುರದೃಷ್ಟಕರ. ಹಾಗೇ ಉತ್ತರ ಭಾರತದಲ್ಲಿ ಶೀತ ಅಲೆಯ ವಾತಾವರಣದಲ್ಲಿ ಮಾನವ ನಿರ್ಮಿತ ಕಾರಣಗಳಿಂದ (ಕೈಗಾರಿಕೆಗಳ, ವಾಹನಗಳ, ರೈತರ ಹುಲ್ಲು ಸುಡುವಿಕೆಯಿಂದ ಉದ್ಭವವಾದ ಹೊಗೆ, ನಿರ್ಮಾಣ ಕಾರ್ಯಗಳಿಂದ ದೆಹಲಿ ಮತ್ತು ಎನ್‌ಸಿಆರ್ ಪ್ರದೇಶಗಳಲ್ಲಿ ತಲೆದೋರುವ ಧೂಳಿನ ಕಣಗಳು) ಪ್ರದೂಷಣೆ ಹೆಚ್ಚಾಗಿ ವಿಷ ಗಾಳಿಯನ್ನು ಜನರು ಉಸಿರಾಡುವಂತಹ ಕ್ಲಿಷ್ಟಕರ ಪರಿಸ್ಥಿತಿ ಎದುರಾಗಿದೆ. ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಈ ಬವಣೆಯಿಂದ ಜನರಿಗೆ ರಕ್ಷಣೆ ಒದಗಿಸುವುದು ದೆಹಲಿ ಹಾಗು ಸುತ್ತಮುತ್ತಲಿನ ರಾಜ್ಯ ಸರ್ಕಾರಗಳ ಜವಾಬ್ದಾರಿಯಾಗಿದ್ದು ಈ ನಿಟ್ಟಿನಲ್ಲಿ CAQM (Commission for Air Quality Management) ಕಾರ್ಯಪ್ರವೃತ್ತವಾಗಿದೆ. ಗಾಳಿಯ ಗುಣಮಟ್ಟದ AQI (Air Quality Index) ಮಾಪನೆ ಮೇರೆಗೆ Graded Response Action plan (GRAP) ನಿರ್ಭಂದನೆಗಳನ್ನು ಹೇರಲಾಗುತ್ತಿದ್ದು ಪ್ರದೂಷಣೆಯನ್ನು ಹತೋಟಿಗೆ ತರುವ ಪ್ರಯತ್ನಗಳು ನಡೆದರೂ ನಿರೀಕ್ಷಿಸಿದ ಮಟ್ಟದಲ್ಲಿ ಫಲಿತಾಂಶ ದೊರಕದಿರುವುದು ಖೇದಕರ. ಈ ಸಂದರ್ಭದಲ್ಲಿ ಪ್ರಸ್ತುತವೆಂಬಂತೆ, ಹಿರಿಯ ದೆಹಲಿ ಕನ್ನಡಿಗರೂ ಹಾಗು ಪ್ರಸಿದ್ಧ ಆಯುರ್ವೇದ ತಜ್ಞರಾದ ಡಾ. ಭೀಮ ಭಟ್ಟ ಅವರು ವಿಶೇಷ ವೈದ್ಯಕೀಯ ಲೇಖನದಲ್ಲಿ ವಾಯು ಮಾಲಿನ್ಯಕ್ಕೆ ಆಯುರ್ವೇದದ ಪರಿಹಾರ ಸೂಚಿಸಿರುವುದು ನಮ್ಮ ಅಭಿಮತ ಓದುಗರಿಗೆ ಪ್ರಯೋಜನಕಾರಿಯಾಗಲಿದೆ.

ಇನ್ನು, ಇದೇ ಡಿಸೆಂಬರ್ 20, 21 ಮತ್ತು 22 ರಂದು ಅಕ್ಕರೆಯ ಸಕ್ಕರೆ ನಾಡು ಮಂಡ್ಯದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಕನ್ನಡ ಭಾಷೆಯಲ್ಲಿ ಕೃಷಿ ಮಾಡುತ್ತಿರುವ ಸಾಧಕರಿಗೆ, ಸಾಹಿತ್ಯಾಸಕ್ತರಿಗೆ, ಕನ್ನಡತನವನ್ನು ಸವಿಯಬಹುದಾದ, ಕನ್ನಡವನ್ನು ಕಟ್ಟುವಂತಹ, ಕರ್ನಾಟಕದ ಏಕೀಕರಣ ಸಾಧಿಸುವ, ಕನ್ನಡಿಗರ ಬದುಕಿನಲ್ಲಿ ಕನ್ನಡವು ಸಾರ್ವಭೌಮ ಸ್ಥಾನವನ್ನು ಪಡೆಯಲು ಅಗತ್ಯವಿರುವ ಜನ ಜಾಗೃತಿಯನ್ನು ಮತ್ತು ಸಂಕಲ್ಪವನ್ನು ಹುಟ್ಟಿಸುವ ಕೈಂಕರ್ಯವಾಗಲಿದೆ.

ಸರ್.ಎಂ. ವಿಶ್ವೇಶ್ವರಯ್ಯ, ಹೆಚ್.ವಿ. ನಂಜುಂಡಯ್ಯ, ಬೆಳ್ಳಾವೆ ವೆಂಕಟನಾರಣಪ್ಪ, ಕರ್ಪೂರ ಶ್ರೀನಿವಾಸ ರಾವ್, ಅಚ್ಚುತ ರಾವ್ ಬಹದ್ದೂರ್, ಶ್ಯಾಮರಾವ್, ರಾ.ಹ. ದೇಶಪಾಂಡೆ, ಆಲೂರು ವೆಂಕಟರಾವ್ ಅವರುಗಳ ನಿರಂತರ ಚಿಂತನೆ, ಪ್ರಯತ್ನ, ಪರಿಶ್ರಮದ ಫಲವಾಗಿ ಮೈಸೂರು ಅರಸರಾಗಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ್ ಒಡೆಯರ್ ಅವರಿಂದ 1915 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾಗಿತ್ತು. ಈ ಪರಿಷತ್ತನ್ನು ಸರ್.ಎಂ. ವಿಶ್ವೇಶ್ವರಯ್ಯ, ಸರ್. ಮಿರ್ಜಾ ಇಸ್ಮಾಯಿಲ್ ಅವರಂತಹ ಮಹನೀಯರು ಹಾಗು ಈವರೆಗೆ 26 ದಿಗ್ಗಜ ಅಧ್ಯಕ್ಷರು ಪೋಷಿಸಿ ಬೆಳೆಸಿದ್ದಾರೆ. ಮೊದಲನೆಯ ಕನ್ನಡ ಸಾಹಿತ್ಯ ಸಮ್ಮೇಳನ 1915ರಲ್ಲಿ ನಡೆದಿದೆ. 1978ರಲ್ಲಿ 50ನೇ ಅಖಿಲ ಭಾರತ ಸುವರ್ಣ ಕನ್ನಡ ಸಾಹಿತ್ಯ ಸಮ್ಮೇಳನ ದೆಹಲಿ ಕನ್ನಡ ಶಾಲೆ ಮತ್ತು ಕರ್ನಾಟಕ ಸಂಘದ ಪಾಲ್ಗೊಳ್ಳುವಿಕೆಯೊಂದಿಗೆ ನವದೆಹಲಿಯಲ್ಲಿ ಶ್ರೀ ಜಿ.ಪಿ. ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಆಯೋಜನೆಗೊಂಡಿದ್ದು ಹಾಗು ಅಂದಿನ ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಾಕ್ಷಿಯಾಗಿದ್ದು ದೆಹಲಿ ಕನ್ನಡಿಗರು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ಐತಿಹಾಸಿಕ ಸಮ್ಮೇಳನವಾಗಿದೆ. ಆ ಸಂದರ್ಭದಲ್ಲಿ ನನ್ನ ಪೂಜ್ಯ ತಂದೆಯವರು ಕರ್ನಾಟಕದಿಂದ ವಿಶೇಷ ರೈಲಿನಲ್ಲಿ ಸಾವಿರಾರು ಕನ್ನಡಿಗರ ಜೊತೆ ಬಂದು ಆ ಸಮ್ಮೇಳನದಲ್ಲಿ ಭಾಗಿಯಾಗಿದ್ದು ನನ್ನ ಜೀವನದಲ್ಲಿ ಅವಿಸ್ಮರಣೀಯ ಸಂಗತಿಯಾಗಿದೆ.

2023 ರಲ್ಲಿ ಕನ್ನಡದ ಖ್ಯಾತ ಕವಿಗಳಾದ ಡಾ. ದೊಡ್ಡರಂಗೇ ಗೌಡರ ಅಧ್ಯಕ್ಷತೆಯಲ್ಲಿ ಹಾವೇರಿಯಲ್ಲಿ ಜರುಗಿದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ತರುವಾಯ ನಾಡೋಜ ಡಾ. ಗೊ.ರು. ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಸ್ತುತ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರ ಸಾರಥ್ಯದಲ್ಲಿ ಮಂಡ್ಯ ನಗರದಲ್ಲಿ ಈ ತಿಂಗಳಿನಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ 2024 ಅತ್ಯಂತ ಯಶಸ್ವಿಯಾಗಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭ ಕಾಮನೆಗಳನ್ನು ಅರ್ಪಿಸುತ್ತಿದ್ದೇನೆ. ಮುಂದಿನ 88ನೇ ಕನ್ನಡ ಸಾಹಿತ್ಯ ಸಮ್ಮೇಳನ 2025ರಲ್ಲಿ ನವದೆಹಲಿಯಲ್ಲಿ ನೆರವೇರಲೆಂದು ಆಶಿಸುತ್ತೇನೆ.

ಆತ್ಮೀಯರೇ, ಕರ್ನಾಟಕ ರಾಜ್ಯೋತ್ಸವ ಆಚರಣೆ ಅಂಗವಾಗಿ ಕಳೆದ ನವೆಂಬರ್ ತಿಂಗಳಿನಲ್ಲಿ ಸಂಘದಲ್ಲಿ ಹಾಗೂ ಇನ್ನಿತರೆಡೆ ಆಯೋಜನೆಗೊಂಡ ಕಾರ್ಯಕ್ರಮಗಳ ವರದಿಗಳು, ಇತರ ಸ್ಥಳೀಯ ಸಂಘ ಸಂಸ್ಥೆಗಳ ಕಾರ್ಯಕ್ರಮಗಳ ವಿವರಗಳು, ಎಂದಿನಂತೆ ತಿಂಗಳ ವ್ಯಕ್ತಿ ಅಂಕಣ ಹಾಗು ವಿಶೇಷ ವೈದ್ಯಕೀಯ ಲೇಖನಗಳನ್ನು 'ಅಭಿಮತ'ದ ಈ ಡಿಸೆಂಬರ್ ಸಂಚಿಕೆಯ ಒಳ ಪುಟಗಳಲ್ಲಿ ನೀವು ಕಾಣುವಿರಿ. 32 ಪುಟಗಳ ಈ ರಾಜ್ಯೋತ್ಸವ ವಿಶೇಷಾಂಕ ಮುಖವಾಣಿ ಪತ್ರಿಕೆಯನ್ನು ಸವಿಸ್ತಾರವಾಗಿ ಓದಿ ಆನಂದಿಸಿ.

ದೆಹಲಿ ಕನ್ನಡಿಗರಿಗೆ ವಿಶೇಷ ಸೇವೆ ಸಲ್ಲಿಸಿದಂತಹ ಸಂಘದ 2024ರ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪುರಸ್ಕೃತರಾದ ನಾಲ್ಕೂ ಸಾಧಕರಿಗೆ, ನಮ್ಮ ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ನಮ್ಮೊಡನೆ ಪಾಲ್ಗೊಂಡು ಸಾಕ್ಷಿಯಾದ ಡಾ. ಸುಧಾ ಮೂರ್ತಿ ಅಮ್ಮನವರಿಗೆ, ಐಎಫ್‌ಎಸ್ ಅಧಿಕಾರಿಗಳಾದ ಡಾ. ಕೆ.ಜೆ. ಶ್ರೀನಿವಾಸ್ ಅವರಿಗೆ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅಮೋಘ ನೃತ್ಯ ಪ್ರದರ್ಶನ ನೀಡಿದ ಸ್ಥಳೀಯ ನಮ್ಮ ಕನ್ನಡಿಗ ಕಲಾವಿದರಿಗೆ, ಸಂಘ ಸಂಸ್ಥೆಗಳಿಗೆ ಹಾಗೂ ಈ ವರ್ಷದ ವಿದ್ಯಾರ್ಥಿ ವೇತನ ಪಡೆದ ಎಲ್ಲಾ ಕನ್ನಡಿಗರ ಮಕ್ಕಳಿಗೆ ಅಭಿಮತ ಓದುಗರ ಪರವಾಗಿ ಹೃದಯಪೂರ್ವಕ ಅಭಿನಂದನೆಗಳು. ನಮಸ್ಕಾರ.

***ಕೆ. ಶ್ರೀನಿವಾಸ ಮೂರ್ತಿ***
ಪ್ರಧಾನ ಸಂಪಾದಕರು

ಕಾವಲು ಸಮಿತಿ
ಅನಂತರಾಮ ಅರಳಿ | ಸಂಜೀವ ದೇಶಪಾಂಡೆ | ಐ. ಶಂಭುಲಿಂಗಪ್ಪ

## ಅಧ್ಯಕ್ಷರ ನುಡಿ



ಹೆಮ್ಮೆಯ ಕನ್ನಡ ಬಂಧುಗಳಿಗೆ ನನ್ನ ಹೃದಯ ಪೂರ್ವಕ ನಮಸ್ಕಾರಗಳು.

ನವೆಂಬರ್ ತಿಂಗಳಲ್ಲಿ ಕರ್ನಾಟಕ ರಾಜ್ಯೋತ್ಸವದ ಹಬ್ಬ. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಪ್ರತಿ ವಾರ ಕನ್ನಡ ಸಂಸ್ಕೃತಿ ಮೇಳೈಸಿರುವ ಕಾರ್ಯಕ್ರಮಗಳ ಸುರಿಮಳೆ. ಇದರ ಸಮಾರೋಪ ಕಾರ್ಯಕ್ರಮವಾಗಿ ದೆಹಲಿ ಕರ್ನಾಟಕ ಸಂಘ ದೆಹಲಿಯಲ್ಲಿರುವ ಕನ್ನಡ ಸಂಘ-ಸಂಸ್ಥೆಗಳ ಜೊತೆಗೂಡಿ ತನ್ನ ಸಭಾಂಗಣದಲ್ಲಿ ಕಳೆದ ನವೆಂಬರ್ 24 ರಂದು ಸ್ಥಳೀಯ ಕಲಾವಿದರಿಂದ ನಡೆದ ಕಾರ್ಯಕ್ರಮ ಅತ್ಯಂತ ಸುಂದರವಾಗಿ ಮೂಡಿಬಂದಿದೆ. ಈ ಕಾರ್ಯಕ್ರಮದ ವಿಶೇಷವೇನೆಂದರೆ ಶ್ರೀಮತಿ ಡಾ. ಸುಧಾ ಮೂರ್ತಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದು.

ಬಂಧುಗಳೇ, ತಾಯ್ನಾಡಿನಿಂದ ದೂರ ಇದ್ದರೂ ದೆಹಲಿಯ ಕರ್ನಾಟಕ ಸಂಘದಲ್ಲಿ ಸಕ್ರಿಯವಾಗಿ ಇದ್ದು ಕನ್ನಡಕ್ಕಾಗಿ ದುಡಿದ ಮಹನೀಯರಿಗೆ ವಿಶೇಷವಾಗಿ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಿ ಗೌರವಿಸುತ್ತೇವೆ. ಈ ಬಾರಿ ವಿಶಿಷ್ಟ ಕನ್ನಡಿಗ ಪ್ರಶಸ್ತಿಗೆ ಭಾಜನರಾದವರಲ್ಲಿ ಮೊದಲಿಗರು ಶ್ರೀಯುತ ಸರವು ಕೃಷ್ಣ ಭಟ್. ಐದು ಬಾರಿ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ದುಡಿದವರು ಹಾಗೂ ಕ್ಲಿಷ್ಟಕರ ಪರಿಸ್ಥಿತಿಗಳಲ್ಲೂ ಸಂಘ ವೇಗದ ಬೆಳವಣಿಗೆ ಕಾಣುವಲ್ಲಿ ಇವರದು ದೊಡ್ಡ ಪಾತ್ರ. ಶ್ರೀ ಕೃಷ್ಣ ಭಟ್ ಅವರನ್ನು ಗುರುತಿಸಿ ಸನ್ಮಾನಿಸಿದ್ದು ನಮ್ಮ ಕುಟುಂಬದ ಒಬ್ಬ ಸದಸ್ಯರನ್ನು ಅತ್ಯಂತ ಪ್ರೀತಿಪೂರ್ವಕವಾಗಿ ಗೌರವಿಸಿದಂತಾಗಿದೆ. ಅದೇ ರೀತಿಯ ಇನ್ನೋರ್ವ ವ್ಯಕ್ತಿ ಶ್ರೀಯುತ ಡಾ ಕೆ.ಎಸ್. ಸೋಮಶೇಖರ್ ಗೌಡರು. ಸಂಸತ್ ಭವನದಲ್ಲಿ ಅತ್ಯಂತ ಉನ್ನತ ಹುದ್ದೆಯನ್ನು ಅಲಂಕರಿಸಿರುವ ಇವರು ದೆಹಲಿ ಕರ್ನಾಟಕ ಸಂಘದ ಬೆಳವಣಿಗೆಗೆ ಸಕ್ರಿಯವಾಗಿ ದುಡಿದಿದ್ದಾರೆ. ಅನೇಕ ಕೇಂದ್ರ ಮಂತ್ರಿಗಳ ಸಂಪರ್ಕದೊಂದಿಗೆ ಏರ್ಪಡಿಸಿ ಅಪೂರ್ವ ಸಹಕಾರ ನೀಡಿದ್ದಾರೆ. ಇಂತಹ ಅಪರೂಪದ ವ್ಯಕ್ತಿಯನ್ನು ಗುರುತಿಸಿ ಅಭಿನಂದಿಸಿದ್ದು ನಮ್ಮ ಸೌಭಾಗ್ಯ.

ಹಾಗೆಯೇ, ದೆಹಲಿ ಕರ್ನಾಟಕ ಸಂಘದ ಕುಟುಂಬದವರಲ್ಲಿ ಒಬ್ಬರಾದಂತಹ ಶ್ರೀ ಬಸ್ತಿ ದಿನೇಶ್ ಶೆಣ್ಯೆರವರು ಅತ್ಯಂತ ಪ್ರಾಮಾಣಿಕ ವ್ಯಕ್ತಿ. ಇವರ 'ಮದ್ಯಂತರ' ಕಿರುಚಿತ್ರ ಈ ಬಾರಿಯ ಸ್ವರ್ಣ ಹಾಗೂ ರಜತ ಕಮಲಗಳ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಿಗೆ ಭಾಜನವಾಗಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ಎರಡು ವಿಭಾಗಗಳಲ್ಲಿ ಈ ಪ್ರಶಸ್ತಿಗಳನ್ನು ಗಳಿಸಿರುವ ಮೇಲ್ಕಂಡ ಚಿತ್ರದ ನಿರ್ದೇಶಕರಾದ ಇವರನ್ನು ವಿಶಿಷ್ಟ ಕನ್ನಡಿಗರಾಗಿ ಗುರುತಿಸಿದ್ದೇವೆ. ಈ ಮೂವರ ಜೊತೆಗೆ ಎಲೆಮರೆ ಕಾಯಿಯಂತೆ ತನ್ನದೇ ಆದ ಸೇವೆಯನ್ನು ಮಾಡಿಕೊಂಡು ಶಾಸ್ತ್ರೀಯ ನೃತ್ಯ ಕಲಿಸುತ್ತಾ ಬರುತ್ತಿರುವ ಶ್ರೀಮತಿ ರಾಜೇಶ್ವರಿ ಭಟ್‌ರವರನ್ನು ಸಹಾ ವಿಶಿಷ್ಟ ಕನ್ನಡಿಗ ಪ್ರಶಸ್ತಿಗೆ ಗುರುತಿಸಿ ಅಭಿನಂದಿಸಿದ್ದು ತುಂಬಾ ಖುಷಿ ತಂದಿದೆ.

ಇದೇ ಮೊದಲ ಬಾರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ **ಅವಶ್ಯಕತೆ ಇರುವ ಅತಿ ಹೆಚ್ಚು ಕನ್ನಡಿಗರ ಮಕ್ಕಳಿಗೆ ರೂ. 10 ಸಾವಿರದಂತೆ 57 ವಿದ್ಯಾರ್ಥಿವೇತನಗಳನ್ನು** ನೀಡಿ ಅಭಿನಂದಿಸಲಾಗಿದೆ. **ಅದರ ಜೊತೆಗೆ ಪ್ರತಿ ತರಗತಿಯಲ್ಲಿ ಅತಿ ಹೆಚ್ಚು ಅಂಕ ಪಡೆದಿರುವ ಕನ್ನಡಿಗರ ವಿದ್ಯಾರ್ಥಿ ಮಕ್ಕಳ ಅರ್ಹತೆಗೂ ವಿದ್ಯಾರ್ಥಿವೇತನ** ಎಂದಿನಂತೆ ನೀಡಲಾಗಿದೆ. ಪ್ರತಿವರ್ಷ ಸುಮಾರು 5 ಲಕ್ಷದಷ್ಟು ಹಣವನ್ನು ವಿದ್ಯಾರ್ಥಿ ವೇತನವಾಗಿ ನೀಡುತ್ತಿದ್ದೆವು. ಈ ವರ್ಷ ಎರಡೂ ವಿಭಾಗಗಳಿಂದ 81 ಜನ ವಿದ್ಯಾರ್ಥಿಗಳಿಗೆ ಸುಮಾರು 8 ಲಕ್ಷ ಹಣವನ್ನು ವಿದ್ಯಾರ್ಥಿ ವೇತನವನ್ನಾಗಿ ನೀಡಿ ಪ್ರೋತ್ಸಾಹಿಸಿದ್ದೇವೆ. **ನಮ್ಮ ಆತ್ಮೀಯರೊಬ್ಬರು ಈ ಎಲ್ಲಾ ಮಕ್ಕಳಿಗೆ ವಿದ್ಯಾರ್ಥಿವೇತನಕ್ಕೆ ತಗಲುವ ವೆಚ್ಚವನ್ನು ಮೊದಲೇ ನಮಗೆ ತಿಳಿಸಿ, ನಾನೇ ಪೂರ್ಣ ಹಣ ಕೊಡುತ್ತೇನೆ** ಎಂದು ಹೇಳಿದ್ದಾರೆ. ಇಂತಹ ಮಹಾನುಭಾವರಿಗೆ ನಾನು ಧನ್ಯವಾದಗಳನ್ನು ತಿಳಿಸುತ್ತಾ ಮುಂಬರುವ ವರ್ಷಗಳಲ್ಲಿ ಇವರ ಸಹಕಾರ ಪಡೆದು ನಮ್ಮ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡಲಾಗುವುದು ಎಂದು ಭರವಸೆ ನೀಡುತ್ತೇನೆ.

ಬಂಧುಗಳೇ, ಸ್ಥಳೀಯ ಸಂಘ ಸಂಸ್ಥೆಗಳಿಗೆ ಮತ್ತು ಸ್ಥಳೀಯ ಕಲಾವಿದರಿಗೆ ಪ್ರತಿವರ್ಷದಂತೆ ಈ ವರ್ಷವೂ ಸಹ ಹೆಚ್ಚಿನ ಸಹಕಾರ ನೀಡಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಎಂದಿನಂತೆ ನೀಡಿದ್ದೇವೆ. **130 ಸ್ಥಳೀಯ ಕಲಾವಿದರು ವಿವಿಧ ರೀತಿಯ ನೃತ್ಯ ರೂಪಕಗಳನ್ನು ಮಾಡಿ ಪ್ರೇಕ್ಷಕರ ಮನಗೆದ್ದಿದ್ದಾರೆ. ಈ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದ ಎಲ್ಲಾ ಕಲಾವಿದರಿಗೆ ಪ್ರೋತ್ಸಾಹ ಧನವಾಗಿ ಪ್ರತಿಯೊಬ್ಬರಿಗೆ 1,500/- ರೂಗಳಂತೆ ಹಣವನ್ನ ನೀಡಿದ್ದೇವೆ.**

ಈ ಎಲ್ಲಾ ಕಲಾವಿದರ ಜವಾಬ್ದಾರಿಯನ್ನು ತೆಗೆದುಕೊಂಡು ಕಾರ್ಯ ನಿರ್ವಹಿಸಿದ ಕಾರ್ಯಕಾರಿ ಸಮಿತಿಯಲ್ಲಿನ ಮಹಿಳೆಯರಾದ ಶ್ರೀಮತಿ ಪೂಜಾ ರಾವ್-ಉಪಾಧ್ಯಕ್ಷರು. ಶ್ರೀಮತಿ ಅಶ್ವಿನಿ ಬಿ.ಎಸ್.-ಜಂಟಿ ಕಾರ್ಯದರ್ಶಿಗಳು, ಶ್ರೀಮತಿ ಆಶಾಲತಾ ಎಂ.-ಖಜಾಂಚಿಗಳು, ಹಾಗೂ ಸದಸ್ಯೆಯರಾದ ಶ್ರೀಮತಿ ಶುಭಾ ದೇವಿಪ್ರಸಾದ್, ಶ್ರೀಮತಿ ಜಯಶ್ರೀ ಬಸವರಾಜು, ಶ್ರೀಮತಿ ಮಾಲಿನಿ ಪ್ರಹ್ಲಾದ, ಅವರುಗಳನ್ನು ಅಭಿನಂದಿಸುತ್ತೇನೆ. ಕಾರ್ಯಕ್ರಮಕ್ಕೆ ತಾವುಗಳು ಸಮಯಕ್ಕೆ ಸರಿಯಾಗಿ ನಾಲ್ಕು ಘಂಟೆಗೆ ಬಂದು ಸರಿ ಸುಮಾರು 5 ಘಂಟೆಗಳ ಕಾಲ ಸಭಾಂಗಣದಲ್ಲಿ ಕುಳಿತು ಕಾರ್ಯಕ್ರಮ ವೀಕ್ಷಿಸಿದ್ದು ನಮ್ಮ ಭಾಗ್ಯ. ಸಭಾಂಗಣದಲ್ಲಿ ಕೂರಲು ಜಾಗ ಸಿಗದಿರುವ ಪರಿಸ್ಥಿತಿ ನಿರ್ಮಾಣವಾಗಿದ್ದು ಕಾರ್ಯಕ್ರಮದ ಯಶಸ್ಸಿನ ದ್ಯೋತಕ. ನಮ್ಮ ಸಭಾಂಗಣದ ಆಸನಗಳ ಮಿತಿ 360. ಅತಿರಿಕ್ತ 150 ಆಸನ ಹಾಕಿಸಿದರೂ ಬಂದವರಿಗೆ ಕುಳಿತುಕೊಳ್ಳಲು ಆಸನಗಳಿಲ್ಲದಂತ ಪರಿಸ್ಥಿತಿಯಾಗಿ ಸುಮಾರು 110ಕ್ಕೂ ಹೆಚ್ಚು ಕನ್ನಡ ಬಂಧುಗಳು ಹೊರಗಡೆ ನಿಂತು ನೋಡುವ ಪರಿಸ್ಥಿತಿ ಸೃಷ್ಟಿಯಾಗಲು ಮೂಲ ಕಾರಣ ನಮ್ಮ ಮುಖ್ಯ ಅತಿಥಿಗಳಾಗಿ ಶ್ರೀಮತಿ ಡಾ. ಸುಧಾ ಮೂರ್ತಿ ಅಮ್ಮನವರು ಆಗಮಿಸಿದ್ದು. ದೆಹಲಿ ಕರ್ನಾಟಕ ಸಂಘಕ್ಕೆ ಒಂದು ದೊಡ್ಡ ಸ್ತಂಭವಾಗಿ ಅವರು ನಿಂತಿದ್ದಾರೆ. ದೆಹಲಿಗೆ ರಾಜ್ಯಸಭೆಯ ಸದಸ್ಯರಾಗಿ ಬಂದ ಸಂದರ್ಭದಿಂದ ನಮ್ಮ ಮನೆಯವರ ಹಾಗೆ ಸಂಘದ ಜೊತೆ ನಿಂತಿದ್ದಾರೆ. ಅಮ್ಮನವರ ಆಶೀರ್ವಾದ ಮತ್ತು ಮಾರ್ಗದರ್ಶನದಿಂದ ದೆಹಲಿ ಕರ್ನಾಟಕ ಸಂಘ ಇನ್ನೂ ಎತ್ತರಕ್ಕೆ ಬೆಳೆಯುತ್ತದೆ ಎಂಬ ನಂಬಿಕೆ ನನಗಿದೆ. ಶ್ರೀಮತಿ ಸುಧಾ ಮೂರ್ತಿ ಅವರು ದೆಹಲಿಯಲ್ಲಿ ಆರು ವರ್ಷ ಇರುತ್ತಾರೆ. ಆ ಆರು ವರ್ಷ ರಾಷ್ಟ್ರ ರಾಜಧಾನಿಯಲ್ಲಿ ದೆಹಲಿ ಕರ್ನಾಟಕ ಸಂಘವು ಮುಗಿಲಿಗೂ ಮಿಗಿಲಾಗಿ ಬೆಳೆಯಲಿ ಎಂದು ಆಶಿಸುತ್ತೇನೆ. 75 ವರ್ಷ ಅಮೃತ ಮಹೋತ್ಸವದ ಸಂಭ್ರಮದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಮತ್ತೊಂದು ಜಾಗ ಪಡೆಯುವ ಕನಸು ಕಂಡಿದ್ದೇವೆ. ಆ ಕನಸು ನನಸಾಗುತ್ತದೆ..ಎಂದು ನಂಬಿದ್ದೇನೆ. ನಿಮ್ಮೆಲ್ಲರ ಸಹಕಾರ ಆಶೀರ್ವಾದ ದೆಹಲಿ ಕರ್ನಾಟಕ ಸಂಘದ ಸದಾ ಮೇಲಿರಲಿ ಎಂದು ಬಯಸುತ್ತೇನೆ.

**ಎಲ್ಲಾದರು ಇರು ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು, ಕನ್ನಡವೇ ಸತ್ಯ ಕನ್ನಡವೇ ನಿತ್ಯ** ಎಂಬ ಕವಿವಾಣಿಯಂತೆ ಕನ್ನಡದ ಕಾರ್ಯಕ್ರಮಗಳು ರಾಷ್ಟ್ರ ರಾಜಧಾನಿಯಲ್ಲಿ ಅತಿ ಹೆಚ್ಚು ನಡೆಯಲಿ, ನಿಮ್ಮ ಆಶೀರ್ವಾದ ಇರಲಿ...

ಇನ್ನು, ಕಳೆದ ನವೆಂಬರ್ ತಿಂಗಳಿನಲ್ಲಿ ಅನೇಕ ಸಕ್ರಿಯವಾದ ಕಾರ್ಯಕ್ರಮಗಳು ನಡೆದವು. ಅದರಲ್ಲಿ ವಿಶೇಷವಾಗಿದ್ದು, ದಿನಾಂಕ 16 ರಂದು ಅಹೋರಾತ್ರಿ ನಡೆದ ಬಯಲುಸೀಮೆಯ ನಾಟಕ 'ದಕ್ಷಯಜ್ಞ'. ಈ ಪೌರಾಣಿಕ ನಾಟಕವನ್ನು ರಾಮನಗರದಿಂದ ದೆಹಲಿಗೆ ಬಂದು ತುಂಬಾ ಆಸಕ್ತಿಯಿಂದ ಪೂರ್ತಿ ನಾಟಕ ಮಾಡಿ ಸಭಿಕರ ಮೆಚ್ಚುಗೆ ಪಡೆದ ಕಲಾವಿದರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಜವಾಬ್ದಾರಿಯನ್ನು ತೆಗೆದುಕೊಂಡ ಜಂಟಿ ಕಾರ್ಯದರ್ಶಿಗಳಾದ ಶ್ರೀ ಬಿ. ನಾರಾಯಣ ಅವರಿಗೆ ಅಭಿನಂದನೆಗಳನ್ನು ತಿಳಿಸುತ್ತಿದ್ದೇನೆ.

ಬಂಧುಗಳೇ, ಪ್ರತಿ ವರ್ಷದಂತೆ ಈ ವರ್ಷವೂ ಸಹ ಗುರುಗಾಂವ್ ಕನ್ನಡ ಸಂಘಕ್ಕೆ ದೆಹಲಿ ಕರ್ನಾಟಕ ಸಂಘ ಸಂಪೂರ್ಣ ಸಹಕಾರ ನೀಡಿದೆ. ಕಳೆದ ತಿಂಗಳ 17ರಂದು ನಡೆದ ನಮ್ಮ ಸಂಘದ ಸಹಯೋಗದ ಕಾರ್ಯಕ್ರಮ ಉತ್ತಮವಾಗಿ ಮೂಡಿ ಬಂದಿದೆ. ಗುರುಗಾಂವ್ ಕನ್ನಡ ಸಂಘ ಮತ್ತು ದೆಹಲಿ ಕರ್ನಾಟಕ ಸಂಘದ ಎಲ್ಲಾ ಪದಾಧಿಕಾರಿಗಳಿಗೆ, ದೆಹಲಿಯಿಂದ ಬಂದು ಕಾರ್ಯಕ್ರಮವನ್ನು ನೋಡಿದ ಎಲ್ಲಾ ಪ್ರೇಕ್ಷಕರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಕರ್ನಾಟಕ ಸರ್ಕಾರ ಕರ್ನಾಟಕ ಭವನದ ವತಿಯಿಂದ ಸಂಘದ ಸಭಾಂಗಣದಲ್ಲಿ ನಡೆದ ರಾಜ್ಯೋತ್ಸವ ಕಾರ್ಯಕ್ರಮವೂ ಸಹಾ ಅತ್ಯಂತ ಸುಂದರವಾಗಿ ಆಯೋಜನೆಗೊಂಡಿದೆ. ಶ್ರಮಿಸಿದ ಕರ್ನಾಟಕದ ಭವನದ ಎಲ್ಲಾ ಸಿಬ್ಬಂದಿಗೆ ವಿಶೇಷವಾಗಿ ನಿವಾಸಿ ಆಯುಕ್ತರಿಗೆ ಅಭಿನಂದನೆಗಳು ಮತ್ತು ಧನ್ಯವಾದಗಳು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ತರಬೇತಿ ನೀಡಿ ಮಾಡಿಸಿದ ಶ್ರೀ ಎಸ್. ರಮೇಶ ಅವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಬಾರಿಸು ಕನ್ನಡ ಡಿಂಡಿಮವ... ಓ ಕರ್ನಾಟಕ ಹೃದಯ ಶಿವ... ಸತ್ತಂತಿರುವವರನ್ನು ಬಡಿದೆಚ್ಚರಿಸು... ಕಚ್ಚಾಡುವವರನು ಕೂಡಿಸಿ ಒಲಿಸು** ಎಂದು ಕವಿಯ ಆಶಯದಂತೆ ರಾಷ್ಟ್ರ ರಾಜಧಾನಿಯಲ್ಲಿ ಕನ್ನಡಕ್ಕೆ ದುಡಿಯುವ ಎಲ್ಲಾ ನನ್ನ ಕನ್ನಡ ಬಂಧುಗಳಿಗೆ ಮತ್ತೊಮ್ಮೆ ರಾಜ್ಯೋತ್ಸವ ಸಂದರ್ಭದಲ್ಲಿ ಅಭಿನಂದನೆಗಳು.

ಮುಂಬರುವ ದಿನಗಳಲ್ಲಿ ವಿಶೇಷವಾಗಿ ಆಹಾರ ಮೇಳ ಜೊತೆಗೆ ಪ್ರತಿ ವರ್ಷದಂತೆ ಎಲ್ಲ ಕನ್ನಡಿಗರು ಸೇರಿ ಹೊರರಾಜ್ಯದ ನಗರಗಳಿಗೆ ಒಂದು ದೊಡ್ಡ ತಂಡವನ್ನು ಪಿಕ್‌ನಿಕ್‌ಗೆ ಕರೆದುಕೊಂಡು ಹೋಗಿ ಬರುವ ಕಾರ್ಯಕ್ರಮ ಆಯೋಜನೆ ಮಾಡುತ್ತಿದ್ದೇವೆ. ಅದರ ದಿನಾಂಕವನ್ನು ಮುಂದೆ ತಿಳಿಸುತ್ತೇವೆ. ಕನ್ನಡ ಮನಸುಗಳು ಒಂದಾಗಿ. ಎಲ್ಲರೂ ಭಾಗಿಯಾಗಿ.

**ಪಿಡಿ ಗಳಿಸು ಭುಜಿಸೊಡೆಯನಾಗೆನ್ನುವುದು ಮೋಹ ।**
**ಕೊಡು ಸಲಿಸು ಸೇವೆಗೈಯೆನ್ನುವುದು ಕರುಣೆ ।**
**ಬಿಡು ನೀನು ನಾನುಗಳ, ವಿಶ್ವಾತ್ಮಪದವನೀ ।**
**ನಡರೆನ್ನುವುದು ಶಾಂತಿ-ಮಂಕುತಿಮ್ಮ ॥**

ಜೀವನದ ಯಾವ ಗುರಿ ಇಟ್ಟುಕೊಳ್ಳಬೇಕೆಂಬ ತತ್ವ ಸಾರುವ ಮಾನ್ಯ ಡಿ. ವಿ. ಗುಂಡಪ್ಪನವರ ಮಂಕುತಿಮ್ಮನ ಈ ಕಗ್ಗದಿಂದ ಈ ತಿಂಗಳ ಅಧ್ಯಕ್ಷರ ನುಡಿ ಮುಗಿಸುತ್ತಿದ್ದೇನೆ.

ಜೈ ಕರ್ನಾಟಕ ಮಾತೆ..
ಜೈ ಭುವನೇಶ್ವರಿ.....

***ಸಿ.ಎಂ. ನಾಗರಾಜ***
ಅಧ್ಯಕ್ಷರು

## ಮುನ್ನೋಟ

ಆತ್ಮೀಯರೇ,

**ಕನ್ನಡ ಭಾಷೆಯ ಪ್ರಾಚೀನತೆಯ ಸ್ಪಷ್ಟತೆ ನಿಗೂಢ.**

ಅಶೋಕ ಚಕ್ರವರ್ತಿಯ ಕಾಲಮಾನದ ಶಾಸನಗಳಲ್ಲೂ ಕನ್ನಡ ನಾಡು ಮತ್ತು ನುಡಿಯ ಉಲ್ಲೇಖ ಮಾಡಿರುವುದು ಕ್ರಿ.ಪೂರ್ವದಿಂದಲೂ ಕನ್ನಡ ಬಳಕೆಯಲ್ಲಿರುವ ಸೂಚನೆ ನಮಗೆ ಸಿಗುತ್ತಾದರೂ ದಾಖಲೆಯ ಪ್ರಕಾರ ಐದನೆಯ ಶತಮಾನದ ಹಲ್ಮಿಡಿ ಶಾಸನವೇ ಕನ್ನಡದ ಮೊಟ್ಟಮೊದಲ ಶಾಸನವಾಗಿದೆ. ಅಂದಿನಿಂದ ಇಂದಿನವರೆಗಿನ ನಾಡು ನುಡಿಯ ವೈಭವವನ್ನು ನಾವು ಅಸಂಖ್ಯಾತ ಸಾಹಿತ್ಯ ರೂಪಗಳಲ್ಲಿ ಕಾಣಬಹುದು.

ಕರುನಾಡು ಮತ್ತು ಕನ್ನಡ ಭಾಷೆ ಶತಮಾನಗಳಿಂದ ಅನೇಕ ಮಾರ್ಪಾಡುಗಳನ್ನು ಕಂಡಿದ್ದು ಹಳೆಗನ್ನಡ, ನಡುಗನ್ನಡ ಮತ್ತು ನವ್ಯಗನ್ನಡದ ಸವಿ ಬೇರ್ಯಾವ ಭಾಷೆಯಲ್ಲೂ ಬಹುಷಃ ಸಿಗಲಾರದು. ಶ್ರೇಷ್ಠ ವಿದ್ವಾಂಸರು, ಬರಹಗಾರರು ಮತ್ತ ಚಿಂತಕರಲ್ಲಿ ಒಬ್ಬರಾದ ವಿನೋಭ ಭಾವೆ ಅವರು ಕನ್ನಡವನ್ನು ಲಿಪಿಗಳ ರಾಣಿ ಎಂದು ಕರೆದಿದ್ದರು.

ನಾವು ಭಾಷಾವಾರು ರಾಜ್ಯವಿಂಗಡನೆಯ 69ನೇ ಕರ್ನಾಟಕ ರಾಜ್ಯೋತ್ಸವವನ್ನು ರಾಜಧಾನಿಯ ಕನ್ನಡಿಗರು ವಿಜೃಂಭಣೆಯಿಂದ ಆಚರಿಸಿದ್ದೇವೆ. ಅಹೋರಾತ್ರಿಯ **ದಕ್ಷಯಜ್ಞ** ಪೌರಾಣಿಕ ನಾಟಕ ಎಲ್ಲಾ ವಯೋಮಾನದವರ ಮನಸೂರೆಗೊಂಡರೆ ಸುಮಾರು 130–135 ರಾಜಧಾನಿಯ ಕನ್ನಡ ಕಲಾವಿದರು ವಿವಿಧ ಕನ್ನಡ ಜನಪದ, ಶಾಸ್ತ್ರೀಯ, ಸಿನಿಮಾ ಮತ್ತು ಇನ್ನಿತರ ಹಾಡುಗಳಿಗೆ ಒಂದಕ್ಕಿಂತ ಒಂದು ಅದ್ಭುತ ನೃತ್ಯ ಪ್ರದರ್ಶನ ನೀಡಿ ಮುಖ್ಯ ಅತಿಥಿಗಳಾದ ಮಾನ್ಯ ರಾಜ್ಯ ಸಭಾ ಸಂಸದೆ ಶ್ರೀಮತಿ ಸುಧಾ ಮೂರ್ತಿ ಅವರ ಮನಸೂರೆಗೊಂಡರು. ಎಂದಿನಂತೆ ಈ ವರ್ಷವೂ ವಿದ್ಯಾರ್ಥಿ ವೇತನವನ್ನು ಕನ್ನಡ ಮಕ್ಕಳಿಗೆ ನೀಡಿ ಪ್ರೋತ್ಸಾಹಿಸಲಾಯಿತು.

ಇನ್ನೂ ಮುಂದವರಿದರೆ ಸುಮಾರು ಯೋಜನೆಗಳು ನಮ್ಮ ಪಟ್ಟಿಯಲ್ಲಿದ್ದು, ಅದರಲ್ಲಿ ಆಟೋಟ ಸ್ಪರ್ಧೆಗಳು, ಆಹಾರ ಮೇಳ, ಹೊರರಾಜ್ಯ ನಗರಗಳಿಗೆ ಪ್ರವಾಸ ಮತ್ತು ಇನ್ನೂ ಮುಂತಾದವುಗಳಿಗೆ ತಾವುಗಳು ಸ್ಪಂದಿಸಿ ಪ್ರತಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಹೊರನಾಡಿನಲ್ಲಿ ಊದುವ ಕನ್ನಡದ ಕಹಳೆ ಇಡೀ ವಿಶ್ವದ ಗಮನ ಸೆಳೆಯುವಂತೆ ಮಾಡೋಣವೆಂದು ನಿಮ್ಮಲ್ಲಿ ಮನವಿ ಮಾಡುತ್ತೇನೆ.

ಕನ್ನಡ ತಾಯಿಯ ಮಕ್ಕಳು ನಾವು ಕನ್ನಡ ಬಳಸುತ ಬಂದೆವು, ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ ಎಂದೆವು.

***ಜೈ ಭುವನೇಶ್ವರಿ***

***ರಾಧಾಕೃಷ್ಣ***
*ಪ್ರಧಾನ ಕಾರ್ಯದರ್ಶಿ*

2ನೇ ಪುಟದಿಂದ...

ದೆಹಲಿಯ ರಾಜಭವನದ ಮುಂಭಾಗದ ಅಂಗಳದಲ್ಲಿ 09.11.2024ರ ಸಂಜೆ 5.00 ಗಂಟೆಯ ಸುಮಾರಿಗೆ ದೆಹಲಿ ಉಪ ರಾಜ್ಯಪಾಲರು, ಅವರ ಪತ್ನಿ ಶೀಮತಿ ಸಂಗೀತ ಸಕ್ಸೆನಾ ಹಾಗು ದೆಹಲಿಯ ಮುಖ್ಯಮಂತ್ರಿ ಶ್ರೀಮತಿ ಆತಿಷಿ ಸಿಂಗ್ ಅವರ ಘನ ಉಪಸ್ಥಿತಿಯಲ್ಲಿ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ನಂತರ ಕಾರ್ಯಕ್ರಮಕ್ಕೆ ಆಗಮಿಸಿದ್ದ ದೆಹಲಿಯ ಆಯಾ ರಾಜ್ಯಗಳ ಪ್ರತಿನಿಧಿಗಳು ಮತ್ತು ಅಧಿಕಾರಿ ಗಣ್ಯರು ಉಪರಾಜ್ಯಪಾಲರಿಗೆ ಗೌರವ ಸಮರ್ಪಣೆ ಮಾಡಿದರು. ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘದ ವತಿಯಿಂದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಮತ್ತು ಶ್ರೀಮತಿ ಜಯಶ್ರೀ ಬಸವರಾಜು ಅವರು ಉಪರಾಜ್ಯಪಾಲ ಶ್ರೀ ವಿ.ಕೆ. ಸಕ್ಸೇನಾ ಅವರಿಗೆ, ಪುಷ್ಪ ಗುಚ್ಛ ನೀಡಿ, ಶಾಲು ಹೊದಿಸಿ, ಹಾರ, ಮೈಸೂರು ಪೇಟ ತೋಡಿಸಿ, ಸಂಘದ ಸ್ಮರಣ ಸಂಚಿಕೆ ಮತ್ತು ಅಭಿಮತ ಪತ್ರಿಕೆಯ ಸಂಚಿಕೆಗಳನ್ನು ನೀಡಿ ಅಭಿನಂದಿಸಿದರು.

ನಂತರ ಆಯಾ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಸ್ತುತಿಗೊಂಡವು. ಕರ್ನಾಟಕ ರಾಜ್ಯದ ಪರವಾಗಿ ನೀಡಿದ ಪ್ರಸ್ತುತಿ ಕು. ಹರ್ಷಿತ ಕುಶಾಲಪ್ಪ ಸಂಯೋಜನೆ ಮಾಡಿದ ಜಕಣಕ...ಹಾಡಿಗೆ ಅವರೊಂದಿಗೆ ಕನ್ನಡ ಮಕ್ಕಳು, ಮಹಿಳೆಯರು ನೀಡಿದ ಅಮೋಘ ಸಮೂಹ ನೃತ್ಯ ಪ್ರದರ್ಶನ ನೆರೆದಿದ್ದವರ ಪ್ರಶಂಸೆಗೆ ಪಾತ್ರವಾಯಿತು.

ಪ್ರಸ್ತುತಗೊಂಡ ಕೆಳಗಿನ ಇತರ ರಾಜ್ಯಗಳ ಪ್ರದರ್ಶನಗಳು ಸಹಾ ಎಲ್ಲರ ಮೆಚ್ಚುಗೆ ಪಡೆದವು :

ದೆಹಲಿ–ಫಿಯಾನೋ ವಾದನ, ತಮಿಳುನಾಡು–ಭರತ ನಾಟ್ಯ ಆಂಧ್ರ ಪ್ರದೇಶ–ಕೂಚಿಪುಡಿ ನೃತ್ಯ, ಛತ್ತೀಸ್‌ಗಡ–ಕರ್ಮ ನೃತ್ಯ, ಹರಿಯಾಣ–ಬೀರ್ (ಬೀನ್) ನೂರ್ ತುಂಭಾ ನೃತ್ಯ, ಜಾರ್ಖಂಡ್–ಸ್ವಾಗತ್ ಗೀತ್ ನೃತ್ಯ, ಪಂಜಾಬ್–ಭಾಂಗ್ರಾ ನೃತ್ಯ, ಮಧ್ಯಪ್ರದೇಶ–ಬದಾಯಿ ನೃತ್ಯ, ಉತ್ತರಾಖಂಡ್–ತಾಂಡ್ಯಾ ನೃತ್ಯ, ಕೇರಳ–ನಟತಂ ತಿರುವತಿರ ನೃತ್ಯ, ಜಮ್ಮು ಮತ್ತು ಕಾಶ್ಮೀರ–ಡೋಗ್ರಿ ನೃತ್ಯ, ಪಾಂಡಿಚೇರಿ–ಪ್ರಭಾಧವ್ ಧ್ಯಾನ್ ನೃತ್ಯ ವೇದಿಕೆಯ ಮೇಲೆ ಪ್ರಸ್ತುತಿಯಾದವು.




ನಂತರ ಎಲ್ಲರನ್ನು ಉದ್ದೇಶಿಸಿ ಮಾತನಾಡಿದ ಉಪ ರಾಜ್ಯಪಾಲ ಶ್ರೀ ವಿ.ಕೆ. ಸಕ್ಸೇನಾ ಅವರು ಮೊದಲಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ದೆಹಲಿಯ ಮುಖ್ಯಮಂತ್ರಿ ಶ್ರೀಮತಿ ಆತಿಷಿ ಸಿಂಗ್ ಅವರಿಗೆ, ಎಲ್ಲಾ ವಿಶಿಷ್ಟ ಅತಿಥಿ ಗಣ್ಯರಿಗೆ, ವಿವಿಧ ರಾಜ್ಯಗಳ ಮತ್ತು ಕೇಂದ್ರಾಳಿತ ಪ್ರದೇಶಗಳ ಪ್ರತಿನಿಧಿಗಳಿಗೆ, ಕಲಾವಿದರಿಗೆ ಸ್ವಾಗತ ಕೋರುತ್ತಾ ರಾಜಭವನದಲ್ಲಿ ಈ ರೀತಿಯ ಸ್ನೇಹಕಾರಿ, ಸ್ನೇಹ ಪ್ರೇರಣಾ ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ಪ್ರತಿಯೊಬ್ಬರಿಗೂ ತಾವು ಕೃತಾರ್ಥನಾಗಿದ್ದೇನೆ, ಕಲಾವಿದರ ಎನರ್ಜಿ ಅದ್ಭುತ ಪ್ರದರ್ಶನ ನೋಡಿ ಹೇಗೆ ಹೊಗಳಬೇಕು ಎನ್ನಲು ಶಬ್ದಗಳೇ ಬರುತ್ತಿಲ್ಲಾ, ಏಕ್ ಅಲಗ್ ಕಾ ಪೆಹಚಾನ್ ಹೈ, ವಿವಿಧತೆ ಮೆ ಏಕ್ ಭಾರತೀಯ ಜೈಸೆ ಭಾವನಾ ಆ ರಹಿ ಹೈ, ದಿಲ್ಲಿ ದೇಶ್ ಕಾ ದಿಲ್ ಹೈ, ಸಭೀ ರಾಜ್ಯೋನ್ಕ ಲೋಗ್ ದಿಲ್ಲಿ ಮೆ ಸದ್ಭಾವನಾ ಸೆ ರೆಹತೆ ಹೈ, ದಿಲ್ಲಿ ಗಲಿಯೋನ್ಕಿ ಶಹರ್ ಹೈ, ಯಹಾ ಸಖೂನ್ ಹೈ, ಅಮೀರ್ ಖುಸ್ರು ವರ್ಣನ್ ಕಿಯಾ ಜೈಸೆ ಏ ಧರ್ತಿ ಕಾ ಸ್ವರ್ಗ ಹೈ ಎಂದರು.

ಮುಂದುವರಿಯುತ್ತಾ, ವಿವಿಧ ರಾಜ್ಯಗಳ ವಿಶೇಷತೆಗಳನ್ನು ಹಾಗೂ ಭಾರತದ ವಿವಿಧತೆಯಲ್ಲಿ ಏಕತೆ ಇರುವುದನ್ನು ವಿವರಿಸಿದ ಉಪರಾಜ್ಯಪಾಲರು, ದೇಶ್ ಕಿತನೇ ಭೀ ವಿವಿಧತಾ ಸೇ ಭರೆ ಹೋ, ಏಕತಾ ಭಾರತ್ ಕಾ ಹೈ, ಭಾರತ್ ವಿಶ್ವಗುರು ಹೈ, ಅಹಿಂಸಾ ಏಕ್ ಧೃಢತಾ ಕಾ ಮೂಲ್ ಮಂತ್ರ ಹೈ, 'ಏಕ್ ಭಾರತ್ ಶ್ರೇಷ್ಠ ಭಾರತ್' ಥೀಮ್ ಘೋಷಣೆ ನೀಡಿದ ಪ್ರಧಾನಿ ಶ್ರೀ ಮೋದಿಜಿ ಕೊ ಧನ್ಯವಾದ್ ದೇತಾ ಹೂಂ ಎಂದರು. ಇಂದು ವಿವಿಧ ರಾಜ್ಯಗಳ ಸಂಸ್ಥಾಪನಾ ದಿನದ ಆಚರಣೆಯಲ್ಲಿ ದೇಶ್ ಕಾ ಖೂಭಿಯಾ ದೇಖ್ನೇಕು ಮಿಲಾ ಸಭೀ ಕಲಾವಿದೋನ್ ಕಾ ಚಹರೆ ಮೆ ಖುಷಿಯಾ ದಿಕ್ ರಹಾ ತಾ, ಆಜ್ ಯಹಾ ಪ್ರಸ್ತುತಿ ದಿಯಾ ಸಭೀ ಕಲಾಕಾರೋನ್ ಕಾ ದಿಲ್ ಸೆ ಅಭಿನಂದನ್ ಕರ್ತಾ ಹ್ನೂ, ಆಪ್ ಲೋಗ್ ಆಜ್ ರಾಜಭವನ್ ಕಾ ಶೋಭಾ ಬಡಾಯಿ, ರಾಜಭವನ್ ಆಪ್ ಸಭ್ ಕಾ ಹೈ, ಕೋಯಿ ಭೀ ಸಮಸ್ಯಾ ಹೋ, ಆಪ್ ಮೆರೇ ಸೆ ಸೀದಾ ಮಿಲ್ ಸಕ್ತೆ ಹೈ ಸಭೀ ರಾಜ್ಯೋಂಕ, ಕೇಂದ್ರ ಪ್ರಶಾಸನ್ ಪ್ರದೇಶೋಂಕ ಸ್ಥಾಪನಾ ದಿನ್ ಕಾ ಹಾರ್ದಿಕ್ ಅಭಿನಂದನ್ ಕರ್ತಾ ಹ್ನೂ ಜೈ ಹಿಂದ್ ಎಂದು ಹೇಳಿ ಉಪ ರಾಜ್ಯಪಾಲರು ತಮ್ಮ ಭಾಷಣ ಮುಗಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ದೆಹಲಿಯ ಉಪ ರಾಜ್ಯಪಾಲರು ಹಾಗು ಮುಖ್ಯಮಂತ್ರಿಯವರೊಂದಿಗೆ ದೆಹಲಿಯ ನಮ್ಮ ಕಲಾವಿದರು ಹಾಗು ದೆಹಲಿ ಕನ್ನಡಿಗರು ಸಮೂಹ ಛಾಯಾ ಚಿತ್ರ ತೆಗೆದುಕೊಂಡರು, ಇತರ ರಾಜ್ಯದವರಿಗೂ ಈ ಅವಕಾಶ ಕಲ್ಪಿಸಿಕೊಡಲಾಗಿತ್ತು. ರಾಷ್ಟ್ರ ಗೀತೆಯೊಂದಿಗೆ ಸಭಾ ಕಾರ್ಯಕ್ರಮ ಮುಕ್ತಾಯಗೊಂಡಿತು. ಆಗಮಿಸಿದ್ದ ಎಲ್ಲರಿಗೂ ಕಾಫಿ ಟೀ ಮತ್ತು ಉಪಹಾರಗಳ ವ್ಯವಸ್ಥೆಯನ್ನು ಆಯೋಜಕರಿಂದ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರೂ ಕರ್ನಾಟಕ ರಾಜ್ಯದ ಸ್ಥಾಪನಾ ದಿನವನ್ನು ದೆಹಲಿಯ ಉಪ ರಾಜ್ಯಪಾಲರು ಹಾಗು ಮುಖ್ಯ ಮಂತ್ರಿಯವರೊಂದಿಗೆ ಆಚರಿಸಿದ ಸಂತೋಷದ ಕ್ಷಣಗಳಿಗೆ ಸಾಕ್ಷಿಯಾದರು.❑

***ಅಭಿಮತ ವರದಿ***

# 'ದೆಹಲಿ ಕರ್ನಾಟಕ ಸಂಘದಲ್ಲಿ'
## ವಿಜೃಂಭಣೆಯ ಕರ್ನಾಟಕ ರಾಜ್ಯೋತ್ಸವ ಸಂಭ್ರಮ'




69ನೇ ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘವು ದಿನಾಂಕ 24.11.2024 ರಂದು ಆಯೋಜಿಸಿತ್ತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಮಾನ್ಯ ರಾಜ್ಯಸಭಾ ಸಂಸದೆ ಪದ್ಮಭೂಷಣ ಶ್ರೀಮತಿ (ಡಾ.) ಸುಧಾ ಮೂರ್ತಿ ಹಾಗೂ ವಿಶೇಷ ಅತಿಥಿಗಳಾಗಿ ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿಗಳಾದ ಡಾ. ಕೆ.ಜೆ. ಶ್ರೀನಿವಾಸ್ ಅವರು ಆಗಮಿಸಿದ್ದರು. ಸಂಘಕ್ಕೆ ಮತ್ತು ಕನ್ನಡಿಗರಿಗೆ ಮಾಡಿದ ಸೇವೆಯನ್ನು ಗುರುತಿಸಿ ಇಲ್ಲಿನ ಹಿರಿಯ ಕನ್ನಡಿಗರಿಗೆ ಮತ್ತು ಸಾಧಕರಿಗೆ ಪ್ರತಿ ವರ್ಷ ಸಂಘದಿಂದ ರಾಜ್ಯೋತ್ಸವ ಸಂಧರ್ಭದಲ್ಲಿ ಪ್ರದಾನ ಮಾಡುವ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಗೆ ಈ ಬಾರಿ ಭಾಜನರಾದ ಶ್ರೀ ಸರವು ಕೃಷ್ಣ ಭಟ್, ಡಾ. ಕೆ.ಎಸ್. ಸೋಮಶೇಖರ್, ಶ್ರೀ ಬಸ್ತಿ ದಿನೇಶ್ ಶೆಣೈ ಹಾಗೂ ಶ್ರೀಮತಿ ರಾಜೇಶ್ವರಿ ಭಟ್ ಅವರು ಉಪಸ್ಥಿತರಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ವಹಿಸಿದ್ದರು, ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರು ವೇದಿಕೆ ಮೇಲಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ನಿರ್ವಹಿಸಿದರು.

ಸಂಘದ ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿಯ ಮಹಿಳಾ ಪದಾಧಿಕಾರಿಗಳು ಮತ್ತು ಸದಸ್ಯೆಯರು ನಾಡಗೀತೆಗೆ ಧ್ವನಿಯಾದರು, ಸಭಿಕರು ಮತ್ತು ಗಣ್ಯರು ಎದ್ದು ನಿಂತು ತಾಯಿ ಭುವನೇಶ್ವರಿಗೆ ನಮಿಸಿದರು. ಅತಿಥಿ ಗಣ್ಯರಿಂದ ದೀಪ ಪ್ರಜ್ವಲನೆಯೊಂದಿಗೆ ಸಭಾ ಕಾರ್ಯಕ್ರಮವು ಪ್ರಾರಂಭಗೊಂಡಿತು.

'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ಅತಿಥಿಗಳಿಂದ ನಾಲ್ಕು ಸಾಧಕರಿಗೆ ಪ್ರದಾನ ಮಾಡಿ ಗೌರವಿಸಲಾಯಿತು. ಪ್ರಶಸ್ತಿಗೆ ಭಾಜನರಾದ ಶ್ರೀ ಸರವು ಕೃಷ್ಣ ಭಟ್, ಡಾ. ಕೆ.ಎಸ್. ಸೋಮಶೇಖರ್, ಶ್ರೀ ಬಸ್ತಿ ದಿನೇಶ್ ಶೆಣೈ ಹಾಗೂ ಶ್ರೀಮತಿ ರಾಜೇಶ್ವರಿ ಭಟ್ ಅವರ ಪರಿಚಯವನ್ನು ಕ್ರಮವಾಗಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ, ಜಂಟಿ ಕಾರ್ಯದರ್ಶಿ ಶ್ರೀ ನಾರಾಯಣ ಬಿ. ಸದಸ್ಯ ಶ್ರೀ ಕೆ.ಎಸ್. ಮೂರ್ತಿ ಮತ್ತು ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರುಗಳು ಮಾಡಿಕೊಟ್ಟರು.



'ಪ್ರಶಸ್ತಿ ಸ್ವೀಕರಿಸಿ ಮೊದಲು ಮಾತನಾಡಿದ **ಶ್ರೀ ಸರವು ಕೃಷ್ಣ ಭಟ್** ಅವರು ಕೊಡುಗೆ ಕೊಡುಗೈ ಎಂಬ ಪದಕ್ಕೆ ಭಾಷ್ಯ ಬರೆದಂತಹ ನಮ್ಮ ಹಿರಿಯರು, ಜನರ ಬದುಕಿಗೆ ಬಾಳಿಗೆ ಕಲೆಗೆ ಸಂಸ್ಕೃತಿಗೆ ಕೊಡುಗೆಯನ್ನು ನೀಡಿದಂತಹ ಡಾ. ಶ್ರೀಮತಿ ಸುಧಾ ಮೂರ್ತಿ ಅವರನ್ನು ಸಂಬೋಧಿಸುತ್ತಾ, ದೆಹಲಿ ಕರ್ನಾಟಕ ಸಂಘ ನನ್ನ ಮನೆ ಎಂದು ತಿಳಿದುಕೊಂಡಿದ್ದೇನೆ. ಆ ದೃಷ್ಟಿಯಿಂದ ಮನೆಯಿಂದ ನೀಡಿದಂತಹ ಆಶೀರ್ವಾದ ಸನ್ಮಾನ ಏನಿದ್ದರೂ ಕೂಡ ಅದು ಯಾವಾಗಲೂ ನೆನಪಾಗಿ ಉಳಿಯುವಂತದ್ದು, ಆ ದೃಷ್ಟಿಯಿಂದ ನನಗಿದು ಧನ್ಯತೆಯ ನೆನಪನ್ನು ಮಾಡಿಕೊಡುತ್ತಿದೆ, ಧನ್ಯತೆಯನ್ನು ತಂದಿದೆ ಎಂದರು. ಸಂಸ್ಥೆಯೊಂದು ಬೆಳೆಯಬೇಕು ಎಂದಾದರೆ ನಿಧಿ, ನಿಯತ್ತು, ನಿರ್ವಹಣೆ ಈ ಮೂರು ವಿಷಯಗಳು ಬಹಳ ಮುಖ್ಯವಾಗುತ್ತವೆ. ಈ ಮೂರನ್ನು ದೆಹಲಿ ಕರ್ನಾಟಕ ಸಂಘ ಈ 75 ವರ್ಷಗಳ ಇತಿಹಾಸದಲ್ಲಿ ಉಳಿಸಿಕೊಂಡು ಬಂದಿದೆ. ಇಂದು ನಿಯತ್ತು, ನಿಧಿ ಜೊತೆಗೆ ನಿರ್ವಹಣೆ ಶ್ರೀ ಸಿ.ಎಂ. ನಾಗರಾಜ ಅವರ ಅಧ್ಯಕ್ಷತೆಯಲ್ಲಿ ಬಹಳ ಜೋರಾಗಿ ನಡೆಯುತ್ತಿದೆ. ಆ ದೃಷ್ಟಿಯಿಂದ ಇಂದು ಸಂಘ ಪರಿಪೂರ್ಣ ಸಂಸ್ಥೆಯಾಗಿ ಬೆಳೆಯುವುದಕ್ಕೆ ಬೇಕಾದ ಎಲ್ಲಾ ನಿಧಿ ಇದೆ, ಜನಪ್ರತಿನಿಧಿ ಇದೆ, ಧನ ನಿಧಿ, ಕನ್ನಡದ ಮನಸುಗಳಿವೆ. ಹಾಗಾಗಿ ನಮ್ಮ ದೆಹಲಿ ಕರ್ನಾಟಕ ಸಂಘ ರಾಷ್ಟದಲ್ಲಿ ಮಾತ್ರವಲ್ಲದೇ ಪ್ರಪಂಚದಲ್ಲಿಯೇ ಮೇರು ಕನ್ನಡ ಸಂಘವಾಗಿ ಬೆಳೆಯುವುದರಲ್ಲಿ ಯಾವುದೇ ಸಂದೇಹ ಸಂಶಯವು ಇಲ್ಲ ಎಂದರು.

ಮುಂದುವರಿಯುತ್ತಾ, ಪ್ರಾರಂಭದಲ್ಲಿ ನಿಯತ್ತಿನಲ್ಲಿ ಇದು ಒಂದು ಚಿಕ್ಕ ಸಂಘವಾಗಿ ಬೆಳೆದರೂ ಕೂಡ ಪ್ರಸ್ತುತ ಸಿ.ಎಂ. ನಾಗರಾಜ ಅವರ ಅಧ್ಯಕ್ಷತೆಯಲ್ಲಿ ನಿರ್ವಹಣೆಗೆ ಬೇಕಾದ ನಿಧಿ ಸಂಗ್ರಹವು ಸಾಕಷ್ಟು ಆಗಿದೆ. 75ನೇ ವರ್ಷದ ಹಬ್ಬವಾಗಿದೆ. ಇತಿಹಾಸದಲ್ಲಿ ಎಂದೂ ಕಂಡರಿಯದಂತಹಒಂದು ಅಮೃತ ಮಹೋತ್ಸವದ ಕಾರ್ಯಕ್ರಮವನ್ನು ನಾವು ನೋಡಿದ್ದೇವೆ. ಅದು ನಮ್ಮ ಬದುಕಿನಲ್ಲಿ ಎಂದೂ ಮರೆಯಲಾಗದಂತಹ ಸತ್ಯ. ಸಿ.ಎಂ. ನಾಗರಾಜರ ಅಧ್ಯಕ್ಷತೆಯಲ್ಲಿ ಸಂಘ ಇನ್ನೂ ಬೆಳೆಯಲಿ. ಈಗ ಕಾರ್ಯಕಾರಿ ಸಮಿತಿಯಲ್ಲಿ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಡಾ. ವೆಂಕಟಾಚಲ ಹೆಗಡೆ ಅವರಂತಹ ಅನುಭವೀ ಹಿರಿಯರಿದ್ದಾರೆ, ಕಾರ್ಯಕಾರಿ ಸಮಿತಿಯಲ್ಲಿ ಇಷ್ಟೊಂದು ಅನುಭವಸ್ಥರು ಇರುವುದು ಇದೇ ಮೊದಲು. ಅವರ ಮಾರ್ಗದರ್ಶನದೊಂದಿಗೆ ಸಂಘ ಮುಂದುವರಿಯಬೇಕು, ನಿಧಿ, ನಿಯತ್ತು ನಿರ್ವಹಣೆ ಜೊತೆ ಜೊತೆಗೆ ಬಹಳ ಅಗತ್ಯವಾದ ಮುಂದಿನ ಕೆಲಸವಾದ ರಕ್ಷಣೆಯನ್ನು ಮಾಡಬೇಕಾದದ್ದು

ಸಹಾ ಬಳ ಮುಖ್ಯ. ಸಂಘ ದೊಡ್ಡದಾಗಿ ಬೆಳೆದಾಗ ಅದನ್ನುಕಾಪಾಡಿಕೊಂಡು ಬರಬೇಕಾಗಿದ್ದುದು ನಿರ್ವಹಣೆ ಈ ಸ್ಥಿತಿಯಲ್ಲಿ ನಿಮ್ಮೆಲ್ಲರ ಸಹಕಾರ ಇರಲಿ, ಸಂಘ ಇನ್ನೂ ಎತ್ತರಕ್ಕೆ ಬೆಳೆಯುತ್ತಾ ಹೋಗಲಿ ಎಂದು ಆಶಿಸಿದರು.

ಸಮುದ್ರದ ಬಗ್ಗೆ ಕಥೆಯೊಂದನ್ನು ವಿವರಿಸುತ್ತಾ, ಸಮುದ್ರದ ಬದಿಯಲ್ಲಿ ಆಡುತ್ತಿದ್ದ ಮಗುವಿನ ಬೂಟನ್ನು ತೆರೆಯೊಂದು ಅಪ್ಪಳಿಸಿ ಕೊಂಡೊಯ್ದಾಗ ಸಮುದ್ರದ ಕುರಿತಾದ ಮಗುವಿನ ನಿಲುವು, ಈಜಲು ಬಾರದ ಮುದುಕನೊಬ್ಬ ಸಮುದ್ರಕ್ಕಳಿದು ಸಾವನ್ನಪ್ಪಿದಾಗ ಅದನ್ನು ನೋಡುತ್ತಿದ್ದ ಅವನ ಪತ್ನಿಯ ವೇದನೆಯ ನಿಲುವು, ದೊಡ್ಡ ಮೀನೊಂದು ಲಭಿಸಿದಾಗ ಮೀನುಗಾರನ ಸಂತಸದ ನಿಲುವು, ಸಮುದ್ರ ತಟದಲ್ಲಿ ರತ್ನದೊಂದು ಲಭಿಸಿದಾಗ ವ್ಯಕ್ತಿಯೊಬ್ಬನ ನಿಲುವು ಎಲ್ಲವೂ ಬೇರೆ ಬೇರೆ ಆಯಾಮವನ್ನು ಹೊಂದಿದ್ದರೂ, ಸಮುದ್ರ ಸಮುದ್ರವಾಗಿಯೇ ತನ್ನ ಗಾಂಭೀರ್ಯತೆಯನ್ನು ಗುಣವನ್ನು ತೋರಿಸುತ್ತಿದೆ ಎಂದು ಸಂಘದ ಕುರಿತು ಮಾರ್ಮಿಕವಾಗಿಯೇ ನುಡಿದ ಕೃಷ್ಣ ಭಟ್ ಅವರು ಸ್ಥಳೀಯ ಪ್ರತಿಭೆಗಳ ಭಾಗವಹಿಸುವಿಕೆಗೆ ಸಂತೋಷ ವ್ಯಕ್ತಪಡಿಸಿ ಪ್ರಶಸ್ತಿ ನೀಡಿದ್ದಕ್ಕೆ ಧನ್ಯವಾದ ಹೇಳಿದರು.



ಪ್ರಶಸ್ತಿ ಸ್ವೀಕರಿಸಿದ ಮತ್ತೋರ್ವ **ಡಾ. ಕೆ.ಎಸ್. ಸೋಮಶೇಖರ್** ಅವರು ಮಾತನಾಡುತ್ತಾ ಈ ವಿಶಿಷ್ಟ ಕನ್ನಡಿಗ ಪ್ರಶಸ್ತಿಗೆ ತಮ್ಮನ್ನು ಆಯ್ಕೆ ಮಾಡಿದ್ದಕ್ಕೆ ತಾವು ಆಭಾರಿಯಾಗಿದ್ದು ಎಲ್ಲರಿಗೂ ಧನ್ಯವಾದ ಗಳನ್ನು ತಿಳಿಸುತ್ತೇನೆ ಎಂದರು. ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಡಾ. ಸುಧಾ ಮೂರ್ತಿ ಅವರ ಕುರಿತು ಮಾತನಾಡುತ್ತಾ ಅವರು ಈ ಹಿಂದೆ ನಮಗೆ ಕೇವಲ ಬೆಂಗಳೂರಿನಲ್ಲಿ ಮಾತ್ರ ಸಿಗುತ್ತಿದ್ದರು, ಅವರ ಕುರಿತಾಗಿ ಪೇಪರ್ ಅಲ್ಲಿ ಓದುವುದು, ಟಿವಿಯಲ್ಲಿ ನೋಡುವ ಪ್ರಸಂಗ ಇತ್ತು. ಈಗ ರಾಜ್ಯಸಭಾ ಸದಸ್ಯರಾದ ನಂತರ ಅವರು ಬೆಂಗಳೂರಿಗಿಂತ ದೆಹಲಿಯಲ್ಲೇ ಜಾಸ್ತಿ ಇರಬೇಕಾಗಿದೆ. ಈ ದೆಹಲಿಯಲ್ಲಿ ಸುಮಾರು ಜನ ಸಂಸದರು ಇದ್ದಾರೆ, ಇನ್ನೂ ತುಂಬಾ ಮುಖ್ಯ ವ್ಯಕ್ತಿಗಳಿದ್ದಾರೆ, ಆದರೆ ಶ್ರೀಮತಿ ಸುಧಾ ಮೂರ್ತಿ ಅವರು ಕನ್ನಡಿಗರಾಗಿ ಗುರುತಿಸಿಕೊಂಡಿರುವುದು ನಮಗೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಈ ಘನ ಕೇಂದ್ರ ಸರ್ಕಾರ ಅವರನ್ನು ಗುರುತಿಸಿ ರಾಜ್ಯಸಭಾ ಸದಸ್ಯರನ್ನಾಗಿ ಮಾಡಿದ್ದು ಗೌರವಯುತವಾದ ಕೆಲಸ. ರಾಜ್ಯ ಸಭಾ ಸದಸ್ಯರಾದ ಆರು ತಿಂಗಳಲ್ಲೇ ಹೆಚ್ಚು ಕಡಿಮೆ ಅವರು ದೆಹಲಿ ಕನ್ನಡತಿ ಆಗಿಬಿಟ್ಟಿದ್ದಾರೆ. ಮುಂದಿನ ಐದು ವರ್ಷದಲ್ಲಿ ಪೂರ್ತಿ ದೆಹಲಿ ಕನ್ನಡತಿಯಾಗಿ ಅವರ ಸೇವೆ ದೆಹಲಿ ಕನ್ನಡಿಗರಿಗೆ ಮತ್ತು ದೆಹಲಿ ಸುತ್ತಮುತ್ತಲಿನ ಕನ್ನಡ ಸಂಘ ಸಂಸ್ಥೆಗಳಿಗೆ ಸಿಗಲಿ ಎಂದು ಅವರಿಗೆ ಧನ್ಯವಾದಗಳನ್ನು ತಿಳಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ತಮ್ಮ ಸ್ವಂತ ಕೆಲಸಕ್ಕಿಂತಲೂ ಸಂಘದ ಕೆಲಸಕ್ಕೆ ಮೊದಲ ಆದ್ಯತೆ ನೀಡುತ್ತಾ ಸಂಘಕ್ಕೋಸ್ಕರ ಸಮಯ ನೀಡಿ ಸಂಘದ ಏಳಿಗೆಗೆ ಶ್ರಮಿಸುತ್ತಿದ್ದಾರೆ ಎಂದರು.ಹಾಗೇನೇ, ತಾವು 31 ವರ್ಷಗಳ ಹಿಂದೆ ಇದೇ ದಿನ ದೆಹಲಿಗೆ ಬಂದಿದ್ದನ್ನು ನೆನಪಿಸಿಕೊಂಡು, ಇಲ್ಲಿನ ಸಂಸತ್ ಭವನದಲ್ಲಿ ಮತ್ತು ವಿವಿಧ ಕೇಂದ್ರ ಮಂತ್ರಿಗಳೊಂದಿಗೆ ಕಾರ್ಯನಿರ್ವಹಿಸಿದ ಅನುಭವಗಳನ್ನು ಹಂಚಿಕೊಂಡರು ಹಾಗು ಆಗಿನ ಕಾಲದಲ್ಲಿ ಬೆಂಗಳೂರಿನಿಂದ ದೆಹಲಿಗೆ ಬರಲು ಇದ್ದ ರೈಲ್ವೆ ಮತ್ತು ವಿಮಾನಯಾನ ಸಮಸ್ಯೆ ದೆಹಲಿಗೆ ಬರಲು ಸ್ವಗ್ರಾಮಕ್ಕೆ ತೆರಳಲು ರೈಲ್ವೆ ರಿಸರ್ವೇಶನ್ ಪಡೆಯಲು ಇದ್ದ ಸಂಕಷ್ಟಗಳ ಬಗ್ಗೆ ತಿಳಿಸಿದರು, ತಮಗೆ ಇಂದು ಪ್ರಶಸ್ತಿ ನೀಡಿ ಗೌರವಿಸಿದ್ದಕ್ಕೆ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ದೆಹಲಿ ಕನ್ನಡಿಗರಿಗೆ ಕೃತಜ್ಞತೆ ಸಲ್ಲಿಸಿದರು.



ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಸ್ವೀಕರಿಸಿದ **ಶ್ರೀ ಬಸ್ತಿ ದಿನೇಶ್ ಶೆಣೈ** ಅವರು ಮಾತನಾಡಿ ನಾನು ಕ್ಯಾಮರಾ ಕೊಟ್ಟರೆ ಸಾವಿರ ಫೋಟೋ ತೆಗೆಯಬಲ್ಲೆ ಆದರೆ ಮೈಕ್ ಕೊಟ್ಟರೆ ಜಾಸ್ತಿ ಮಾತನಾಡಲು ಆಗುವುದಿಲ್ಲ ಎಂದರು. 27 ವರ್ಷಗಳ ಹಿಂದೆ ದೆಹಲಿಗೆ ಬಂದು ವೃತ್ತಿ ಜೀವನವನ್ನು ಪ್ರಾರಂಭ ಮಾಡಿದ್ದಾಗ ದೆಹಲಿ ಕರ್ನಾಟಕ ಸಂಘದಲ್ಲಿ ಫೋಟೋಗ್ರಾಫರ್ ಆಗಿ ಕೆಲಸ ಮಾಡಿದ್ದನ್ನು ಸ್ಮರಿಸುತ್ತಾ ಭಾವುಕರಾದರು. ತಮಗೆ ಈ ಹಿಂದೆ ಕೆಲಸ ನೀಡಿದ ಅದೇ ಸಂಘದಿಂದ ಇಂದು ಸನ್ಮಾನವನ್ನು ಸ್ವೀಕರಿಸುತ್ತಿರುವುದು ನನ್ನ ಸೌಭಾಗ್ಯ ಎಂದು ತಿಳಿಸುತ್ತಾ ತಮ್ಮನ್ನು ಗುರುತಿಸಿ ಅಭಿನಂದಿಸಿದ್ದಕ್ಕಾಗಿ ಕೃತಜ್ಞತೆಯನ್ನು ಅರ್ಪಿಸಿದರು. ಹಿಂದೆ ಸಂಘದ ಕಾರ್ಯಕ್ರಮಗಳ ಛಾಯಾಗ್ರಹಣಕ್ಕಾಗಿ ಪ್ರತಿ ಒಂದು ಫೋಟೋಕ್ಕೆ 20 ರೂಪಾಯಿ ನೀಡುತ್ತಿದ್ದ ಕಾಲದಿಂದ ಹಿಡಿದು ರಾಷ್ಟ್ರಪತಿಗಳಿಂದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪಡೆಯುವವರೆಗಿನ ತಮ್ಮ ಪಯಣದಲ್ಲಿ ಸಾಕಿ ಸಲಹಿದೆ ನಮ್ಮ ಈ ಕರ್ನಾಟಕ ಸಂಘ, ಅದೇ ಸಂಘದಿಂದ ನಾನು ಸನ್ಮಾನವನ್ನು ತೆಗೆದುಕೊಳ್ಳುವ ಯೋಗ ಬಂದಿರುವುದು ನನ್ನ ಸೌಭಾಗ್ಯ, ಇದಕ್ಕೆ ನಾನು ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಕೃತಜ್ಞನಾಗಿದ್ದೇನೆ, ಮುಂದೆಯೂ ಸದಾ ಸಂಘದ ಜೊತೆ ಇರುತ್ತೇನೆ ಎಂದರು.



ಇನ್ನೋರ್ವ ಪ್ರಶಸ್ತಿ ಪುರಸ್ಕೃತರಾದ **ಶ್ರೀಮತಿ ರಾಜೇಶ್ವರಿ ಭಟ್** ಅವರು ಮಾತನಾಡಿ, ಇಂದು ನನ್ನ ಜೀವನದ ಸ್ವರ್ಣ ಕ್ಷಣಗಳಲ್ಲಿ ಒಂದು ಎಂದು ನಾನು ಅಭಿಮಾನದಿಂದ ಹೇಳಬಯಸುತ್ತೇನೆ. ಈ ದಿನ ನೀವು ನನ್ನನ್ನು ಪ್ರೀತಿಯಿಂದ ಕರೆದು ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನ ನೀಡಿದಾಗ ನನ್ನಿಂದ ಇನ್ನಷ್ಟು ಸಾಧನೆಯನ್ನು ನಾವು ನಿರೀಕ್ಷಿಸುತ್ತಿದ್ದೇವೆ ಎಂದು ಆದೇಶಿಸಿದಂತೆ ನನಗೆ ತೋರುತ್ತದೆ. ಒಬ್ಬ ಕಲಾವಿದೆಯಾಗಿ ನನಗೆ ಹಲವಾರು ಕಡೆಯಿಂದ ಪ್ರಶಸ್ತಿಗಳು ಸಿಕ್ಕಿವೆ. ಮಲಯಾಳಂ, ತಮಿಳು, ತೆಲುಗು, ಒಡಿಯಾ, ಬಂಗಾಳಿ ಮುಂತಾದ ಬೇರೆ ಭಾಷೆಯ ಸಂಘಗಳು ನನ್ನನ್ನು ಸನ್ಮಾನಿಸಿವೆ. ಕಾಸರಗೋಡು, ಮಂಗಳೂರು, ಬೆಂಗಳೂರು, ಬೆಳಗಾವಿ, ಹಾಸನ ಮೊದಲಾದಡೆಗಳೆಲ್ಲ ನನಗೆ ಗೌರವ ದೊರಕಿದೆ. ಆದರೆ ಈ ದಿನ ಸಿಕ್ಕಿರುವ ಈ ಗೌರವ ನನ್ನ ಜೀವನದ ವಿಶೇಷವಾದ ಗೌರವ ಎಂದು ನುಡಿದರು. ಕಳೆದ 28 ವರ್ಷಗಳಿಂದಲೂ ದೆಹಲಿಯಲ್ಲಿದ್ದೇನೆ, ಇಲ್ಲಿದ್ದು ದೆಹಲಿಯವಳೇ ಆಗಿಬಿಟ್ಟಿದ್ದೇನೆ, ನಮ್ಮವರೇ ನನ್ನನ್ನು ಕರೆದು ಮನೆ ಮಗಳು ಎಂದು ನನ್ನನ್ನು ಅಭಿಮಾನದಿಂದ ಸ್ವೀಕರಿಸಿ ನೀನು ಏನೋ ಸಾಧನೆಯನ್ನು ಮಾಡಿದ್ದಿ ಎಂದು ಬೆನ್ನು ತಟ್ಟಿ ಹೇಳುವಾಗ ನನಗೆ ನಿಜವಾಗಿಯೂ ಎವರೆಸ್ಟ್ ಶಿಖರವನ್ನು ಏರಿದಂತೆ ಭಾಸವಾಗುತ್ತಿದೆ ಎಂದರು. ನಮ್ಮವರೇ ನನ್ನನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಈ ಶುಭ ವೇಳೆಯಲ್ಲಿ ಅದಕ್ಕೆ ಕಾರಣರಾದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ನನ್ನ ಸ್ನೇಹಿತೆ ಶ್ರೀಮತಿ ಪೂಜಾ ರಾವ್ ಹಾಗು ಸಂಘದ ಎಲ್ಲಾ ನನ್ನ ಕಾರ್ಯಕರ್ತರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ ಎಂದರು.



ವಿಶೇಷ ಅತಿಥಿಗಳಾಗಿ ಉಪಸ್ಥಿತರಿದ್ದ **ಡಾ. ಕೆ.ಜೆ. ಶ್ರೀನಿವಾಸ್** ಅವರು ಮಾತನಾಡುತ್ತಾ ಕಳೆದ ವರ್ಷ ತಾವು ವೆಸ್ಟ್ ಇಂಡೀಸ್‌ನ ರಾಯಭಾರಿಯಾಗಿ ಕಾರ್ಯ ನಿರ್ವಹಿಸಿದ ನಂತರ ಭಾರತಕ್ಕೆ ಮರಳಿ ಬಂದಾಗ ಶ್ರೀ ಸಿ.ಎಂ. ನಾಗರಾಜ ಅವರು ಸಂಘದ ಕಾರ್ಯಕ್ರಮವೊಂದಕ್ಕೆ ಅತಿಥಿಗಳಾಗಿ ತಮ್ಮನ್ನು ಆಹ್ವಾನಿಸಿದ್ದರು, ಅಂದಿನಿಂದ ನೀವು ಕರೆದಾಗಲೆಲ್ಲಾ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ನಿಮ್ಮೆಲ್ಲರ ಜೊತೆ ಬೆರೆತು ಕಂಪು ಇಂಪನ್ನು ಸವಿಯಲು ಬರ್ತಾ ಇದ್ದೇನೆ, ಇವತ್ತಿನ ದಿವಸ ವಿಶಿಷ್ಟ ಕನ್ನಡಿಗರಿಗೆ ಸನ್ಮಾನ ಏರ್ಪಡಿಸಿ ದಿಗ್ಗಜರಿಗೆ ಸನ್ಮಾನ ಮಾಡಿ ದೆಹಲಿ ಕರ್ನಾಟಕ ಸಂಘ ತನ್ನನ್ನು ತಾನು ಗೌರವಿಸಿಕೊಂಡಿದೆ, ಕೃತಾರ್ಥನನ್ನಾಗಿಸಿಕೊಂಡಿದೆ,



ಕನ್ನಡಕ್ಕಾಗಿ, ಇಲ್ಲಿನ ಕನ್ನಡಗರಿಗಾಗಿ ತಮ್ಮಿಂದ ಆಗುವ ಎಲ್ಲಾ ಸಹಾಯವನ್ನು ಮಾಡುವುದಾಗಿ ಹೇಳುತ್ತಾ ತಮ್ಮನ್ನು ಈ ಒಂದು ವಿಶೇಷ ಸಂದರ್ಭದಲ್ಲಿ ಆಹ್ವಾನಿಸಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು.



ಮುಖ್ಯ ಅತಿಥಿ **ಶ್ರೀಮತಿ ಡಾ. ಸುಧಾಮೂರ್ತಿ** ಅವರು ಮಾತನಾಡಿ ನಾನು ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ ಅವರ ಬಳಿ ಈಗಾಗಲೇ ಹೇಳಿದ್ದೇನೆ ಈ ದಿನ ಸುಂದರ ಸಾಂಸ್ಕೃತಿಕ ಕಾರ್ಯಕ್ರಮಗಳಿರುವುದರಿಂದ ನಾನು ಹೆಚ್ಚು ಮಾತನಾಡಲು ಬಯಸುವುದಿಲ್ಲಾ, ಮುಂದೊಂದು ದಿನ ದೆಹಲಿ ಕರ್ನಾಟಕ ಸಂಘದ ಎಲ್ಲಾ ಮಹಿಳೆಯರನ್ನು ಕರೆಯಿರಿ ನಾನು ಅವರ ಜೊತೆ ಮಾತಾಡಬೇಕು. ಹೆಣ್ಣುಮಕ್ಕಳ ಪ್ರಾಬ್ಲಮ್ ಹೆಣ್ಣು ಮಕ್ಕಳೇ ಅರ್ಥಮಾಡಿಕೊಳ್ಳಬೇಕು ಅವರೊಂದಿಗೆ ಪ್ರಶ್ನೆ ಉತ್ತರ ನಡೆಸೋಣ ಎಂದರು. ಮಹಾಭಾರತದ ಶ್ಲೋಕವನ್ನು ಉಲ್ಲೇಖಿಸುತ್ತಾ ಅರ್ಜುನನಿಗೆ ಸ್ನೇಹಿತ ಕೇಳುತ್ತಾನೆ ಏನು ಅರ್ಜುನ ನೀನು ಇಷ್ಟು ಫೇಮಸ್ ಇದ್ದೀಯ ಎಂದು, ರೂಪ ಇದೆ, ವಿದ್ಯೆ ಇದೆ, ಹಣ ಇದೆ ಸುಂದರ ಪತ್ನಿಯರಿದ್ದಾರೆ, ಆತ್ಮೀಯರಿದ್ದಾರೆ ಆದರೂ ನೀನು ಬಡವರಾದ ಗುರು ದ್ರೋಣ ಅವರ ಜೊತೆ ಕೂತ್ಕೋತಿಯಲ್ಲ ಯಾಕೆ ಎಂದಾಗ ನಾ ರಾಜಂ ನಾ ಯವ್ವನಮ್ ನಾಭೋಗಂ, ನಾ ಕನಕಂ ಜೀವನದಲ್ಲಿ ರಾಜ ಭೋಗ ಯೌವನ ಧನಕನಕ ಮುಂತಾದವು ಕೊನೆತನಕ ಇರುವುದಿಲ್ಲ. ನಮ್ಮ ಜನರು ನಮಗೆ ಕೊಡುವ ಒಂದು ಪ್ರೀತಿ ಅದು ಮನಸ್ಸಿನಲ್ಲಿ ಸ್ಥಿರವಾಗಿರುತ್ತದೆ, ನಾನು ಅವರ ಕಾಲಿನ ಬಳಿ ಯಾಕೆ ಕುತ್ಕೊಂಡಿದ್ದೀನಿ ಅಂದರೆ ನನ್ನ ಗುರು ದ್ರೋಣರುನನ್ನನ್ನು ಸಾಕಿ ಸಲುಹಿ ವಿದ್ಯೆಯನ್ನು ನೀಡಿದವರು. ಅವರ ಕಡೆಯಿಂದ ಒಂದು ಮಾತು ಬಂದರೆ ಅದನ್ನು ನಾನು ಪ್ರಶಸ್ತಿ ಅಂದುಕೋತೀನಿ. ರಾಜನಿಗಿಂತ, ಯವ್ವನಕ್ಕಿಂತ ಸಂಪತ್ತಿಗಿಂತ ನಾನು ಅದನ್ನು ಹೆಚ್ಚು ಬೆಲೆಬಾಳುವುದೆಂದು ಭಾವಿಸುತ್ತೇನೆ, ಹಾಗೆಯೇ ದೆಹಲಿ ಕನ್ನಡಿಗರಿಗೆ ಇಲ್ಲಿನ ಜನರು ಕೊಟ್ಟಂತ ಪ್ರಶಸ್ತಿಯ ಬೆಲೆ ಹೆಚ್ಚು, ಇತರ ಪ್ರಶಸ್ತಿಗಳು ಎಷ್ಟೇ ಸಿಕ್ಕಿರಬಹುದು, ಆದರೆ ದೆಹಲಿ ಕನ್ನಡಿಗರು ದೆಹಲಿ ಕನ್ನಡಿಗರಿಗೆ ಕೊಟ್ಟ ಪ್ರಶಸ್ತಿಯನ್ನು ಅವರು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳುತ್ತಾರೆ, ತಾಯಿಇದ್ದರೆ ಮಾತ್ರ ತವರು ಚೆಂದ ಎಂದರು.

ಇನ್ನೊಂದು ಶ್ಲೋಕ ಕುರಿತು ವಿಶ್ಲೇಷಿಸುತ್ತಾ ಒಂದು ಅಕ್ಷರವನ್ನು ತಗೊಂಡ್ರೆ ಅದರಿಂದ ಒಂದು ಮಂತ್ರ ಪ್ರಾರಂಭವಾಗಬಹುದು, ಯಾವುದೇ ಒಂದು ಎಲೆ ತಗೊಂಡರೆ ಅದು ತರಕಾರಿ ಆಗಬಹುದು, ಅದು ಔಷಧಿ ಆಗಬಹುದು, ಯಾವುದೇ ಒಂದು ಸ್ವರ ತಗೊಂಡ್ರೆ ಅದು ಸಂಗೀತವಾಗಬಹುದು ಜೀವನದಲ್ಲಿ ಯಾವುದೂ ವೇಸ್ಟ್ ಅಲ್ಲ, ಎಲ್ಲದರಲ್ಲೂ ಒಂದೊಂದು ವಿಶೇಷತೆ ಇರುತ್ತೆ, ತನ್ನದೇ ಆದ ಮಹತ್ವವಿರುತ್ತದೆ ಎಲ್ಲದಕ್ಕಿಂತ ಕಷ್ಟವಾಗಿರುವುದೇನೆಂದರೆ ಯೋಜನಾ ತತ್ವ ದುರ್ಲಭಃ ಯಾರು ನಿರ್ವಹಣೆಯನ್ನು ಮಾಡುತ್ತಾರೆ ಅಂತವರನ್ನು ಹುಡುಕಿಕೊಂಡು ಬರಬೇಕಾಗುತ್ತದೆ, ಅದಕ್ಕೆ ನಾಗರಾಜ ಅವರಿಗೆ ಯೋಜನಾ ತತ್ವ ದುರ್ಲಭ, ದುಡ್ಡಿರಬಹುದು, ಸಂಘ ವನ್ನು ನಿರ್ವಹಿಸುವುದು ಸುಲಭದ ಮಾತಲ್ಲ ಈ ಕಾರ್ಯಕ್ರಮಕ್ಕೆ ಇಷ್ಟೊಂದು ಕನ್ನಡಿಗರನ್ನು ಕಲೆ ಹಾಕುವುದು ಸಾಮಾನ್ಯದ ಕೆಲಸವಲ್ಲ ಎಂದರು.

ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಸದಸ್ಯೆಯರು ಪ್ರಸ್ತುತಪಡಿಸಿದ ಸಮೂಹ ನೃತ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಇಷ್ಟು ಸುಂದರವಾಗಿ ನೃತ್ಯ ನಿರ್ದೇಶನವನ್ನು ಬೆಂಗಳೂರಿನಲ್ಲಿಯೂ ನೋಡಲು ಸಿಗಲ್ಲ ಎಂದು ಡಾ. ಸುಧಾ ಮೂರ್ತಿ ಅವರು ಹೇಳಿದರು. ತಾಯಿ ನಾಡಿನಿಂದ ಇಷ್ಟು ದೂರ ಇದ್ದರೂ ಸಂಭ್ರಮದಿಂದ ರಾಜ್ಯೋತ್ಸವವನ್ನು ಆಚರಿಸುತ್ತಿರುವ ನಿಮ್ಮೆಲ್ಲರ ಉತ್ಸಾಹವನ್ನು ನೋಡಿದಾಗ ಪ್ರತಿ ವರ್ಷವೂ ನವೆಂಬರ್‌ನಲ್ಲಿ ನಿಮ್ಮ ಜೊತೆಯಲ್ಲೇ ಕನ್ನಡ ರಾಜ್ಯೋತ್ಸವವನ್ನು ಇಲ್ಲೇ ಬಂದು ಮಾಡಬೇಕು ಎಂದು ತಮಗೆ ಅನಿಸುತ್ತಾ ಇದೆ, ನನ್ನ ಕೈಯಿಂದ ಏನು ಸಾಧ್ಯ ಇದೆಯೋ ಅದನ್ನು ನನ್ನ ಬಿಡುವಿನ ವೇಳೆ ಬಂದು ಮಾಡಿಕೊಡ್ತೀನಿ ಎಂದರು. ನೀವೆಲ್ಲಾ ತಾಯಿ ನಾಡಿನಿಂದ ಇಲ್ಲಿಗೆ ಬಂದು ಬೇರಿನಿಂದ ಮರ ದೂರ ಆದಂತೆ ತಮ್ಮ ಇದೇ ಮಕ್ಕಳಿಗೆ ಒಂದು ಬೇರನ್ನು ಕೊಡ್ತಾ ಇದ್ದೀರಿ, ಬೇರಿನಿಂದ ಆಚೆಗೆ ಬಂದಾಗ ಬೇರಿನ ಮಹತ್ವ ಗೊತ್ತಾಗುತ್ತದೆ, ತಾಯಿ ಇದ್ದರೆ ತವರು, ನಿಮ್ಮ ಮಕ್ಕಳಿಗೆ ಕನ್ನಡವನ್ನು ಮಾತನಾಡಿಸುವುದನ್ನ ಕಲಿಸಿ, ಕನ್ನಡವನ್ನು ಹೇಳಿ ಕೊಡಿ, ಅದರ ಮಹತ್ವವನ್ನು ತಿಳಿಸಿ ಬೆಂಗಳೂರಿಗರಾಗಬೇಡಿ ಕನ್ನಡ ಗೊತ್ತಿದ್ದರೂ ತಮ್ಮನ್ನು ಭೇಟಿ ಮಾಡಿದ ಕೆಲವರು ಇಂಗ್ಲಿಷ್‌ನಲ್ಲಿಯೇ Madam how are you ? ಎಂದು ಕೇಳುತ್ತಾರೆ, ಬೇರೆ ಭಾಷೆಯವರು ತಮ್ಮವರು ಸಿಕ್ಕಾಗ ತಮ್ಮ ಮಾತೃ ಭಾಷೆಯಲ್ಲಿಯೇ ಮಾತನಾಡುತ್ತಾರೆ ನೀವೆಲ್ಲಾ ಸದಾ ಕನ್ನಡದಲ್ಲಿಯೇ ಸಂಭಾಷಣೆ ಮಾಡಿ, ಆಗ ಕನ್ನಡಕ್ಕೆ ಎಷ್ಟು ಮಹತ್ವ ಇದೆ ಎನ್ನುವುದು ಅರಿವಾಗುತ್ತದೆ, ಎಲ್ಲರಿಗೂ ಅಭಿನಂದನೆಗಳು ಎಂದರು.

ಸಂಘದ ಅಧ್ಯಕ್ಷ ಶ್ರೀ ಸಿ.ಎಂ. **ನಾಗರಾಜ** ಅವರು ಮಾತನಾಡುತ್ತಾ 69 ನೇ ಕನ್ನಡ ರಾಜ್ಯೋತ್ಸವ



ಅಂಗವಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ಪ್ರತೀ ವಾರ ರಾಜ್ಯೋತ್ಸವ ಕಾರ್ಯಕ್ರಮ ನಡೆಸಿದ್ದು, ವಿಶೇಷವಾದ ಇವತ್ತಿನ ಈ ಕಾರ್ಯಕ್ರಮದಲ್ಲಿ ಪದ್ಮಭೂಷಣ ಡಾ. ಸುಧಾಮೂರ್ತಿ ಅವರು ದೆಹಲಿ ಕರ್ನಾಟಕ ಸಂಘಕ್ಕೆ ಬಂದಿರುವುದು ನಮ್ಮ ಸೌಭಾಗ್ಯ. ಇಂದು ಸರಿ ಸುಮಾರು ಸಂಜೆ ನಾಲ್ಕು ಗಂಟೆಗೆ ಆರಂಭವಾಗಿ ಸತತ ನಾಲ್ಕು ಗಂಟೆಗಳ ಕಾಲ ನಡೆದಿರುವ ಈ ಕಾರ್ಯಕ್ರಮದಲ್ಲಿ ಸಭಾಂಗಣ ಕಿಕ್ಕಿರಿದು ತುಂಬಿದೆ. ಈ ಸಮಾರಂಭದಲ್ಲಿ ಕನ್ನಡಿಗರಿಗೆ ವಿಶೇಷವಾದ ಸೇವೆ ಸಲ್ಲಿಸಿರುವ ದೆಹಲಿ ಕನ್ನಡಿಗರನ್ನು ಗುರುತಿಸಿ ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡಿದ್ದೇವೆ, ಹಾಗೇನೇ, 57 ಕನ್ನಡಿಗರ ಮಕ್ಕಳಿಗೆ ಮತ್ತು 7 ಸಂಘದ ಸಿಬ್ಬಂದಿ ಮಕ್ಕಳಿಗೆ ಅವಶ್ಯಕತೆ ಆಧಾರದ ಮೇಲೆ ಹಾಗು 17 ಮಕ್ಕಳಿಗೆ ಅರ್ಹತೆ ಆಧಾರದ ಮೇಲೆ ಒಟ್ಟಾರೆ 81 ಮಕ್ಕಳಿಗೆ ಈ ಬಾರಿ ವಿದ್ಯಾರ್ಥಿ ವೇತನ ವಿತರಣೆ ಮಾಡ್ತಾ ಇದ್ದೇವೆ. ಮುಖ್ಯ ಅತಿಥಿಗಳಾಗಿ ಬಂದಿರುವ ಡಾ. ಸುಧಾ ಮೂರ್ತಿ ಅಮ್ಮನವರು ಈ ಹಿಂದೆ ನಮ್ಮ 50000 ಪುಸ್ತಕಗಳಿರುವ ಗ್ರಂಥಾಲಯಕ್ಕೆ 10 ಲಕ್ಷ ರೂಪಾಯಿ ಹಾಗೂ ಇತ್ತೀಚೆಗೆ ನೀಡಿದ 60




**ಮುಖ್ಯ ಅತಿಥಿ ಶ್ರೀಮತಿ ಡಾ. ಸುಧಾ ಮೂರ್ತಿ, ವಿಶೇಷ ಅತಿಥಿ ಡಾ. ಕೆ.ಜೆ. ಶ್ರೀನಿವಾಸ ಹಾಗು ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತರೊಂದಿಗೆ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು.**




**ಗಣ್ಯರೊಂದಿಗೆ ಅರ್ಹತೆ ಆಧಾರದ ಮೇಲೆ ವಿದ್ಯಾರ್ಥಿ ವೇತನ ಪಡೆದ ಮಕ್ಕಳು**

ಲಕ್ಷ ರೂಪಾಯಿ ದೇಣಿಗೆ ಸೇರಿ, ಒಟ್ಟು 70 ಲಕ್ಷ ರೂಪಾಯಿಗಳನ್ನು ನಮ್ಮ ಸಂಘಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಅವರಿಗೆ ಕೃತಜ್ಞತೆಗಳು ಎಂದರು.

ನಮ್ಮ ಸಭಾಂಗಣ ಇಂದು ತುಂಬಿ ತುಳುಕಿದೆ. ಹಲವು ಕನ್ನಡಿಗರು ನಿಂತು ಕಾರ್ಯಕ್ರಮ ನೋಡುವಂತಹ ಪರಿಸ್ಥಿತಿ ಇದೆ, ಹಾಗಾಗಿ ಬರುವ ದಿನಗಳಲ್ಲಿ ನೋಯ್ಡಾದಲ್ಲಿ ಅಥವಾ ಗುರುಗ್ರಾಮದಲ್ಲಿ ತಮ್ಮ ಉನ್ನತ ಶಿಕ್ಷಣಕ್ಕೆ ನಾಡಿನಿಂದ ದೆಹಲಿಗೆ ಬರುವ ಮಕ್ಕಳಿಗೆ ಅಥವಾ ಇಲ್ಲಿನ ಮಕ್ಕಳಿಗೆ, ಯುಪಿಎಸ್‌ಸಿ ಪರೀಕ್ಷೆಗಳಿಗಾಗಿ ಬರುವ ಮಕ್ಕಳಿಗೆ ಲೈಬ್ರರಿ ಹಾಗೂ ಉಳಿದುಕೊಳ್ಳಲು ವಸತಿ, ದಾಸೋಹ ವ್ಯವಸ್ಥೆ ಹಾಗು ದೊಡ್ಡ ಸಭಾಂಗಣ ನಿರ್ಮಾಣವನ್ನು ಮಾಡಲು ಬೇಕಾದ ಜಾಗವನ್ನು ಪಡೆಯುವ ನಿಟ್ಟಿನಲ್ಲಿ ಪ್ರಯತ್ನ ಮಾಡ್ತಾ ಇದ್ದೇನೆ. ಇದಕ್ಕೆ ಎಲ್ಲರ ಸಹಕಾರವಿರಲಿ, ಇಂದಿನ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯ ಸಂಘ ಸಂಸ್ಥೆಗಳು ಭಾಗವಹಿಸಿ ಸುಮಾರು 20 ತಂಡಗಳ 130ಕ್ಕೂ ಹೆಚ್ಚು ಕಲಾವಿದರು ವೈವಿಧ್ಯಮಯ ನಾನಾ ಪ್ರಕಾರದ ನೃತ್ಯ ಪ್ರದರ್ಶನ ನಿಮ್ಮ ಮುಂದೆ ನೀಡುತ್ತಾ ಇದ್ದಾರೆ, ಬರುವ ದಿನಗಳಲ್ಲಿ ಸಂಘದಲ್ಲಿ ಆಹಾರ ಮೇಳ ಮುಂತಾದ ಕಾರ್ಯಕ್ರಮಗಳ ಆಯೋಜನೆಯಾಗಲಿದೆ, ಈ ಎಲ್ಲಾ ಕಾರ್ಯಕ್ರಮಗಳಿಗೆ ಇದೇ ರೀತಿಯಲ್ಲಿ ತಾವೆಲ್ಲಾ ಬನ್ನಿ, ನಾವೆಲ್ಲಾ ಸೇರಿ ಕನ್ನಡವನ್ನು ಕಟ್ಟೋಣ, ಗಟ್ಟಿ ಮಾಡೋಣ, ಕನ್ನಡವನ್ನು ಬೆಳೆಸೋಣ, ರಾಷ್ಟ್ರ ರಾಷ್ಟ್ರ ರಾಜಧಾನಿಯಲ್ಲಿ ಬೆಂಗಳೂರಿಗಿಂತಲೂ ಜಾಸ್ತಿ ಕನ್ನಡ ಕಾರ್ಯಕ್ರಮ ಮಾಡೋಣ, ಅಮೃತ ಮಹೋತ್ಸವ ಕಾರ್ಯಕ್ರಮ ಸಂದರ್ಭದಲ್ಲಿ ಮಾನ್ಯ ಪ್ರಧಾನಮಂತ್ರಿಯವರು ಹೇಳಿದಂತೆ ಮುಂದಿನ 25 ವರ್ಷಗಳಲ್ಲಿ ವಿಶೇಷವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳೋಣ, ಡಾ. ಸುಧಾ ಮೂರ್ತಿ ಅಮ್ಮನವರ ಆಶೀರ್ವಾದ ಸದಾ ನಮ್ಮ ನಿಮ್ಮೆಲ್ಲರ ಮೇಲೆ ಇರಲಿ, ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು, ಜೈ ಹಿಂದ್ ಜೈ ಕರ್ನಾಟಕ ಮಾತೆ ಎಂದು ಹೇಳಿ ತಮ್ಮ ಅಧ್ಯಕ್ಷೀಯ ಭಾಷಣ ಮುಗಿಸಿದರು.

ಕರ್ನಾಟಕ ರಾಜ್ಯೋತ್ಸವದ ಕಾರ್ಯಕ್ರಮದ ಇನ್ನೊಂದು ವಿಶೇಷತೆ ಏನೆಂದರೆ ವಿದ್ಯಾರ್ಥಿ ವೇತನ ವಿತರಣೆ. ಈ ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಅವರು ನಡೆಸಿಕೊಟ್ಟರು. ಒಟ್ಟು ರೂ. 7,22,000/– ಮೊತ್ತದ ವಿದ್ಯಾರ್ಥಿ ವೇತನವನ್ನು ಅರ್ಹತೆ ಮತ್ತು ಅವಶ್ಯಕತೆಯ ಆಧಾರದ ಮೇಲೆ ಅರ್ಹರಾದ 81 ವಿದ್ಯಾರ್ಥಿಗಳಿಗೆ ನೀಡಲಾಯಿತು. ರಾಜ್ಯಸಭಾ ಸಂಸದರಾದ ಶ್ರೀಮತಿ ಡಾ. ಸುಧಾ ಮೂರ್ತಿ ಅವರು ಅರ್ಹತೆ ಆಧಾರದ ಮೇಲೆ ಆಯ್ಕೆಯಾದ ಇಲ್ಲಿನ 17 ಪ್ರತಿಭಾವಂತ ಕನ್ನಡಿಗರ ಮಕ್ಕಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಪತ್ರಗಳನ್ನು ವೇದಿಕೆ ಮೇಲೆ ನೀಡಿ ಗೌರವಿಸಿದರು.

ಸಂಘದ ವೇದಿಕೆಯಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸ್ಥಳೀಯ ಕಲಾವಿದರು ಹಾಗೂ ಸಂಘ ಸಂಸ್ಥೆಗಳ 20 ತಂಡಗಳ 130 ಕ್ಕೂ ಹೆಚ್ಚು ಕಲಾವಿದರುಗಳಿಂದ ಸಮೂಹ ನೃತ್ಯ ಕಾರ್ಯಕ್ರಮ ಅತ್ಯಂತ ಸುಂದರವಾಗಿ ಮೂಡಿ ಬಂತು. ಈ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅತ್ಯಂತ ಅಚ್ಚುಕಟ್ಟು ಹಾಗು ಶಿಸ್ತುಬದ್ಧವಾಗಿ ಕಾರ್ಯಕಾರಿ ಸಮಿತಿಯ ಖಜಾಂಚಿ ಶ್ರೀಮತಿ ಆಶಾಲತಾ ಎಂ., ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್, ಸದಸ್ಯರಾದ ಶ್ರೀಮತಿ ಶುಭಾ ದೇವಿಪ್ರಸಾದ್ ಮತ್ತು ಶ್ರೀಮತಿ ಜಯಶ್ರಿ ಬಸವರಾಜು, ಶ್ರೀ ಪ್ರಭಾಕರ ಮಡ್ಡಿತೋಟ್ ಹಾಗೂ ಸಭಾ ಕಾರ್ಯಕ್ರಮವನ್ನು ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ಅವರು ನೆರವೇರಿಸಿಕೊಟ್ಟರು.

ಮುಖ್ಯ ಅತಿಥಿಗಳಾದ ಡಾ. ಸುಧಾ ಮೂರ್ತಿ ಅವರಿಗೆ ಹಾಗೂ ವಿಶೇಷ ಅತಿಥಿಗಳಾದ ಡಾ. ಕೆ. ಜೆ. ಶ್ರೀನಿವಾಸ್ ಅವರಿಗೆ ದೆಹಲಿ ಕರ್ನಾಟಕ ಸಂಘದಿಂದ ಗೌರವ ಸಮರ್ಪಣೆ ನೀಡಲಾಯಿತು.ಕೊನೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರು ವಂದನಾರ್ಪಣೆ ಸಲ್ಲಿಸಿದರು.

ನಾಡಿನ ಮತ್ತು ಹೊರನಾಡಿನ ಸಮಸ್ತ ಕನ್ನಡಿಗರಿಗೆ ದೆಹಲಿ ಕರ್ನಾಟಕ ಸಂಘದಿಂದ 69 ನೇ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು. ❑

**ವಿದ್ಯಾರ್ಥಿ ವೇತನ ಪಡೆದ ಪ್ರತಿಭಾವಂತ ಮಕ್ಕಳು**

1ನೇ ತರಗತಿ–ಯತೀಶ್ ಗೌಡ ಕೆ., 2ನೇ ತರಗತಿ–ಅದ್ವಿಕ್ ಕೆ. ನಾಯ್ಕ್, 3ನೇ ತರಗತಿ–ಮೊನಿಷ್ಕ, 4ನೇ ತರಗತಿ–ಶ್ರೀಯಾಚಂದ್ರ, 5ನೇ ತರಗತಿ–ಸೌಮ್ಯ, 6ನೇ ತರಗತಿ–ಅಕ್ಷತಾ ಹಲ್ಲೂರ್, 7ನೇ ತರಗತಿ–ಆರಾಧ್ಯ ಪಾಟೀಲ್, 9ನೇ ತರಗತಿ–ಸಂಚಿತಾ, 10ನೇ ತರಗತಿ–ಜಿವಿಕಾ ಉಮೇಶ್ ಮತ್ತು ಮೇಘಾ ಬಿ., 12ನೇ ತರಗತಿ–ಖುಷಿ ಆಚಾರ್ಯ, ಗ್ರಾಜ್ಯುಯೇಶನ್–ಲಕ್ಷಿತಾ ಜೈನ್, ಕ್ಷಿತಿಜ್ ಎಸ್., ರಬಿಯತ್ ಬಾನು, ಶ್ರೇಯಾ ಜೈನ್, ವರ್ಷಾ ಕಿಣಿ ಮತ್ತು ನಬಿಲ್.

**ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಸ್ಥಳೀಯ ಸಂಘ ಸಂಸ್ಥೆಗಳು ಮತ್ತು ಕಲಾವಿದರು :**

1. **ಜನಕಪುರಿ ಕನ್ನಡ ಕೂಟ :** ನೃತ್ಯ ಸಂಯೋಜಕರು : ಶ್ರೀಮತಿ ಸವಿತಾ ನೆಲ್ಲಿ, ಶ್ರೀಮತಿ ಪ್ರೇರಣಾ ವೆಂಕಟೇಶ್–ಶ್ರೀ ಎಂ.ವಿ. ವೆಂಕಟೇಶ್, ಶ್ರೀಮತಿ ಸವಿತಾ ನೆಲ್ಲಿ–ಶ್ರೀ ಕೃಷ್ಣರಾಜ್ ಕೆ.ಎನ್., ಶ್ರೀಮತಿ ಪವಿತ್ರಾ ತಮಣ್‌ಕರ್–ಶ್ರೀ ಕಿರಣ್ ತಮಣ್‌ಕರ್

2. **ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಸಮಿತಿ :** ಶ್ರೀಮತಿ ಉಷಾ ಬಿರಾದಾರ, ಶ್ರೀಮತಿ ಶಾರದಾ ಬಿರಾದಾರ, ಶ್ರೀಮತಿ ಸುಮಾ ಜ್ಯೋತೆಪ್ಪ, ಶ್ರೀಮತಿ ಲಕ್ಷ್ಮೀ ಮುಲ್ಗೆ, ಶ್ರೀಮತಿ ಶಿವಾನಂದ ಘಾಳೆ, ಶ್ರೀಮತಿ ಪ್ರೇಮಲತ ಭುರೆ, ಶ್ರೀಮತಿ ನಂದಿನಿ ಬಿರಾದಾರ

3. **ದೆಹಲಿ ಕರ್ನಾಟಕ ಸಂಘ ಕನ್ನಡ ಕಲಿಕಾ ಕೇಂದ್ರ :** ನೃತ್ಯ ಸಂಯೋಜಕರು : ಕು. ಪ್ರೇರಣಾ ರಾವ್, ಕು. ಶರಣ್ಯ, ಕು. ಸಾನಿಧ್ಯ ಎಸ್, ಕು. ಸಾನಿಧ್ಯ ಎಂ.ಜಿ., ಕು. ದಿವ್ಯ ಮಾಲ್ತೇಶ್, ಕು. ಲಿಪಿಕಾ ನಾಯ್ಕ್, ಕು. ತಾನ್ಯ ಕೆ.

4. **ದೆಹಲಿ ಒಕ್ಕಲಿಗ ಗೌಡ ಸಂಘ :** ಲೋಕದ ಕಾಳಜಿ ಮತ್ತು ಕಂಡೆ ಕಂಡೆ ಪರಶಿವನ–ಶ್ರೀಮತಿ ಲಕ್ಷ್ಮೀ ಗೌಡ, ಶ್ರೀಮತಿ ಪ್ರತಿಭಾ ಗೌಡ, ಶ್ರೀಮತಿ ಶೋಭಾ ಗೌಡ, ಶ್ರೀಮತಿ ಜೈಶೀಲ ಕೆಂಪರಾಜು, ಶ್ರೀಮತಿ ಕನಕಾ ಸಂತೋಷ, ಶ್ರೀಮತಿ ರಚನಾ ಗೋವಿಂದರಾಜು,

5. **ದೆಹಲಿ ಫ್ರೆಂಡ್ಸ್ ತಂಡ :** ಶ್ರೀ ಶ್ರೀಹರಿ ಶೇಖರ್, ಶ್ರೀ ಎಚ್.ಜಿ. ಶಿವರಾಮ್, ಶ್ರೀ ಮಹಾದೇವ ಆರ್., ಶ್ರೀ ಹರಿಪ್ರಿಯ ಎಸ್., ಶ್ರೀ ಬಿ.ಎನ್. ಮೋಹನ್ ಕುಮಾರ್, ನೃತ್ಯ ಸಂಯೋಜಿಸಿ ತಂಡದೊಂದಿಗೆ ನರ್ತಿಸಿದವರು ಕು. ಹರ್ಷಿತಾ ಕೊಕ್ಕಡ

6. **ಶ್ರೀಗಣೇಶ ಮಿತ್ರ ಮಂಡಳಿ :** ಮಂಜಪ್ಪ ಕಿತ್ತೂರು, ವೆಂಕಟೇಶ್ ಆರ್.ವಿ., ಮೆಲ್ವಿನ್ ಲೋಬೊ, ಪ್ರಕಾಶ್ ಶೆಟ್ಟಿ ಉಳೆಪಾಡಿ, ಹೇಮಂತ್ ಶೃಂಗನಾಡು, ಕಲ್ಲಪ್ಪ ಭಿಂಗೆ, ರೋಷನ್, ದೇವಕಿನಂದನ್ ಸಾವುಕಾರ್, ಬಸವರಾಜು ಬಿ.ಕೆ., ಸೀಮಾ ಬಿರಾದಾರ

7. **ಗುರುಗಾಂವ್ ಕನ್ನಡ ಸಂಘ :** ಗ್ರೂಪ್ 1– ಕು. ಕೀರ್ತನಾ ಕಟ್ಟೀಮನಿ, ಕು. ಸಹನಾ ತಿಮ್ಮಪ್ಪ, ಶ್ರೀಮತಿ ಕವಿತಾ ಕಟ್ಟಿಮನಿ, ಶ್ರೀಮತಿ ಸುನಂದಾ ಸಾಬುದರ್ಗಾ,

ಶ್ರೀಮತಿ ಭಾರತಿ ತಿಮ್ಮಪ್ಪ, ಶ್ರೀಮತಿ ಅನಿತಾ ಪ್ರಭಾಕರ್.

**8. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು :** ಶ್ರೀಮತಿ ಮಮತಾ ಜಿಂದೆ, ಶ್ರೀಮತಿ ಶಿಲ್ಪ ಆನಂದ್ ಸರ್ದೇಸಾಯಿ, ಶ್ರೀಮತಿ ಪ್ರೇಮಲತಾ, ಶ್ರೀಮತಿ ಡಿ. ಶಾಂತಲಾ ಕಿರಣ್, ಶ್ರೀಮತಿ ಮೈಥಿಲಿ ಅಟ್ಟಾವರ್, ಶ್ರೀಮತಿ ಅಶ್ವಿನಿ ಬಿ.ಎಸ್., ನೃತ್ಯ ಸಂಯೋಜಿಸಿ ತಂಡದೊಂದಿಗೆ ನೃತ್ಯ ಮಾಡಿದವರು ಶ್ರೀಮತಿ ಶಿಲ್ಪ ಅರುಣ್ ಕುಮಾರ್.

**9 : ಭಿವಾಡಿ ಕನ್ನಡ ಸಂಘದ** (ಮಕ್ಕಳು) : ಕುಮಾರಿಯರಾದ ಸಾಯಿಶ್ರೀ ದೇಸಾಯಿ, ರಕ್ಷಾ ಕುರ್ಕೋಟಿ, ವರ್ಷ ಗಾಣಿಗೇರ, ಸಂಜನಾ ಪಾಟೀಲ, ಆದ್ಯ ಹಿರೇಮಠ, ಅದಿತಿ ಹಿರೇಮಠ, ಆನಂದಿ ಗೌಡ

**10. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ :** ಶ್ರೀಮತಿ ಸುನಿತಾ ಎನ್.ಜೆ., ಶ್ರೀಮತಿ ವೀಣಾ ಕೊಟಾರಿ, ಶ್ರೀಮತಿ ರೇಣುಕಾ, ಶ್ರೀಮತಿ ಶ್ರೀದೇವಿ, ಶ್ರೀ ನಾಗರಾಜ ಎಂ., ಶ್ರೀ ಅರವಿಂದ ಬಿಜೈ, ಶ್ರೀ ಎಚ್.ಎಸ್. ತೇಲಿ

**11. ಶ್ರೀನಿವಾಸಪುರಿ ಕನ್ನಡ ಕಲಿಕಾ ಕೇಂದ್ರದ ಮಕ್ಕಳು :** ಕುಮಾರಿಯರಾದ ಅಂಕಿತ, ಪವಿತ್ರ, ದಿಯಾ, ಸಾಕ್ಷಿ, ಕಲ್ಪನಾ, ಕಾವೇರಿ, ಯೆಸ್ತರ್, ತನಿಷಾ

**12 : ಗುರುಗಾಂವ್ ಕನ್ನಡ ಸಂಘ :** ಶ್ರೀಮತಿಯರಾದ ಶಿವಲೀಲಾ ರಾಜಕುಮಾರ, ಪ್ರಿಯದರ್ಶಿನಿ ಮರಿಬಸಪ್ಪ, ಪ್ರಿಯಾಂಕಾ ರಾಜಶೇಖರ, ಭವಾನಿ ಶರಣಬಸಪ್ಪ, ಕು. ಸಂಚಿತಾ ರಾಜಕುಮಾರ, ಕು. ಸ್ನೇಹಾ ಶರಣಬಸಪ್ಪ

**13. ಜನಕಪುರಿ ಮಹಿಳಾ ಮಂಡಳಿ :** ಹಾಡು : ಐಗಿರಿ ನಂದಿನಿ ನಂದಿತ ಮೆದಿನಿ–ಶ್ರೀಮತಿಯರಾದ ರೇಣುಕಾ ಸಾವಕಾರ, ಅಶ್ವಿನಿ ಹಣಮಸಾಗರ್, ಹರ್ಷಿತಾ ಆಚಾರ್ಯ, ಜಯಶ್ರೀ ಬಸವರಾಜು, ವೈಜಯಂತಿ ಗಿರೀಶ್, ಕು. ವೈಷ್ಣವಿ ಸಾವಕಾರ, ನೃತ್ಯ ಸಂಯೋಜನೆ : ಕುಮಾರಿ ವೈಷ್ಣವಿ ಸಾವಕಾರ

**14. ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ :** ಶ್ರೀಮತಿಯರಾದ ಗೀತಾ ಮಂಜುನಾಥ, ನಳಿನಾ ಚರ್ವಣ್ಣ, ಶಾಂತಾ ಶ್ರೀನಿವಾಸ, ಮಂಜುಳಾ ನಾಗರಾಜ, ಮಮತಾ ಶಿವರಾಮ್, ಆಶಾಲತಾ ಮಹಾದೇವ್

**15. ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ :** ಶ್ರೀಮತಿಯರಾದ ಉಷಾ ಮೋಹನ್, ಸುಜಾತ ನಾಯಕ್, ರೇಖಾ ನಾಯಕ್, ಪಾರ್ವತಿ ಉಭಾಳೆ, ಕು. ಕೆ.ಎಂ. ಅನರ್ಘ್ಯ

**16. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು** (ಮಕ್ಕಳು) : ಕುಮಾರಿಯರಾದ ಅನುಷ್ಕಾ ಪಾಟೀಲ್, ಮನುಶ್ರೀ ಮರಿಬಸಪ್ಪ, ಶ್ರೇಯಾ ಮಡ್ಡಿತೋಟ್, ಸೌಮ್ಯ ಶರಣಬಸಪ್ಪ

**17. ದೆಹಲಿ ಕರ್ನಾಟಕ ಸಂಘ ಕಲಿಕಾ ಕೇಂದ್ರ ಜೂನಿಯರ್ಸ್** (ಮಕ್ಕಳು) : ಕುಮಾರಿಯರಾದ ಬಿ.ಎಸ್. ಸನ್ನಿಧಿ, ಎಸ್. ಸಾತ್ವಿಕ, ಸಿ.ಎಂ. ನವಿಕ, ಮೊನಿಷ್ಕ, ವೈಷ್ಣವಿ ಎಸ್.

**18. ಶ್ರೀನಿವಾಸಪುರಿ ಕಲಿಕಾ ಕೇಂದ್ರ (ಹುಡುಗರು) :** ಸೊಹಮ್, ಸಮರ್ಥ್, ಆರವ್, ಮಾನವ್, ರಾಜು., ಅಂಕಿತಾ, ಪವಿತ್ರ, ದಿಯಾ, ಸಾಕ್ಷಿ, ಕಲ್ಪನಾ, ಕಾವೇರಿ, ಎಸ್ತರ್, ತನಿಷಾ

**19. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ, :** ಹಾಡು–ಕರುನಾಡೆ ಕೈಚಾಚಿದೆ ನೋಡೆ, ಈ ಕನ್ನಡ ಮಣ್ಣನು ಮರಿಬೇಡ–ಕಾರ್ತಿಕ್ ಆಚಾರ್ಯ, ಸೃಷ್ಟಿ ಪೂಜಾರಿ, ನಿಷ್ಠಾ ಪೂಜಾರಿ, ವಿಧಿ ಕೊಠಾರಿ, ವಿಧಾನ್ ಕೊಠಾರಿ, ಹರ್ಷಿತಾ ಉಭಾಳೆ, ಸಾನ್ವಿ ಕೊಠಾರಿ, ಆರ್ಯ ಬಿಜೈ, ಸುನಿಲ್, ಸಾಕ್ಷಿ, ಸಾನ್ವಿ, ಆರುಶ್ ಬಿರಾದಾರ

**20. ದೆಹಲಿ ಒಕ್ಕಲಿಗ ಗೌಡ ಸಂಘ (ಮಕ್ಕಳು) :** ಖುಷಿ ಗೌಡ, ರೋಷಿಣಿ ಗೌಡ, ಶ್ರೇಯಾ ಜಿ., ಪರ್ಣಿಕ ಎಸ್. ಗೌಡ, ಇಶಾಂತ್ ಎಸ್. ಗೌಡ, ಕಾಶ್ವಿ ಎಸ್. ಗೌಡ.

## ದೆಹಲಿ ಕರ್ನಾಟಕ ಸಂಘದ 2024 ರ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತರು



ಶ್ರೀ ಸರವು ಕೃಷ್ಣ ಭಟ್

ಶ್ರೀ ಸರವು ಕೃಷ್ಣ ಭಟ್ ಅವರು 1ನೇ ಜುಲೈ 1957ರಲ್ಲಿ ಕೃಷಿಕ ಕುಟುಂಬದ ಸರವು ಶಂಕರ ಭಟ್ ಮತ್ತು ಶ್ರೀಮತಿ ಲಕ್ಷ್ಮೀ ಅಮ್ಮ ದಂಪತಿಗಳ ಮಗನಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕುಡ್ತ ಮುಗೇರು–ಕಲ್ಲಾಜೆ ಎಂಬಲ್ಲಿ ಜನಿಸಿದರು. ಪುತ್ತೂರು ತಾಲೂಕಿನ ಪೆರ್ಲಾಜೆಯಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ, ಧರ್ಮಸ್ಥಳದಲ್ಲಿ ಪ್ರೌಢ ಶಿಕ್ಷಣ, ಸುಳ್ಯದ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಪದವಿಪೂರ್ವ ಶಿಕ್ಷಣ, 1975ರಲ್ಲಿ ದೆಹಲಿಗೆ ಬಂದು ಶ್ರೀ ವೆಂಕಟೇಶ್ವರ ಕಾಲೇಜಿನಿಂದ ಬಿ.ಎ. ಪದವಿ ಪಡೆದು, ಕಂಪ್ಯೂಟರ್ ಪ್ರೋಗ್ರಾಮಿಂಗ್ ಕಲಿತು, 1980 ರಿಂದ ಕಂಪ್ಯೂಟೆಕ್ ಕಂಪನಿಯಲ್ಲಿ ಪ್ರೋಗ್ರಾಮರ್ ಆಗಿ, 18 ವರ್ಷ ಎಸ್ಎಇ ಇಂಡಿಯಾ ಲಿಮಿಟೆಡ್‌ನಲ್ಲಿ ಪ್ರೋಗ್ರಾಮರ್, ಸಿಸ್ಟಮ್ ಎನಾಲಿಸ್ಟ್ ಹಾಗೂ ಐಟಿ ಇನ್‌ಚಾರ್ಜ್ ಆಗಿ ದೆಹಲಿಯಲ್ಲಿ ಸೇವೆ ಸಲ್ಲಿಸಿದ್ದರು.

ಶ್ರೀ ಕೃಷ್ಣ ಭಟ್ ಅವರು 1992ರಲ್ಲಿ ಮೊದಲ ಬಾರಿಯಲ್ಲೇ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು. ಶ್ರೀ ಎ.ಪಿ. ಕುಮಟಾಕರ್, ಶ್ರೀ ಕೆ.ಆರ್. ನಾಗರಾಜ, ಡಾ. ಪುರುಷೋತ್ತಮ ಬಿಳಿಮಲೆ ಅವರ ಅಧ್ಯಕ್ಷತೆಯ ಅವಧಿ, ಹೀಗೆ, ಒಟ್ಟು ಐದು ಬಾರಿ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಆರ್ಥಿಕವಾಗಿ ಸಂಘದ ಸಂಕಷ್ಟದ ಆ ದಿನಗಳಲ್ಲಿ ಹಣದ ಕ್ರೋಢೀಕರಣ, ಸಂಘದ ಸಭಾಂಗಣ ನಿರ್ಮಿಸುವಲ್ಲಿ ಎಡರುತೊಡರುಗಳ ನಿವಾರಣೆ–ಹೀಗೆ ಅನವರತವೂ ಸವಾಲುಗಳನ್ನು ಎದುರಿಸಿ ಸಫಲತೆಯ ಹಾದಿಗೆ ತರುತ್ತಿದ್ದರು. ಸಂಘದ ಹೊಸ ಕಟ್ಟಡದ ಕನಸು ಕಾಣುವಲ್ಲಿಂದ, ಸಂಘದ ಆವರಣದಿಂದ ಕೆನರಾ ಬ್ಯಾಂಕ್ ಅನ್ನು ನ್ಯಾಯಾಲಯದ ಮೂಲಕ ತೆರವುಗೊಳಿಸಿ, ಅವರಿಂದಾದ ವಿಳಂಬಕ್ಕಾಗಿ ಹೆಚ್ಚುವರಿ ದಂಡ ಮೊತ್ತವನ್ನು ಪಡೆಯುವಲ್ಲಿ ದಾವೆ ಹೂಡಿ, ಸಂಘದ ಹಳೆಯ ಕಟ್ಟಡವನ್ನು ಕೆಡವಿ 2003 ರಲ್ಲಿ ಹೊಸ ಸಾಂಸ್ಕೃತಿಕ ಸಮುಚ್ಚಯದ ಶಂಕು ಸ್ಥಾಪನೆಯಿಂದ ನಿರ್ಮಾಣ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವಲ್ಲಿ ಶ್ರೀ ಕೃಷ್ಣ ಭಟ್ ಮುಖ್ಯ ಭೂಮಿಕೆ ವಹಿಸಿ ಗಣನೀಯ ಸೇವೆ ನೀಡಿದ್ದಾರೆ. ಸಂಘವನ್ನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ, ಶೈಕ್ಷಣಿಕವಾಗಿ ಸದೃಢಗೊಳಿಸುವಲ್ಲಿ ಅವರ ಕೊಡುಗೆ ಸ್ತುತ್ಯಾರ್ಹ.

ತಮ್ಮ ಬಾಲ್ಯದಲ್ಲಿ ಚೌಡೇಶ್ವರಿ ಮೇಳದಲ್ಲಿ. ಯಕ್ಷಗಾನ ತಿರುಗಾಟವನ್ನು ಸಹ ಮಾಡಿದ್ದ ಶ್ರೀ ಕೃಷ್ಣ ಭಟ್ ಅವರು, ದೆಹಲಿಯಲ್ಲಿ 'ಕನ್ನಡ ಚೈತನ್ಯ' ಸ್ಥಾಪಿಸಿ 1990ರ ಅವಧಿಯಲ್ಲಿ ಹಲವಾರು ನಾಟಕಗಳನ್ನು ನಿರ್ದೇಶಿಸಿ ಅಭಿನಯಿಸಿದ್ದರು. ಕರಾವಳಿ ಜಾನಪದ ಕಲೆ ಯಕ್ಷಗಾನವನ್ನು ಯಕ್ಷ ಮಂಜೂಷ ಸಂಸ್ಥೆಯ ಸಂಯೋಜಕರಾಗಿ ಸಂಘದಲ್ಲಿ, ದೇಶದಾದ್ಯಂತ 540ಕ್ಕೂ ಹೆಚ್ಚಿನ ಪ್ರದರ್ಶನಗಳನ್ನು ಆಯೋಜಿಸಿ ಮೊದಲ ಬಾರಿ ಹಿಂದಿಯಲ್ಲಿ ಯಕ್ಷಗಾನ ಮಾಡಿಸಿ ಭಾರತ ಮತ್ತು ಅಮೇರಿಕಾದ ಉದ್ದಗಲಕ್ಕೂ ಸಂಯೋಜಿಸಿದ್ದಾರೆ.

ದೆಹಲಿ ಗೋಕರ್ಣ ಮಂಡಲದ ಕಾರ್ಯದರ್ಶಿ ಹಾಗು ಸೌತ್ ಕೆನರಾ ಕ್ಲಬ್‌ನ ಕಾರ್ಯದರ್ಶಿಯಾಗಿದ್ದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿಯೂ, ಎರಡು ಬಾರಿ ಅಧ್ಯಕ್ಷರಾಗಿದ್ದು, ಶಾಲೆಯಲ್ಲಿ ಅಭಿವ್ಯಕ್ತ ಮಾಸಪತ್ರಿಕೆಯ ಪ್ರಾರಂಭ, 26 ಮಂದಿ ಶಿಕ್ಷಕರ ನೇರ ನೇಮಕಾತಿ ಹಾಗು ಪ್ರಾಂಶುಪಾಲರ ನೇಮಕಾತಿ, ಸಂಘದ ಸಹಕಾರದಿಂದ ಸ್ಮಾರ್ಟ್ ಕ್ಲಾಸ್‌ಗಳ ಪ್ರಾರಂಭ, ಮಕ್ಕಳಿಗೆ ತರಬೇತಿ ಕೊಡಿಸಿ ನಾಟಕ ಪ್ರದರ್ಶನಕ್ಕೆ ಅನುವು ಮಾಡಿಕೊಟ್ಟಿದ್ದು, ಶಾಲೆಯ ಫಲಿತಾಂಶವನ್ನು ಶೇಕಡಾವಾರು ಮಾತ್ರವಲ್ಲದೆ ಗುಣಾತ್ಮಕವಾಗಿ ಮೇಲ್ದರ್ಜೆಗೇರಿಸಿದ್ದು ಇವರ ಪ್ರಮುಖ ಕಾರ್ಯ ಸಾಧನೆಗಳಲ್ಲಿ ಕೆಲವು.

ಶ್ರೀ ಕೃಷ್ಣ ಭಟ್ ಅವರು ಆಕಾಶವಾಣಿ ದೆಹಲಿ ವಾರ್ತಾ ವಾಚಕರಾಗಿ, ಅನುವಾದಕರಾಗಿ, ಟಿ.ವಿ. ಜಾಹೀರಾತುಗಳಿಗೆ ಧ್ವನಿ ಹಾಗೂ ಕಮರ್ಷಿಯಲ್ ವಾಯ್ಸ್ ಓವರ್ ಆರ್ಟಿಸ್ಟ್ ಆಗಿ ಉತ್ತಮ ಸಾಧನೆ ಮಾಡಿದ್ದಾರೆ. ಇತ್ತೀಚೆಗೆ ಪ್ರಧಾನಿ ಮೋದಿಯವರ ಮನ್‌ಕೀ ಬಾತ್ ಆಧಾರಿತ 'ಸಾಮಾಜಿಕ ಒಳಿತಿನ ಬೆಳಕು' ಹಾಗೂ 'ಎಕ್ಸಾಮ್ ವಾರಿಯರ್ಸ್' ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ದೇಶ–ವಿದೇಶದ ಹಲವಾರು ಸಂಘ ಸಂಸ್ಥೆಗಳಲ್ಲಿ ಸನ್ಮಾನ ಪ್ರಶಸ್ತಿಗಳು ಇವರನ್ನು ಅರಸಿ ಬಂದಿವೆ. ಡಾ. ರಾಜ್ ಕುಮಾರ್ ಫೌಂಡೇಶನ್ ಟ್ರಸ್ಟ್ ಕೊಡಮಾಡುವ 'ಅಪ್ಪಾಜಿ ಸೌಹಾರ್ದ ಪ್ರಶಸ್ತಿ' ಪಡೆದ ಮೊಟ್ಟ ಮೊದಲ ಹೊರನಾಡ ಕನ್ನಡಿಗ ಶ್ರೀ ಸರವು ಕೃಷ್ಣ ಭಟ್. 2024ರ ಯಕ್ಷರಂಗದ ಅತಿದೊಡ್ಡ ಸಂಪಾಜೆಯ ಯಕ್ಷೋತ್ಸವದಲ್ಲಿ "ಕಲಾ ಪೋಷಕ" ಪ್ರಶಸ್ತಿ ಇವರಿಗೆ ಸಂದಿದೆ.

ದೆಹಲಿ ಕರ್ನಾಟಕ ಸಂಘ ಹಾಗು ದೆಹಲಿ ಕನ್ನಡ ಶಾಲೆಯಲ್ಲಿ ಕನ್ನಡ ನಾಡು, ನುಡಿ, ಭಾಷೆ, ಕಲೆ, ಸಂಸ್ಕೃತಿಗೆ ಸಲ್ಲಿಸಿರುವ ಅಪಾರ ಸೇವೆಯನ್ನು ಪರಿಗಣಿಸಿ ಶ್ರೀ ಸರವು ಕೃಷ್ಣ ಭಟ್ ಅವರಿಗೆ 2024ನೇ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ದಿನಾಂಕ 24.11.2024ರಂದು ಸಂಘದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಸಂಭ್ರಮದಲ್ಲಿ ನೀಡಿ ಗೌರವಿಸಲಾಗಿದೆ.

ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.❑



ಡಾ. ಕೆ.ಎಸ್. ಸೋಮಶೇಖರ್

ನವದೆಹಲಿಯ ಸಂಸತ್ ಭವನದಲ್ಲಿ ರಾಜ್ಯಸಭಾ ಸೆಕ್ರೆಟರಿಯೇಟ್‌ನಲ್ಲಿ ಹೆಚ್ಚುವರಿ ಕಾರ್ಯದರ್ಶಿಗಳಾಗಿರುವ ಡಾ. ಕೆ.ಎಸ್. ಸೋಮಶೇಖರ್ ಅವರು ಮೂಲತಃ ಕೋಲಾರ ಜಿಲ್ಲೆಯವರು. ಶ್ರೀನಿವಾಸಪುರ ತಾಲ್ಲೂಕಿನ ನೀಲಟೂರು ಗ್ರಾಮದಲ್ಲಿ ಕೃಷಿಕ ಕುಟುಂಬದಲ್ಲಿ ಶ್ರೀ ಶ್ರೀನಿವಾಸ ರೆಡ್ಡಿ ಮತ್ತು ಶ್ರೀಮತಿ ಜಯಮ್ಮ ದಂಪತಿಗಳ ಸುಪುತ್ರರಾಗಿ 1967ರಲ್ಲಿ ಜನಿಸಿದರು. ಇವರು ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿ ಮತ್ತು ಪ್ರೌಢ ಶಿಕ್ಷಣವನ್ನು ಶ್ರೀನಿವಾಸಪುರದಲ್ಲಿ ಪಡೆದಿರುತ್ತಾರೆ. ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ, ಬಿ.ಎಡ್ ಮತ್ತು ಎಂ.ಎ. (ಲಿಟರೇಚರ್) ಮತ್ತು ಎಂ.ಫಿಲ್ ಪದವಿಗಳನ್ನು ಪಡೆದಿರುವ ಇವರು 2016 ರಲ್ಲಿ ಕುವೆಂಪು ವಿಶ್ವವಿದ್ಯಾಲಯದಿಂದ 'ಪ್ರೇಮ್‌ಚಂದ್ ಮತ್ತು ಕುವೆಂಪು ಸಾಹಿತ್ಯದಲ್ಲಿ ರೈತರ ಭವಣೆಯ ಕುರಿತು ತುಲನಾತ್ಮಕ ಅಧ್ಯಯನ' ವಿಷಯದಲ್ಲಿ ಪಿಎಚ್‌ಡಿ ಪದವಿ ಗಳಿಸಿರುತ್ತಾರೆ.

ಇವರ ಪತ್ನಿ ಶ್ರೀಮತಿ ಪಂಕಜಾ ಅವರು ರೈಲ್ವೆ ಇಲಾಖೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿರುತ್ತಾರೆ. ಮಗಳು ಡಾ. ರಚನಾ ವೈದ್ಯೆಯಾಗಿದ್ದಾರೆ ಹಾಗು ಮಗ ಕು. ದ್ರುವ ಬೆಂಗಳೂರಿನಲ್ಲಿ ಕ್ರೈಸ್ಟ್ ಕಾಲೇಜಿನಲ್ಲಿ ಬಿಬಿಎ, ಎಲ್‌ಎಲ್‌ಬಿ ವ್ಯಾಸಂಗ ಮಾಡುತ್ತಿದ್ದಾರೆ. ಬಾಲ್ಯದಿಂದಲೇ ಕೃಷಿಯಲ್ಲಿ ಅಪಾರ ಅಭಿರುಚಿ ಬೆಳೆಸಿಕೊಂಡ ಶ್ರೀಯುತರು ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ವಿಶೇಷ ಆಸಕ್ತಿ ಹೊಂದಿದ್ದಾರೆ.

ಕಳೆದ 31 ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿರುವ ಡಾ. ಸೋಮಶೇಖರ್ ಅವರು 1993 ರಿಂದ ಸಂಸತ್ ಭವನದ ರಾಜ್ಯಸಭಾ ಸೆಕ್ರಟರಿಯೇಟ್‌ನಲ್ಲಿ ಪಾರ್ಲಿಮೆಂಟರಿ ಅನುವಾದಕರಾಗಿ ವೃತ್ತಿ ಜೀವನ ಆರಂಭಿಸಿದ್ದರು. ನಂತರ ನಾಗರೀಕ ಉಡಾಯನ ಮಂತ್ರಾಲಯದಲ್ಲಿ ಕೇಂದ್ರ ಕ್ಯಾಬಿನೆಟ್ ಮತ್ತು ರಾಜ್ಯ ಮಂತ್ರಿಗಳಿಗೆ ಹೆಚ್ಚುವರಿ ಕಾರ್ಯದರ್ಶಿಗಳಾಗಿ, ಜವಳಿ ಸಚಿವಾಲಯದಲ್ಲಿ ಕೇಂದ್ರ ರಾಜ್ಯಮಂತ್ರಿಗಳ ಹೆಚ್ಚುವರಿ ಆಪ್ತ ಕಾರ್ಯದರ್ಶಿಯಾಗಿ ಮತ್ತು ರೈಲ್ವೇ ಇಲಾಖೆಯಲ್ಲಿ ಕೇಂದ್ರ ರಾಜ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳಾಗಿ ನಿಯುಕ್ತಿಗೊಂಡು ಸೇವೆ ಸಲ್ಲಿಸಿದ್ದರು. ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ಜಂಟಿ ನಿರ್ದೇಶಕ (ಆಡಳಿತ)ರಾಗಿ, ಕರ್ನಾಟಕ ಸರ್ಕಾರದ ಉಪ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿಯಾಗಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಕಾರ್ಯದರ್ಶಿಗಳಾಗಿ ಹಾಗು ನವದೆಹಲಿಯ ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತರಾಗಿಯೂ ಈ ಹಿಂದೆ ಕಾರ್ಯ ನಿರ್ವಹಿಸಿದ್ದಾರೆ.

ರಾಜ್ಯಸಭಾ ಸೆಕ್ರಟರಿಯೇಟ್‌ನಲ್ಲಿ ಆರಂಭದಲ್ಲಿ ಪಾರ್ಲಿಮೆಂಟರಿ ಅನುವಾದಕರಾಗಿ ಕಾರ್ಯ ನಿರ್ವಹಿಸಿ ತಮ್ಮ ಕಾರ್ಯಕ್ಷಮತೆಯಿಂದ ಹಂತ ಹಂತವಾಗಿ ಭಡ್ತಿ ಪಡೆದು ಉಪ ನಿರ್ದೇಶಕರು, ಜಂಟಿ ನಿರ್ದೇಶಕರು, ನಿರ್ದೇಶಕರು, ಜಂಟಿ ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸಿ, ತಮ್ಮ ದಕ್ಷ ಆಡಳಿತ ಕಾರ್ಯ ವೈಖರಿಯಿಂದ ಪ್ರಶಂಸೆ ಪಡೆದಿರುವ ಡಾ. ಕೆ.ಎಸ್. ಸೋಮಶೇಖರ್ ಅವರು ಜನವರಿ 2024 ರಿಂದ ಪ್ರಸ್ತುತ ಹೆಚ್ಚುವರಿ ಕಾರ್ಯದರ್ಶಿಗಳಾಗಿರುವುದು ಸಮಸ್ತ ದೆಹಲಿ ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ಶ್ರೀಯುತರು ಹಲವಾರು ತರಬೇತಿ ಶಿಬಿರಗಳಲ್ಲಿ ಹಾಗು ರಾಷ್ಟ್ರೀಯ ಮತ್ತು ಲಂಡನ್, ಬ್ರುಸೆಲ್ಸ್, ಮಾಸ್ಕೋ, ಜಿನೀವಾಗಳಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ಇತ್ತೀಚೆಗೆ ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಸ್ವಿಡ್ಜರ್‌ಲ್ಯಾಂಡ್‌ನ ಜಿನಿವಾದಲ್ಲಿ ನಡೆದ 149ನೇ ಅಸೆಂಬ್ಲಿ ಆಫ್ ಇಂಟರ್ ಪಾರ್ಲಿಮೆಂಟರಿ ಯೂನಿಯನ್ ಸಮ್ಮೇಳನದಲ್ಲಿ ಭಾರತೀಯ ಪಾರ್ಲಿಮೆಂಟರಿ ಯೂನಿಯನ್ ಪರವಾಗಿ ಭಾಗವಹಿಸಿರುತ್ತಾರೆ.

ಸಂಘದ ಆಜೀವ ಸದಸ್ಯರಾದ ಡಾ. ಕೆ.ಎಸ್. ಸೋಮಶೇಖರ್ ಅವರು 1993ರಿಂದ ದೆಹಲಿಯಲ್ಲಿನ ತಮ್ಮ ಸೇವಾವಧಿಯಲ್ಲಿ ದೆಹಲಿ ಕರ್ನಾಟಕ ಸಂಘ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಈ ಹಿಂದೆ ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ತಮ್ಮ ಸಂಪರ್ಕಕ್ಕೆ ಬಂದ ಎಲ್ಲಾ ಕನ್ನಡಿಗರಿಗೆ ಅವಶ್ಯವಿರುವ ನೆರವು, ಸಲಹೆ, ಸಹಕಾರ ನೀಡುತ್ತಿದ್ದಾರೆ. ಹಲವಾರು ಸಂಘ ಸಂಸ್ಥೆಗಳು ಹಾಗು ವಿವಿಧ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಚಿವಾಲಯಗಳು ಇವರನ್ನು ಸನ್ಮಾನಿಸಿವೆ. ಕನ್ನಡ ನಾಡು, ನುಡಿ, ಭಾಷೆ, ಕಲೆ, ಸಂಸ್ಕೃತಿಗೆ ಮತ್ತು ಕನ್ನಡಿಗರಿಗೆ ಇವರು ಸಲ್ಲಿಸಿರುವ ಸೇವೆಯನ್ನು ಗುರುತಿಸಿ 2024ನೇ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ದಿನಾಂಕ 24.11.2024ರಂದು ಸಂಘದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಸಂಭ್ರಮದಲ್ಲಿ ನೀಡಿ ಗೌರವಿಸಲಾಗಿದೆ. ಶ್ರೀಯುತರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಗೌರವ ಪೂರ್ವಕ ಅಭಿನಂದನೆಗಳು.❑



ಶ್ರೀ ಬಸ್ತಿ ದಿನೇಶ್ ಶೆಣೈ

ಶ್ರೀ ಬಸ್ತಿ ದಿನೇಶ್ ಶೆಣೈ ಅವರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರು, ದಿ. ಬಸ್ತಿ ವಾಮನ ಶೆಣೈ ಮತ್ತು ಶ್ರೀಮತಿ ಸಾವಿತ್ರಿ ಶೆಣೈ ದಂಪತಿಗಳ ಸುಪುತ್ರನಾಗಿ ದಿನಾಂಕ 04.02.1968 ರಲ್ಲಿ ಬಂಟ್ವಾಳದಲ್ಲಿ ಜನಿಸಿದರು. ತಮ್ಮ ಬಾಲ್ಯದ ಜೀವನವನ್ನು ರಾಯ್ ಭಾಗ್, ಪಾಣೆಮಂಗಳೂರು, ಬಂಟ್ವಾಳ, ಶಿವಮೊಗ್ಗ ಮತ್ತು ಚಿಕ್ಕಮಗಳೂರಿನಲ್ಲಿ ಅವರು ಕಳೆದರು. ಬಂಟ್ವಾಳದ ಎಸ್.ವಿ.ಎಸ್. ಕಾಲೇಜಿನಿಂದ 1987–88 ರಲ್ಲಿ ಬಿ.ಕಾಂ. ಪದವಿಯನ್ನು ಪಡೆದ ಶ್ರೀಯುತರು 1997 ರಲ್ಲಿ ದೆಹಲಿಗೆ ಬಂದ ನಂತರ ನೋಯ್ಡಾದಲ್ಲಿ ಸಿನಿಮಾಟೋಗ್ರಫಿ ಕ್ರಾಶ್ ಕೋರ್ಸ್‌ನ ತರಬೇತಿ ಪಡೆದರು. ಲೈಟ್‌ಬಾಯ್, ಕ್ಯಾಮರಾ ಅಸಿಸ್ಟೆಂಟ್, ಅಸಿಸ್ಟೆಂಟ್ ಕ್ಯಾಮರಾಮ್ಯಾನ್ ತದನಂತರ ಕ್ಯಾಮರಾಮ್ಯಾನ್ ಆಗಿ ಕೆಲಸ ಮಾಡಿರುತ್ತಾರೆ.

ಶ್ರೀ ಶೆಣೈ ಅವರು ದೆಹಲಿಯಲ್ಲಿ ಫೋಟೋಗ್ರಫಿಯಲ್ಲಿ, ಸಿನಿಮಾಟೋಗ್ರಫಿಯಲ್ಲಿ, ಕಾರ್ಪೋರೇಟ್ ಫಿಲ್ಮ್, ಜಾಹೀರಾತು ಫಿಲ್ಮ್ ನಿರ್ಮಾಣದಲ್ಲಿ ತೊಡಗಿಸಿಕೊಂಡು ತದ ನಂತರ 2000–04 ರಲ್ಲಿ ಕಿರುಚಿತ್ರ ನಿರ್ದೇಶನ ಹಾಗು ಚಲನಚಿತ್ರ ನಿರ್ಮಾಣಕ್ಕೆ ಹೆಜ್ಜೆ ಇಟ್ಟಿದ್ದರು. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ 'ಮಧ್ಯಂತರ' ಕಿರು ಚಲನಚಿತ್ರವನ್ನು ರಚಿಸಿ, ನಿರ್ದೇಶಿಸಿ, ನಿರ್ಮಿಸಿದ್ದಾರೆ. 2022 ರಲ್ಲಿ ನಿರ್ಮಾಣವಾದ ಈ ಚಲನಚಿತ್ರ ಗೋವಾದಲ್ಲಿ ನಡೆದ ಫಿಲ್ಮ್ ಫೆಸ್ಟಿವಲ್‌ಗಳಲ್ಲಿ ಭಾರತೀಯ ಪನೋರಮಾಕ್ಕೆ ಆಯ್ಕೆಯಾಗಿ ಪ್ರದರ್ಶನಗೊಂಡಿದೆ ಹಾಗು ಸಂಘದ ಸಭಾಂಗಣದ ಬೆಳ್ಳಿತೆರೆಯ ಮೇಲೆ ಪ್ರದರ್ಶನಗೊಂಡ ಈ ಕಿರುಚಿತ್ರವನ್ನು ದೆಹಲಿ ಕನ್ನಡಿಗರು ವೀಕ್ಷಿಸಿ ಸಂಭ್ರಮಿಸಿ ಆನಂದಿಸಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ಬಸ್ತಿ ದಿನೇಶ್ ಶೆಣೈ ಅವರ ಪತ್ನಿ ಶ್ರೀಮತಿ ಶೋಭಾ ಶೆಣೈ ಒಬ್ಬ ಗೃಹಿಣಿ, ಅವರ ಮಗ ಕು. ಆನಂದ ಶೆಣೈ ಒಬ್ಬ ಪ್ರತಿಭಾವಂತ ಅಂತರರಾಷ್ಟ್ರೀಯ ಕಾಮಿಕ್ ಆರ್ಟಿಸ್ಟ್ ಆಗಿದ್ದಾರೆ. ಶ್ರೀ ಬಸ್ತಿ ದಿನೇಶ್ ಶೆಣೈ ಅವರು ದೆಹಲಿ ಕರ್ನಾಟಕ ಸಂಘದ ಜೊತೆ ನಿಕಟ ಒಡನಾಟ ಹೊಂದಿದ್ದು, ಸಂಘದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. 5–6 ವರ್ಷ ಕ್ಯಾಮರಾಮ್ಯಾನ್ ಆಗಿ ಕಾರ್ಯ ನಿರ್ವಹಿಸಿದ ತರುವಾಯ ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ಭವನದಲ್ಲೂ ಫೋಟೋಗ್ರಾಫರ್ ಆಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಸಂಘದ 'ಅಭಿಮತ' ಪತ್ರಿಕೆಯ ಮುಖಪುಟಕ್ಕೆ ಆಕರ್ಷಕ ಛಾಯಾಚಿತ್ರವನ್ನು ಈ ಹಿಂದೆ ನೀಡಿದ ಶ್ರೇಯ ಶ್ರೀ ಶೆಣೈ ಅವರಿಗೆ ಸಲ್ಲುತ್ತದೆ.

ಶ್ರೀ ಬಸ್ತಿ ದಿನೇಶ್ ಶೆಣೈ ಅವರ 'ಮಧ್ಯಂತರ' ಚಿತ್ರಕ್ಕೆ 2022 ರ ಸಾಲಿನ 70ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಸ್ವರ್ಣಕಮಲ ಪ್ರಶಸ್ತಿಯ ತಮ್ಮ ಚೊಚ್ಚಲ ಚಿತ್ರದಲ್ಲಿ ಅತ್ಯುತ್ತಮ ನಿರ್ದೇಶನಕ್ಕಾಗಿ ಲಭಿಸಿರುವುದು ಹಾಗು ದಿನಾಂಕ 18.10.2024 ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ಸಮಾರಂಭದಲ್ಲಿ ದೇಶದ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರಿಂದ ಈ ಪ್ರಶಸ್ತಿಯನ್ನು ಅವರು ಸ್ವೀಕರಿಸಿರುವುದು ಎಲ್ಲಾ ದೆಹಲಿ ಕನ್ನಡಿಗರಿಗೆ ಅತ್ಯಂತ ಹೆಮ್ಮೆ ತಂದಿದೆ. ಇವರು ನಿರ್ದೇಶಿಸಿರುವ 'ಮಧ್ಯಂತರ' ಕಿರು ಚಿತ್ರದ ಎಡಿಟಿಂಗ್‌ಗಾಗಿ ಇನ್ನೋರ್ವ ಕನ್ನಡಿಗ ಶ್ರೀ ಸುರೇಶ್ ಅರಸ್ ಅವರಿಗೆ 'ರಜತ ಕಮಲ' ಪ್ರಶಸ್ತಿ ಸಿಕ್ಕಿರುವುದೂ ಶ್ರೀ ಶೆಣೈ ಅವರಿಗೆ ಸಂದ ಗೌರವವಾಗಿದೆ.

ಕನ್ನಡ ನಾಡು, ನುಡಿ, ಭಾಷೆ, ಕಲೆ, ಸಂಸ್ಕೃತಿಗೆ ಮತ್ತು ಕನ್ನಡಿಗರಿಗೆ ಶ್ರೀ ದಿನೇಶ್ ಶೆಣೈ ಅವರು ಸಲ್ಲಿಸಿರುವ ಸೇವೆಯನ್ನು ಗುರುತಿಸಿ 2024ನೇ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ದಿನಾಂಕ 24.11.2024ರಂದು ಸಂಘದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಸಂಭ್ರಮದಲ್ಲಿ ನೀಡಿ ಗೌರವಿಸಲಾಗಿದೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘದಿಂದ ಅಭಿನಂದನೆಗಳು.❑



ಶ್ರೀಮತಿ ರಾಜೇಶ್ವರಿ ಭಟ್

ಶ್ರೀಮತಿ ರಾಜೇಶ್ವರಿ ಭಟ್ ಅವರು ಸಾಂಸ್ಕೃತಿಕವಾಗಿ ಶ್ರೀಮಂತವಾದ ಕುಟುಂಬದಲ್ಲಿ ವಿದ್ವಾನ್ ಅಲಂಪಾಡಿ ವೆಂಕಟೇಶ್ ಶ್ಯಾನ್‌ಭಾಗ್ ಹಾಗೂ ಜಲಜ ವೆಂಕಟೇಶ್ ದಂಪತಿಗಳ ಮಗಳಾಗಿ ಕಾಸರಗೋಡಿನಲ್ಲಿ ಜನಿಸಿದರು. ಜಮೀನ್ದಾರರು ಹಾಗು ಪ್ರಸಿದ್ಧ ಸಂಗೀತಗಾರರಾಗಿದ್ದ ಇವರ ತಂದೆಯವರು ಅನೇಕ ಕಲಾವಿದರಿಗೆ ತನು-ಮನ-ಧನ ಪ್ರೋತ್ಸಾಹ ನೀಡಿದ್ದಂತಹ ಕಲಾ ಪೋಷಕರೂ ಆಗಿದ್ದರು. ತಮ್ಮ ಬಾಲ್ಯದಲ್ಲೇ ಶೈಕ್ಷಣಿಕ ಅಧ್ಯಯನದ ಜೊತೆ ಜೊತೆಗೆ ಉತ್ತಮ ಸಾಂಸ್ಕೃತಿಕ ಆಸಕ್ತಿಯನ್ನು ಬೆಳೆಸಿಕೊಂಡಿದ್ದ ಶ್ರೀಮತಿ ಭಟ್ ಅವರು ಹಲವಾರು ಯಕ್ಷಗಾನದಲ್ಲಿ ಅಭಿನಯ ಮತ್ತು ಭರತನಾಟ್ಯ ಪ್ರದರ್ಶನ ನೀಡಿದ್ದರು. ಪ್ರೌಢ ಶಿಕ್ಷಣವನ್ನು ಕಾಸರಗೋಡಿನಲ್ಲಿ ಪಡೆದ ನಂತರ ಕಾಸರಗೋಡಿನ ಸರ್ಕಾರಿ ಕಾಲೇಜಿನಿಂದ ಬಿ.ಎ. (ಎಕನಾಮಿಕ್ಸ್) ಮತ್ತು ಕೆಎಸ್‌ಎಸ್‌ಇಬಿ ಯಿಂದ ಕರ್ನಾಟಕ ಸಂಗೀತದಲ್ಲಿ ಹಾಗು ಭರತನಾಟ್ಯದಲ್ಲಿ ವಿದ್ವತ್ ಪದವಿಗಳನ್ನು ಪಡೆದಿರುತ್ತಾರೆ. ಶ್ರೀಮತಿ ಭಟ್ ಅವರು ತಮ್ಮ ಕಲಾ ಪಯಣದಲ್ಲಿ ತಮ್ಮ ತಂದೆಯವರಿಂದ ಮತ್ತು ಖ್ಯಾತ ಸಂಗೀತ ಕಲಾವಿದರಾದ ಶ್ರೀಮತಿ ಎಂ.ಎಸ್. ಶೀಲ, ಡಾ. ಲೀಲಾ ಓಂಚೆರಿ ಹಾಗು ಡಾ. ಕೆ. ವಾಗೀಶ್ ಕೃಷ್ಣ. ಅವರಿಂದ ಮಾರ್ಗದರ್ಶನ ಪಡೆದರು. ಶ್ರೀ ಉಲ್ಲಾಳ ಮೋಹನ್ ಕುಮಾರ್ ಮತ್ತು ಶ್ರೀಮತಿ ಶಶಿಕಲಾ ಅವರ ಸಹಯೋಗದೊಂದಿಗೆ ಉತ್ತಮ ನೃತ್ಯ ಶಿಕ್ಷಕಿಯಾಗಿ ಸಾಧನೆ ಮಾಡಿದ್ದಾರೆ.

ಸಾಂಪ್ರದಾಯಿಕವಾಗಿ ಪುರುಷ ಪ್ರಧಾನವಾಗಿದ್ದ ಕರಾವಳಿಯ ಜಾನಪದ ಕಲೆಯಾದ ಯಕ್ಷಗಾನದಲ್ಲಿ ಮಹಿಳಾ ಕಲಾವಿದರು ಭಾಗವಹಿಸುವಿಕೆಯಲ್ಲಿ ಪ್ರವರ್ತಕರಾಗಿ ಪ್ರಮುಖ ಪಾತ್ರ ವಹಿಸಿದ್ದ ಶ್ರೀಮತಿ ರಾಜೇಶ್ವರಿ ಭಟ್ ಕಾಸರಗೋಡು ಮಹಿಳಾ ಯಕ್ಷಗಾನ ತಂಡದಲ್ಲಿ ಪ್ರಮುಖ ವ್ಯಕ್ತಿಯಾಗಿ ಹೊರ ಹೊಮ್ಮಿದರು. ಅವರು ಯಕ್ಷಗಾನಗಳಲ್ಲಿ ಅಭಿನಯಿಸಿದ ಕೃಷ್ಣ, ಅಭಿಮನ್ಯು ಮತ್ತು ಬಬ್ರುವಾಹನನ ಪಾತ್ರಗಳು ಅಪಾರ ಮೆಚ್ಚುಗೆ ಗಳಿಸಿವೆ. ಈ ತಂಡದ ಮೂಲಕ ದೂರದರ್ಶನ ವಾಹಿನಿಯಲ್ಲಿ ವ್ಯಾಪಕವಾಗಿ ಪ್ರದರ್ಶನ ನೀಡಿದ್ದು ಮಾತ್ರವಲ್ಲದೆ ಸಂಯೋಜಕಿ ಮತ್ತು ನಿರ್ದೇಶಕಿಯಾಗಿ, ವಿವಿಧ ಯಕ್ಷಗಾನ ಬ್ಯಾಲೆ ರಚಿಸುವ ಮತ್ತು ಮೇಲ್ವಿಚಾರಣೆ ಮಾಡುತ್ತಾ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಶ್ರೀಮತಿ ರಾಜೇಶ್ವರಿ ಭಟ್ ಹರಿಕಥೆಯಲ್ಲಿ ತಮ್ಮ ಅಸಾಧಾರಣ ಕೌಶಲ್ಯವನ್ನು ಪ್ರದರ್ಶಿಸುತ್ತಾ ಸುಮಾರು 200ಕ್ಕೂ ಹೆಚ್ಚು ಹರಿಕಥೆಗಳನ್ನು ನಡೆಸಿಕೊಟ್ಟಿದ್ದಾರೆ. ಹರಿಕಥೆಯಲ್ಲಿ ಸಂಗೀತದ ಭಾವನಾತ್ಮಕ ಅಭಿವ್ಯಕ್ತಿ, ನಾಟಕೀಯ ವ್ಯಾಖ್ಯಾನ ಮತ್ತು ಆಳವಾದ ಆಧ್ಯಾತ್ಮಿಕ ಚಿಂತನೆಗಳಿಂದ ಗಣನೀಯ ಸಾಧನೆ ಮಾಡಿದ್ದಾರೆ, ಇವರು ಕರ್ನಾಟಕದಾದ್ಯಂತ ನೀಡಿದ ಹಲವಾರು ಸಂಗೀತ ಮತ್ತು ಹರಿಕಥೆ ಪ್ರದರ್ಶನಗಳು ವ್ಯಾಪಕವಾಗಿ ಗುರುತಿಸಲ್ಪಟ್ಟಿವೆ.

'ಆಡು ಮುಟ್ಟದ ಸೊಪ್ಪಿಲ್ಲ, ರಾಜೇಶ್ವರಿ ಭಟ್ ಭಾಗವಹಿಸದ ಕಲಾ ಪ್ರಕಾರವಿಲ್ಲ'ವೆಂದು ಗುರುತಿಸಿಕೊಂಡು ಬಹುಮುಖ ಕಲಾವಿದೆಯಾಗಿ, ಶಿಕ್ಷಕಿಯಾಗಿ, ನೃತ್ಯಗಾರ್ತಿಯಾಗಿ, ನೃತ್ಯ ಸಂಯೋಜಕಿಯಾಗಿ, ಸಂಗೀತಗಾರ್ತಿಯಾಗಿ ಹೆಸರುವಾಸಿಯಾಗಿರುವ ಇವರು ದೇಶಾದ್ಯಂತ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಕಳೆದ 28 ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿರುವ ಇವರು ಪ್ರಸ್ತುತ ಮಯೂರ್ ವಿಹಾರ್‌ನಲ್ಲಿರುವ ತಮ್ಮ ತರಬೇತಿ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಈ ತರಬೇತಿ ಕೇಂದ್ರದಲ್ಲಿ ಸುಮಾರು 75 ವಿದ್ಯಾರ್ಥಿಗಳು ಭರತನಾಟ್ಯ ಮತ್ತು ಕರ್ನಾಟಕ ಸಂಗೀತ ಅಭ್ಯಾಸ ಮಾಡುತ್ತಿದ್ದಾರೆ. ಈವರೆಗೆ 3000 ಕ್ಕೂ ಹೆಚ್ಚು ಮಕ್ಕಳು ಇವರಿಂದ ತರಬೇತಿ ಪಡೆದಿರುತ್ತಾರೆ. ಇವರ ಸಮರ್ಪಣೆ, ಪ್ರತಿಬದ್ಧತೆ ಮತ್ತು ಕೊಡುಗೆಗಳು ದೆಹಲಿ ಎನ್‌ಸಿಆರ್ ನಲ್ಲಿ ಈ ಕಲಾ ಪ್ರಕಾರಗಳ ಬೆಳವಣಿಗೆ ಮತ್ತು ಪ್ರಚಾರಕ್ಕೆ ಪ್ರಮುಖ ಪಾತ್ರ ವಹಿಸಿವೆ.

ಬಹುಭಾಷಾ ಪ್ರವೀಣೆಯಾದ ಇವರು ಕನ್ನಡ, ತುಳು, ಮಲಯಾಳಂ, ಮರಾಠಿ, ತಮಿಳು, ತೆಲುಗು, ಹಿಂದಿ, ಇಂಗ್ಲಿಷ್ ಭಾಷೆಗಳನ್ನು ಬಲ್ಲವರು. ಇವರ ಪತಿ ಶ್ರೀ ಪಾಂಡುರಂಗ ಭಟ್ ಖಾಸಗಿ ಕಂಪನಿಯೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಮೆಕ್ಯಾನಿಕಲ್ ಇಂಜಿನಿಯರ್ ಆಗಿರುವ ಇವರ ಮಗ ಶ್ರೀ ಶ್ರೀರಾಗ್ ಭಟ್ ಗುರುಗಾಂವ್‌ನ ಅಮೆರಿಕನ್ ಎಕ್ಸ್‌ಪ್ರೆಸ್ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದಾರೆ. ಸಂಘದ ಆಜೀವ ಸದಸ್ಯರಾದ ಇವರು ಸಂಘದ ವೇದಿಕೆಯಲ್ಲಿ ತಮ್ಮ ಶಿಷ್ಯೆಯರಿಂದ ನೃತ್ಯ ಪ್ರದರ್ಶನ, ಹಾಡು ಮುಂತಾದ ಕಾರ್ಯಕ್ರಮಗಳನ್ನು ಸಹ ನೀಡಿದ್ದಾರೆ. ಸಂಘದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ತೀರ್ಪುಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ. ಆಸಕ್ತ ಕನ್ನಡಿಗರಿಗೆ ಸಂಗೀತ ಮತ್ತು ನೃತ್ಯ ವಿಭಾಗಗಳಲ್ಲಿ ಸಲಹೆ ಮಾರ್ಗದರ್ಶನ ನೀಡಿದ್ದಾರೆ.

ಶ್ರೀಮತಿ ರಾಜೇಶ್ವರಿ ಭಟ್ ಅವರು ಹಲವಾರು ಸಂಘ ಸಂಸ್ಥೆಗಳಿಂದ 'ಕರ್ನಾಟಕ ಶಿರೋಮಣಿ', 'ಗಾನ ಸರಸ್ವತಿ', 'ಕಲಾ ರತ್ನ', 'ನೃತ್ಯ ಸೇವಾಮಣಿ', 'ಕಲಾ ತಿಲಕ್', 'ಕಲಾ ಭೂಷಣ' ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದಾರಲ್ಲದೆ ಶ್ರೀ ಬಾ. ಸಾಮಗ ಅವರು ಆಯೋಜಿಸಿದ್ದ ದೆಹಲಿ ಕನ್ನಡ ಸಮ್ಮೇಳನಗಳಲ್ಲಿ ಹಾಗು ಅನೇಕ ಕಲಾ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದಾರೆ. ಕರ್ನಾಟಕ ಸಂಗೀತ, ಭರತನಾಟ್ಯ, ಹರಿಕಥೆ, ಯಕ್ಷಗಾನ ಕ್ಷೇತ್ರಗಳಲ್ಲಿ ಕನ್ನಡ ನಾಡು, ನುಡಿ, ಭಾಷೆ, ಕಲೆ, ಸಂಸ್ಕೃತಿಗೆ ಇವರು ಮಾಡಿದ ಸೇವೆಯನ್ನು ಪರಿಗಣಿಸಿ 2024ನೇ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ದಿನಾಂಕ 24.11.2024ರಂದು ಸಂಘದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಸಂಭ್ರಮದಲ್ಲಿ ನೀಡಿ ಗೌರವಿಸಲಾಗಿದೆ. ಶ್ರೀಮತಿ ರಾಜೇಶ್ವರಿ ಭಟ್ ಅವರಿಗೆ ಎಲ್ಲಾ ದೆಹಲಿ ಕನ್ನಡಿಗರ ಪ್ರೀತಿಪೂರ್ವಕ ಅಭಿನಂದನೆಗಳು.❑

## ದೆಹಲಿ ಕರ್ನಾಟಕ ಸಂಘದ ಸಿಬ್ಬಂದಿ ಶ್ರೀ ರಮಣ್ ಅವರಿಗೆ ಆತ್ಮೀಯ ಬೀಳ್ಕೊಡುಗೆ



ಸಂಘದಲ್ಲಿ ಕಳೆದ ಹಲವಾರು ವರ್ಷಗಳಿಂದ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ರಮಣ್ ಅವರು ಸೇವೆಯಿಂದ ನಿವೃತ್ತಿಯನ್ನು ಪಡೆದ ಸಂದರ್ಭದಲ್ಲಿ ದಿನಾಂಕ 24.11.2024 ರಂದು ನಡೆದ ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ಅವರನ್ನು ಆತ್ಮೀಯವಾಗಿ ಅಭಿನಂದಿಸಿ ಬೀಳ್ಕೊಡಲಾಯಿತು. **ಅವರ ನಿವೃತ್ತ ಜೀವನಕ್ಕೆ ದೆಹಲಿ ಕರ್ನಾಟಕ ಸಂಘದಿಂದ ಶುಭ ಹಾರೈಕೆಗಳು.**

### ದೆಹಲಿ ಕರ್ನಾಟಕ ಸಂಘದಲ್ಲಿ ಮುಂಬರುವ ಕಾರ್ಯಕ್ರಮ

**29 ಡಿಸೆಂಬರ್ 2024** ಭಾನುವಾರ
ಸಂಜೆ : 5.00 ಗಂಟೆಗೆ

ಕುವೆಂಪು ನೆನಪು – ಸಾಹಿತ್ಯ ಸಂಜೆ

# ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಅಹೋರಾತ್ರಿ ಪೌರಾಣಿಕ ನಾಟಕ 'ದಕ್ಷಯಜ್ಞ' ಪ್ರದರ್ಶನ

ದೆಹಲಿ ಕರ್ನಾಟಕ ಸಂಘವು ನಿರಂತರವಾಗಿ ಸ್ಥಳೀಯ ಮತ್ತು ಕನ್ನಡ ನಾಡಿನ ಅನೇಕ ರಂಗಭೂಮಿ, ಯಕ್ಷಗಾನ, ನಾಟಕ, ಜಾನಪದ ಕಲಾವಿದರಿಗೆ ವೇದಿಕೆಯನ್ನು ಕಲ್ಪಿಸಿಕೊಡುತ್ತಾ ಬಂದಿದೆ. ಹಲವಾರು ಏಕಾಂಕ ನಾಟಕ ಸ್ಪರ್ಧೆಗಳು, ನಿರಂತರ ನಾಟಕ, ರಂಗೋತ್ಸವ, ನಾಟಕೋತ್ಸವಗಳು ಸಂಘದಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡಿವೆ. ಕರ್ನಾಟಕದ ಪ್ರಸಿದ್ಧ ರಂಗ ಸಂಸ್ಥೆಗಳ ಕಲಾವಿದರ ತಂಡಗಳು ಹಲವಾರು ಮೇರು ನಾಟಕಗಳನ್ನು ಸಂಘದ ಸಭಾಂಗಣದಲ್ಲಿ ಪ್ರದರ್ಶಿಸಿ ರಂಗಾಸಕ್ತ ದೆಹಲಿ ಕನ್ನಡಿಗರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಹಾಗೇನೇ, ದೆಹಲಿಯಲ್ಲಿನ ಸ್ಥಳಿಯ ರಂಗಭೂಮಿ ಕಲಾವಿದರು ಸಹಾ ಸಂಘದ ವೇದಿಕೆಯಲ್ಲಿ ವೈವಿಧ್ಯಮಯ ಹಾಸ್ಯಭರಿತ, ಸಾಮಾಜಿಕ, ಐತಿಹಾಸಿಕ ಹಾಗು ಪೌರಾಣಿಕ ನಾಟಕಗಳನ್ನು ಪ್ರಸ್ತುತಪಡಿಸಿ ದೆಹಲಿ ಕನ್ನಡಿಗರಿಗೆ ತಮ್ಮ ಪ್ರತಿಭೆಯನ್ನು ಪರಿಚಯಿಸಿದ್ದಾರೆ. ಸಂಘವು ರಂಗ ಚಟುವಟಿಕೆಗೆ ಸದಾ ಪ್ರೋತ್ಸಾಹ ನೀಡುತ್ತಿದ್ದು, ಸಂಘದ ಬ್ಯಾನರಿನ ಅಡಿಯಲ್ಲಿ ರೂಪುಗೊಂಡ ಅನೇಕ ನಾಟಕಗಳು, ದೆಹಲಿಯಲ್ಲಿ, ಮುಂಬಯಿಯಲ್ಲಿ ಕರ್ನಾಟಕದ ನಗರಗಳಲ್ಲಿ ಯಶಸ್ವಿ ಪ್ರದರ್ಶನ ಕಂಡಿವೆ. ಅನೇಕ ಸ್ಥಳೀಯ ಹವ್ಯಾಸಿ ಕಲಾವಿದರು ತಮ್ಮ ಕಲಾ ಪ್ರತಿಭೆಯಿಂದ ಪ್ರಖ್ಯಾತ ನಾಟಕ ಕಲಾವಿದರಾಗಿ ಹೊರ ಹೊಮ್ಮಿದ್ದಾರೆ. ಈ ನಿಟ್ಟಿನಲ್ಲಿ ದೆಹಲಿಯಲ್ಲಿ ರಂಗ ಚಟುವಟಿಕೆಗಳಿಗೆ ಸಂಘದ ಜೊತೆ ಜೊತೆಗೆ ಇಲ್ಲಿನ ಇತರ ಕನ್ನಡಪರ ಸಂಘ ಸಂಸ್ಥೆಗಳ ಹಾಗು 'ಕನ್ನಡ ಭಾರತೀ' ರಂಗ ಸಂಸ್ಥೆಯ ಕೊಡುಗೆ ಶ್ಲಾಘನೀಯ.

ಇದೇ ಹಿನ್ನೆಲೆಯಲ್ಲಿ, 69ನೇ ಕರ್ನಾಟಕ ರಾಜ್ಯೋತ್ಸವ ಸಂಭ್ರಮಾಚರಣೆ ಅಂಗವಾಗಿ ಸ್ಥಳೀಯ ರಂಗಾಸಕ್ತರಿಗಾಗಿ ದಿನಾಂಕ 16.11.2024 ರಂದು ಶನಿವಾರ ಸಂಜೆ ರಾಮನಗರ ಸತ್ಯಶೋಧನ ಸಾಮಾಜಿಕ ಹಾಗು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಅಹೋರಾತ್ರಿ ಪೌರಾಣಿಕ ನಾಟಕ 'ದಕ್ಷಯಜ್ಞ' ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಪ್ರಸಿದ್ಧ ರಂಗಕರ್ಮಿ, ಕಲಾವಿದ ಶ್ರೀ ಎಂ.ಕೆ. ಧರ್ಮೇಂದ್ರ ಕುಮಾರ್ ಅವರ ನಿರ್ದೇಶನದಲ್ಲಿ ಸುಮಾರು ಮೂವತ್ತಕ್ಕೂ ಹೆಚ್ಚು ನಾಟಕ ಕಲಾವಿದರು ಪ್ರಸ್ತುತಪಡಿಸಿದ ಪೌರಾಣಿಕ ಕಥೆ ಆಧಾರಿತ ನಾಟಕವು ಅಮೋಘವಾಗಿ ಮೂಡಿ ಬಂತು. ಸಂಘದ ಜಂಟಿ ಕಾರ್ಯದರ್ಶಿಗಳಾದ ಶ್ರೀ ಬಿ. ನಾರಾಯಣ ಅವರು ಶ್ರಮಪಟ್ಟು ಶ್ರೀ ಆಂಜನೇಯ ಸ್ವಾಮಿ ಸಾಂಸ್ಕೃತಿಕ ಕಲಾ ಟ್ರಸ್ಟ್ ಬಿಡದಿ ಹಾಗು ರಾಮನಗರದ ಸತ್ಯಶೋಧನ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್‌ನ ಜೊತೆ ಉತ್ತಮ ಸಂಯೋಜನೆ ನಡೆಸಿ ಆ ಸಂಸ್ಥೆಗಳ ಕಲಾವಿದರಿಂದ 'ದಕ್ಷಯಜ್ಞ' ನಾಟಕವು ಸಂಘದಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ರಾತ್ರಿ 9.30 ಗಂಟೆ ಸುಮಾರಿಗೆ ಸಂಘದ ಸಭಾಂಗಣದ ವೇದಿಕೆ ಮೇಲೆ ಸಂಘದ ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು, ಸದಸ್ಯರು, ಕಲಾ ತಂಡದ ಕಲಾವಿದರು, ನಿರ್ದೇಶಕರು, ತಾಂತ್ರಿಕ ವರ್ಗದವರು, ಉತ್ತಮ ಸಂಖ್ಯೆಯಲ್ಲಿ ನೆರೆದಿದ್ದ ಹಿರಿಯ ದೆಹಲಿ ಕನ್ನಡಿಗರ ಸಮ್ಮುಖದಲ್ಲಿ ಪ್ರಾರ್ಥನಾಗೀತೆ ಹಾಗು ದೀಪ ಪ್ರಜ್ವಲನೆಯೊಂದಿಗೆ ನಾಟಕ ಪ್ರದರ್ಶನಕ್ಕೆ ವಿದ್ಯುಕ್ತ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ನಾಟಕದ ತಂಡದ ಸರ್ವ ಸದಸ್ಯರಿಗೂ, ನಿರ್ದೇಶಕರಾದ ಶ್ರೀ ಧರ್ಮೇಂದ್ರ ಕುಮಾರ್ ಹಾಗು ಟ್ರಸ್ಟ್‌ನ ಮುಖ್ಯಸ್ಥರಾದ ಶ್ರೀ ಕೆ.ಎಸ್. ರಾಮು (ರಾಮಣ್ಣ) ಮತ್ತು ಶ್ರೀ ಶಿವಕುಮಾರ್ ಅವರಿಗೆ ಆತ್ಮೀಯ ಸ್ವಾಗತ ಕೋರುತ್ತಾ ಈ ಅಹೋರಾತ್ರಿ ಪೌರಾಣಿಕ ನಾಟಕ ಒಂದು ವಿಭಿನ್ನವಾದ ಹೊಸ ಪ್ರಯೋಗ, ಸುಮಾರು 6–7 ಗಂಟೆಗಳ ಕಾಲದ ಪ್ರದರ್ಶನವಾಗುವ ನಾಟಕ ದೆಹಲಿ ಕನ್ನಡಿಗರಿಗೆ ಮೆಚ್ಚುಗೆಯಾವುದರಲ್ಲಿ ಯಾವ ಸಂದೇಹವೂ ಇಲ್ಲ, ದೆಹಲಿಯಲ್ಲಿ ಅತಿಯಾದ ಪ್ರದೂಷಣೆ, ಚಳಿ, ಪ್ರತಿಕೂಲ ಹವಾಮಾನವಿರುವುದರಿಂದ ಹಾಗು ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳು ಇಂದಿನ ದಿನವೇ ಆಯೋಜನೆಯಾಗಿರುವುದರಿಂದ ನಾಟಕ ವೀಕ್ಷಿಸಲು ನಾವು ನಿರೀಕ್ಷಿಸಿದ ಮಟ್ಟದಲ್ಲಿ ಪ್ರೇಕ್ಷಕರು ಆಗಮಿಸಿಲ್ಲ, ಆದರೂ ಕೂಡಾ ಬಂದಿರುವ ಪ್ರತಿಯೊಬ್ಬ ರಂಗಾಸಕ್ತ, ನಾಟಕಪ್ರೇಮಿ ದೆಹಲಿ ಕನ್ನಡಿಗರು ನೂರು ಜನರ ಸಮಾನವೆನ್ನಬಹುದು. ಆಗಮಿಸಿದ ಪ್ರತಿಯೊಬ್ಬರಿಗೂ, ಟ್ರಸ್ಟ್‌ನ ಮುಖ್ಯಸ್ಥರಿಗೂ, ಎಲ್ಲಾ ಕಲಾವಿದರಿಗೂ ಹಾಗು ಸಿಬ್ಬಂದಿಗೆ ಶುಭಾಶಯಗಳು ಎಂದರು. ನಾಟಕ ಆಯೋಜನೆಯಲ್ಲಿ ಮುಖ್ಯ ಭೂಮಿಕೆ ವಹಿಸಿ ಕಲಾ ತಂಡವನ್ನು ಸಂಘಕ್ಕೆ ಕರೆತಂದ ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತಾ, ನೆರೆದಿರುವ ಎಲ್ಲರಿಗೂ ಈ ಸುಂದರ ಪೌರಾಣಿಕ ನಾಟಕವನ್ನು ವೀಕ್ಷಿಸಿ ಆನಂದಿಸಲು ಕೇಳಿಕೊಂಡು ನಾಟಕದ ಪ್ರದರ್ಶನ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ಅವರು ಸತ್ಯಶೋಧನ ಟ್ರಸ್ಟ್ ಬಗ್ಗೆ, ನಿರ್ದೇಶಕರ ಹಾಗು ಮುಖ್ಯಸ್ಥರ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ಪ್ರೇಕ್ಷಕರೊಂದಿಗೆ ಹಂಚಿಕೊಂಡು, 'ದಕ್ಷಯಜ್ಞ'







ನಾಟಕ ಈ ಟ್ರಸ್ಟ್‌ನ ಕಲಾವಿದರಿಂದ ದೆಹಲಿಯಲ್ಲಿ ಪ್ರಥಮ ಪ್ರದರ್ಶನವಾಗಿದ್ದು, ಸುಮಾರು 50 ಕ್ಕೂ ಹೆಚ್ಚು ಹವ್ಯಾಸಿ ಕಲಾವಿದರನ್ನು ಹೊಂದಿರುವ ಕಲಾ ತಂಡವು ಈವರೆಗೆ ಕರ್ನಾಟಕ ರಾಜ್ಯಾದ್ಯಂತ 100 ಕ್ಕೂ ಹೆಚ್ಚು ಹಾಸ್ಯಮಯ, ಸಾಮಾಜಿಕ, ಪೌರಾಣಿಕ ಹಾಗು ಐತಿಹಾಸಿಕ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶನ ಮಾಡಿದ್ದಾರೆ ಎಂಬ ಮಾಹಿತಿಯನ್ನು ತಿಳಿಸಿದರು.

ರಾತ್ರಿ ಸುಮಾರು 10 ಗಂಟೆಗೆ ಆರಂಭವಾದ 'ದಕ್ಷಯಜ್ಞ' ಅಹೋರಾತ್ರಿ ಪ್ರದರ್ಶನವಾಗಿ ನ. 17ರ ಮುಂಜಾನೆ 5.00ಗಂಟೆಗೆ ಮುಕ್ತಾಯಗೊಂಡಿತು. ಸುಂದರ ಆಕರ್ಷಕ ಪೋಷಾಕು, ಕಿರೀಟ, ಆಭರಣಗಳನ್ನು ಹೊದ್ದುಕೊಂಡು ಮುದವಾದ ಸಂಭಾಷಣೆಯ ನಡು ನಡುವೆ ಸುಮಧುರ ಹಾಡುಗಳನ್ನೊಳಗೊಂಡ ಸಂಗೀತಮಯವಾದ ನಾಟಕದ ದೃಶ್ಯಗಳು ಪ್ರೇಕ್ಷಕರ ಮನಸೂರೆಗೊಂಡವು. ನಾಟಕದಲ್ಲಿ ದಕ್ಷಬ್ರಹ್ಮ, ನಾರದ, ಬ್ರಹ್ಮ, ವಿಷ್ಣು, ಈಶ್ವರ, ದಾಕ್ಷಾಯಿಣಿ ಮತ್ತಿತರ ಮುಖ್ಯ ಪಾತ್ರಧಾರಿಗಳು ಮನೋಜ್ಞ ಅಭಿನಯ ನೀಡಿದರು.

ಶ್ರೀ ಆಂಜನೇಯ ಸ್ವಾಮಿ ಸಾಂಸ್ಕೃತಿಕ ಕಲಾ ಟ್ರಸ್ಟ್, ಬಿಡದಿ, ಮತ್ತು ಸತ್ಯ ಶೋಧನ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್‌ನ ವತಿಯಿಂದ ಪ್ರದರ್ಶನಗೊಂಡ 'ದಕ್ಷಯಜ್ಞ' ಪೌರಾಣಿಕ ನಾಟಕದಲ್ಲಿ ಅಭಿನಯ ನೀಡಿದ ಕಲಾವಿದರ ಪಾತ್ರ ಪರಿಚಯವನ್ನು ನಾಟಕದ ನಿರ್ದೇಶಕರಾದ ಶ್ರೀ ಎಂ. ಕೆ. ಧರ್ಮೇಂದ್ರ ಕುಮಾರ್ ಅವರು ಮಾಡಿಕೊಟ್ಟರು. **ಪಾತ್ರಧಾರಿಗಳು :** ಬಾಲೀಶ್ವರ–ಪ್ರಕಾಶ್, ಬೆಸ್ಕಾಂ, ಈಶ್ವರ–ರವಿಕುಮಾರ್, ದಕ್ಷಬ್ರಹ್ಮ–ಕೆ.ಜಿ. ನಾರಾಯಣ್, ವಿಷ್ಣು–ಧನಂಜಯ. ಎಸ್, ಬ್ರಹ್ಮ– ನಾಗರಾಜ್, ಅಂಕನಹಳ್ಳಿ, ಚಂದ್ರಮ–ಕೆ. ಎನ್. ರಾಮು, ವಸುಂಧರ–ರಾಮಕೃಷ್ಣ, ಬೆಂಗಳೂರು, ಬೃಗುಮುನಿ–ಶ್ರೀಕಂಠೇಗೌಡ, ನಾರದ–ದಶವಾರ ಶಿವಲಿಂಗಯ್ಯ, ದಧೀಚಿ–ಸತ್ಯ ನಾರಾಯಣ್, ಜಾಲ ಬ್ರಹ್ಮ–ಶ್ರೀಧರ್, ವೀರಭದ್ರ–ಚಂದ್ರಶೇಖರ್ (ಯೋಧ) ನಂದೀಶ್ವರ–ಸಾಯಿ ನಾಗರಾಜ್, ಸೂತ್ರಾದಾರಿ–ಶಿವಕುಮಾರ್, ಬ್ಯಾಡರಹಳ್ಳಿ, **ಸ್ತ್ರೀ ಪಾತ್ರಗಳು :** ಆದಿಶಕ್ತಿ/ಸತಿ–ಜ್ಯೋತಿ ಲಕ್ಷ್ಮಿ (ದೀಪು) ಮಂಡ್ಯ, ರೋಹಿಣಿ–ಊರ್ಮಿಳಾ, ಮೈಸೂರು, ಲಕ್ಷ್ಮಿ/ಪದ್ಮ–ಚೈತ್ರ, ತುಮಕೂರು, **ವಾದ್ಯವೃಂದ :** ಕ್ಯಾಸಿಯೋ–ವಿಶ್ವನಾಥ್, ಮಂಡ್ಯ, ತಬಲ–ಲೋಕಾಭಿರಾಮ್, ಮಂಡ್ಯ, **ನಾಟಕ ಕಂಪನಿ ಸ್ಟೇಜ್ ಮ್ಯಾನೇಜರ್ಸ್:** ಚಂದ್ರಗಿರಿ, ಕರಿಯಪ್ಪ, ಕೆಂಪರಾಜು, ಅಶೋಕ್, ರಾಮನಗರ

ಶ್ರೀ ಆಂಜನೇಯ ಸ್ವಾಮಿ ಸಾಂಸ್ಕೃತಿಕ ಕಲಾ ಟ್ರಸ್ಟ್, ಬಿಡದಿ, ಮತ್ತು ರಾಮನಗರದ ಸತ್ಯ ಶೋಧನ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್‌ನ ಮುಖ್ಯಸ್ಥರಾದ ಶ್ರೀ ರಾಮಣ್ಣ ಹಾಗು ಶ್ರೀ ಶಿವಕುಮಾರ್ ಮತ್ತು ನಾಟಕದ ನಿರ್ದೇಶಕರಾದ ಶ್ರೀ ಎಂ.ಕೆ. ಧರ್ಮೇಂದ್ರ ಕುಮಾರ್ ಅವರನ್ನು ಸಂಘದ ಪರವಾಗಿ ಗೌರವಿಸಿ ಅಭಿನಂದಿಸಲಾಯಿತು. ಎಲ್ಲಾ ಕಲಾವಿದರು ಮತ್ತು ತಾಂತ್ರಿಕ ವರ್ಗದವರಿಗೆ ಪ್ರಶಸ್ತಿ ಪತ್ರ ಪ್ರದಾನ ಮಾಡಲಾಯಿತು.

ನಾಟಕ ಪ್ರದರ್ಶನದ ಉದ್ದಕ್ಕೂ ಪ್ರೇಕ್ಷಕರಿಗೆ ಕಾಫಿ, ಟೀ, ಖಾರ ಅವಲಕ್ಕಿ, ಮೆಣಸಿನಕಾಯಿ ಬೋಂಡಾ ಮುಂತಾದವುಗಳ ವ್ಯವಸ್ಥೆಯನ್ನು ಸಂಘದ ಪರವಾಗಿ ಮಾಡಲಾಗಿತ್ತು.

ನಾಟಕ ಮುಕ್ತಾಯವಾದ ತರುವಾಯ ಸಂಘದ ಖಜಾಂಚಿ ಶ್ರೀಮತಿ ಆಶಾಲತಾ ಎಂ. ಅವರು ಟ್ರಸ್ಟ್‌ನ ಮುಖ್ಯಸ್ಥರಿಗೆ, ನಾಟಕದ ನಿರ್ದೇಶಕರಿಗೆ, ಅಭಿನಯ ನೀಡಿದ ಕಲಾವಿದರಿಗೆ, ಸಿಬ್ಬಂದಿಗೆ ಮತ್ತು ಸಂಘದಲ್ಲಿ ನಾಟಕ ಪ್ರದರ್ಶನವಾಗಲು ಮುಖ್ಯ ರೂವಾರಿಯಾದ ಜಂಟಿ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ಅವರಿಗೆ, ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳಿಗೆ ಹಾಗು ಪೂರ್ತಿ ರಾತ್ರಿ ನಾಟಕ ವೀಕ್ಷಿಸಿದ ದೆಹಲಿ ಕನ್ನಡಿಗರಿಗೆ ಧನ್ಯವಾದಗಳನ್ನು ಅರ್ಪಿಸಿದರು. ❑

***ಅಭಿಮತ ವರದಿ***

# ಗುರುಗಾಂವ್ ಕನ್ನಡ ಸಂಘದ ವತಿಯಿಂದ ಭವ್ಯವಾದ "ರಾಜ್ಯೋತ್ಸವ" ಆಚರಣೆ



ಹರಿಯಾಣ ರಾಜ್ಯದ ಗುರುಗಾಂವ್‌ನಲ್ಲಿ ವಾಸವಾಗಿರುವ ಕನ್ನಡಿಗರು "ಗುರುಗಾಂವ್ ಕನ್ನಡ ಸಂಘವನ್ನು" ಕಟ್ಟಿ ಕಳೆದ ಎರಡು ದಶಕಗಳಿಂದ ಕರ್ನಾಟಕ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಾ ಬಂದಿದ್ದಾರೆ.

ಅದೇ ತರಹ ಈ ವರ್ಷ ದಿನಾಂಕ 17.11.2024 ಭಾನುವಾರದಂದು ಗುರುಗಾಂವ್ ನಗರದ ಎಕ್ಸೆಲ್‌ಸಿಯರ್ ಅಮೆರಿಕನ್ ಶಾಲೆಯ ಸಭಾಂಗಣದಲ್ಲಿ ಎಲ್ಲ ಕನ್ನಡಿಗರು ಸೇರಿ ಅತ್ಯಂತ ಸಡಗರ ಸಂಭ್ರಮದಿಂದ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಗಣೇಶನ ವಂದನೆಯಿಂದ ಸ್ಥಳೀಯ ಕಾರ್ಯಕ್ರಮಗಳು ಪ್ರಾರಂಭವಾದವು. ಮೊದಲಿಗೆ ಸ್ಥಳೀಯ ಮಕ್ಕಳು, ಮಹಿಳೆಯರು ಅದ್ಭುತವಾಗಿ ನೃತ್ಯ ಮಾಡಿದರು. ಪುರುಷ ಮತ್ತು ಮಹಿಳಾ ಗಾಯಕರು ಇಂಪಾಗಿ ಹಾಡಿದರು. ಈ ಸ್ಥಳೀಯ ಕಲಾವಿದರ ಕಾರ್ಯಕ್ರಮಗಳನ್ನು ಉಪಾಧ್ಯಕ್ಷರಾದ ಶ್ರೀಮತಿ ಮಾಲ ರಮೇಶ್ ಮತ್ತು ಸದಸ್ಯರಾದ ಶ್ರೀಮತಿ ಭಾರತಿ ತಿಮ್ಮಪ್ಪ ಅವರು ನಡೆಸಿಕೊಟ್ಟರು. ತುಂಬಿದ ಸಭಾಂಗಣಕ್ಕೆ ಮುಖ್ಯ ಅತಿಥಿಗಳನ್ನು ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣಪ್ಪ ಎಂ. ಮತ್ತು ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಜೋಳದರಾಶಿ ಅವರು ಆದರದಿಂದ ಬರಮಾಡಿಕೊಂಡರು.

ಮುಖ್ಯ ಅತಿಥಿಗಳಾಗಿ ಡಾ. ಕೆ.ಎಸ್ ಸೋಮಶೇಖರ್, ಹೆಚ್ಚುವರಿ ಕಾರ್ಯದರ್ಶಿಗಳು, ರಾಜ್ಯಸಭಾ ಸೆಕ್ರೆಟರಿಯೇಟ್, ಸಂಸತ್ ಭವನ, ನವದೆಹಲಿ ಹಾಗು ಡಾ. ಕೆ.ಜೆ. ಶ್ರೀನಿವಾಸ ಐಎಫ್ಎಸ್ ಜಂಟಿ ಕಾರ್ಯದರ್ಶಿಗಳು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಭಾರತ ಸರ್ಕಾರ, ನವದೆಹಲಿ. ಇವರುಗಳು ಭಾಗವಹಿಸಿ ಕಾರ್ಯಕ್ರಮದ ಹಿರಿಮೆಯನ್ನು ಹೆಚ್ಚಿಸಿದರು.

ಸಂಘದ ಸದಸ್ಯರಾದ ಶ್ರೀ ಚಂದ್ರಶೇಖರ .ಕೆ ಅವರು ಅತಿಥಿಗಳನ್ನು ಆತ್ಮೀಯವಾಗಿ ಸ್ವಾಗತ ಕೋರುವುದರ ಮೂಲಕ ಪ್ರೇಕ್ಷಕರಿಗೆ ಪರಿಚಯಿಸಿದರು. ನಂತರ ಉಪಾಧ್ಯಕ್ಷರಾದ ಶ್ರೀ ರಾಜಕುಮಾರ್ ನೀಲೂರ್ ಅವರು ವೇದಿಕೆ ಕಾರ್ಯಕ್ರಮ ನಡೆಸಿಕೊಟ್ಟರು.

ಕಾರ್ಯಕ್ರಮದ ಮುಖ್ಯ ಅತಿಥಿಗಳು, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮತ್ತು ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ, ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣಪ್ಪ. ಎಂ. ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಜೋಳದರಾಶಿ ಅವರು ತಾಯಿ ಭುವನೇಶ್ವರಿ ಮಾತೆಯ ಪೋಟೋಗೆ ದೀಪ ಹಚ್ಚುವ ಮೂಲಕ ರಾಜ್ಯೋತ್ಸವ ಆಚರಣೆಗೆ ಅದ್ದೂರಿ ಚಾಲನೆ ನೀಡಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ನೆರವೇರಿಸುವ ಮೂಲಕ ಎಲ್ಲರಿಗೂ ರಾಜ್ಯೋತ್ಸವದ ಶುಭಾಶಯಗಳನ್ನು ತಿಳಿಸಿದರು. ತಮ್ಮ ಉದ್ಘಾಟನಾ ಭಾಷಣದಲ್ಲಿ ಅವರು ಐಎಎಸ್ ಪರೀಕ್ಷೆ ಬರೆಯಲು ದೆಹಲಿಗೆ ಬರುವ ಕನ್ನಡಿಗರಿಗೆ, ದೆಹಲಿ, ಗುರುಗಾಂವ್ ಅಥವಾ ನೋಯ್ಡಾದಲ್ಲಿ ಜಾಗ ಪಡೆದು ಒಂದು ವಸತಿ ನಿಲಯ ಕಟ್ಟುವ ತಮ್ಮ ಭವಿಷ್ಯದ ಕಾರ್ಯಕ್ರಮದ ಬಗ್ಗೆ ವಿವರಣೆ ನೀಡಿದರು.

ಮುಖ್ಯ ಅತಿಥಿಗಳಾದ ಡಾ. ಕೆ.ಎಸ್. ಸೋಮಶೇಖರ್ ಅವರು ಮಾತನಾಡುತ್ತಾ ಯಾವ ತರಹ ಮೈಸೂರು ರಾಜ್ಯವು ಹರಿದು ಹಂಚಿಹೋಗಿತ್ತೋ ಅದನ್ನು ಒಂದುಗೂಡಿಸಿದಾಗ, ಬಳ್ಳಾರಿ ನಮಗೆ ಸಿಕ್ಕಿತ್ತು, ಅದೇ ತರಹ ಹೊಸೂರು, ಕೃಷ್ಣಗಿರಿ, ಕಾಸರಗೋಡು, ಸಾಂಗ್ಲಿ, ಸೋಲಾಪುರ ಮುಂತಾದ ಜಿಲ್ಲೆಗಳನ್ನು ಕಳೆದುಕೊಂಡೆವು, ಅದರ ಜೊತೆ ಕನ್ನಡಿಗರು ಕಳೆದುಕೊಂಡ ಅತಿ ದೊಡ್ಡ ಅಸ್ತಿ ಎಂದರೆ ಅಕ್ಕಲಕೋಟೆ ಪ್ರದೇಶ, ಆ ಪ್ರದೇಶದಲ್ಲಿ ವಾಸಿಸುವ ಕನ್ನಡಿಗರ ಮನೋವೇದನೆ ವರ್ಣಿಸಲು ಸಾಧ್ಯವಿಲ್ಲ, ಹಾಗೆ ಅದನ್ನು ಕರ್ನಾಟಕಕ್ಕೆ ಸೇರಿಸಲು ಸಾಧ್ಯವಿಲ್ಲ ಮತ್ತು ಕೇರಳಿಗರು ಮತ್ತು ಮರಾಠಿಗರು

ವ್ಯವಸ್ಥಿತವಾಗಿ ಕನ್ನಡ ಮಾತಾಡುವ ಪ್ರದೇಶಗಳಲ್ಲಿ ಕನ್ನಡವನ್ನು ನೆಲಸಮ ಮಾಡುತ್ತಾರೆ ಎನ್ನುವ ನೋವನ್ನು ಹಂಚಿಕೊಂಡರು. ಹಾಗೆಯೇ, ದೆಹಲಿಯ ಸುತ್ತಮುತ್ತ ಇರುವ ಕನ್ನಡಿಗರು ಹೊಸ ಸಂಸತ್ತನ್ನು ನೋಡಬೇಕೆಂದೆನಿಸಿದರೆ ದೆಹಲಿ ಮತ್ತು ಗುರುಗಾಂವ್ ಕನ್ನಡ ಸಂಘಗಳ ಅಧ್ಯಕ್ಷರ ಜೊತೆ ಮಾತನಾಡಿ ಒಂದು ಲಿಸ್ಟನ್ನು ತಯಾರು ಮಾಡಿ ತಮಗೆ ಕಳುಹಿಸಿಕೊಟ್ಟರೆ ಅವರಿಗೆ ಸಂಸತ್ ಭವನದ ವೀಕ್ಷಣೆಗೆ ಅವಕಾಶ ಕಲ್ಪಿಸಿಕೊಡಲಾಗುವುದು ಎಂದು ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿ ಐಎಫ್‌ಎಸ್ ಅಧಿಕಾರಿಗಳಾದ ಡಾ. ಕೆ.ಜೆ. ಶ್ರೀನಿವಾಸ ಅವರು ಮಾತನಾಡುತ್ತಾ ಹೊರರಾಜ್ಯಗಳಲ್ಲಿ ಇರುವ ಕನ್ನಡಿಗರು ಕನ್ನಡ ಸಂಘಗಳನ್ನು ಕಟ್ಟಿ ಕನ್ನಡವನ್ನು ಬೆಳೆಸುವ ಕಾರ್ಯವನ್ನು ಮಾಡುತ್ತಿರುವುದು ಅತಿ ಉತ್ತಮವಾದ ಕೆಲಸ, ಅದೇ ತರಹ ಇಲ್ಲಿನ ಕನ್ನಡಿಗರು ತಮ್ಮ ತಮ್ಮ ಮಕ್ಕಳಿಗೆ ಕನ್ನಡ ಕಲಿಸಬೇಕು ಎಂದು ಕರೆ ನೀಡಿದರು. ತಮ್ಮ ಮಗನನ್ನು ವಿದ್ಯಾಭ್ಯಾಸ ಮಾಡಲು ಕರ್ನಾಟಕದಲ್ಲಿ ಶಾಲೆಗೆ ಸೇರಿಸಿ ಅವನು ಕನ್ನಡ ಕಲಿತ ನಂತರ ದೆಹಲಿಗೆ ಕರೆದುಕೊಂಡು ಬಂದ ಸ್ವಂತ ಅನುಭವವನ್ನು ಪ್ರೇಕ್ಷಕರೊಂದಿಗೆ ಹಂಚಿಕೊಂಡರು, ದೆಹಲಿಯಲ್ಲಿ ಕನ್ನಡಿಗರಿಗೆ ಯಾವುದೇ ರೀತಿಯ ತೊಂದರೆ ಉಂಟಾದಾಗ ತುರ್ತುವರಿ ಸಂಖ್ಯೆಗೆ ಯಾವ ರೀತಿ ದೂರವಾಣಿ ಕರೆ ಮಾಡಿ ಹೇಗೆ ಸಹಾಯ ಪಡೆಯಬೇಕು ಎನ್ನುವ ಮಾಹಿತಿ ತಿಳಿಸಿಕೊಟ್ಟರು. ಅಮೇರಿಕಾದ ಸ್ಯಾನ್ ಫ್ರಾನ್ಸಿಸ್ಕೊ ನಗರದಿಂದ ನೇರವಾಗಿ ಬೆಂಗಳೂರಿಗೆ ಭಾರತ ಸರಕಾರದಿಂದ ಯಾವ ತರಹ ಸಹಾಯ ಪಡೆದು ವಿಮಾನ ಹಾರಾಟ ಶುರುಮಾಡಿದ್ದನ್ನು ಹಾಗು ಅಂದು ವಾರಕ್ಕೊಮ್ಮೆ ಶುರು ಮಾಡಿದ ವಿಮಾನ ಹಾರಾಟ ಇಂದು ಭಾರತದ ವಿವಿಧ ನಗರಗಳಿಂದ ವಾರಕ್ಕೆ 19 ಸಲ ಹಾರಾಟವಾಗುತ್ತಿದೆ ಎನ್ನುವ ಮಾಹಿತಿಯನ್ನು ತಿಳಿಸಿದರು.

ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣಪ್ಪ ಎಂ. ಅವರು ಮಾತನಾಡುತ್ತಾ ಕರ್ನಾಟಕದ ಉದಯ ಯಾವ ತರಹ ಆಯಿತು, ಇದರ ಹಿಂದೆ ಇರುವ ಮಹಾನ್ ವ್ಯಕ್ತಿಗಳು ಅವರ ಕೊಡುಗೆಯ ಬಗ್ಗೆ ಮಾಹಿತಿ ಹಂಚಿಕೊಂಡರು. ಕರ್ನಾಟಕ ರಚನೆಯಾಗುವುದಕ್ಕಿಂತ ಮೊದಲಿನಿಂದಲೂ ಕರ್ನಾಟಕದ ಇತಿಹಾಸದಲ್ಲಿ ಮಹಾನ್ ವ್ಯಕ್ತಿಗಳು ಜನಿಸಿ ನಮ್ಮ ಸಂಸ್ಕೃತಿ ಮತ್ತು ಬೆಳವಣಿಗೆಗೆ



ಶ್ರಮಿಸಿದ್ದಾರೆ, ಅಂತಹ ಮಹನೀಯರನ್ನು ನೆನೆಯಬೇಕು ಮತ್ತು ಕರ್ನಾಟಕ ರಚನೆ ಮಾಡಿ ಕರ್ನಾಟಕದ ರೇಖೆಯನ್ನು ಎಳೆದ ದಿನವನ್ನು ನಾವು ಕರ್ನಾಟಕ ರಾಜ್ಯೋತ್ಸವ ಆಚರಣೆಯಾಗಿ ಮಾಡುತ್ತೇವೆ ಎಂದು ಹೇಳಿದರು. ಕನ್ನಡ ಹೇಗೆ ಉಳಿಯಬೇಕು ಎಂದರೆ ಮುಖ್ಯವಾಗಿ ನಾವು ಮಕ್ಕಳೊಂದಿಗೆ ಕನ್ನಡದಲ್ಲಿ ಮಾತನಾಡಬೇಕು, ಜೊತೆಯಲ್ಲಿ ನಮ್ಮ ಮಕ್ಕಳಿಗೆ ಕಲಿಸಬೇಕು, ಮಾತನಾಡಿದರೆ ಕನ್ನಡ ಉಳಿಯುತ್ತದೆ, ನಮ್ಮ ಮಕ್ಕಳಿಗೆ ಕಲಿಸಿದರೆ ಬೆಳೆಯುತ್ತದೆ ಎಂದು ಹೇಳುತ್ತಾ ಗುರುಗಾಂವ್ ಕನ್ನಡ ಕಲಿಕಾ ಕೇಂದ್ರದಲ್ಲಿ ಎಷ್ಟು ಮಕ್ಕಳು ಕನ್ನಡ ಕಲಿಕಾ ಕೇಂದ್ರಕ್ಕೆ ಸೇರಿ ಯಾವ ರೀತಿ ಕನ್ನಡ ಕಲಿತಿದ್ದಾರೆ ಎನ್ನುವುದರ ಬಗ್ಗೆ ವಿವರಣೆ ನೀಡಿದರು.

ಗುರುಗಾಂವ್ ಕನ್ನಡ ಸಂಘದಲ್ಲಿ 10 ಮತ್ತು 12ನೇ ತರಗತಿಯಲ್ಲಿ ಉತ್ತಮ ಅಂಕ ಗಳಿಸಿದ ಮಕ್ಕಳಿಗೆ ಪುರಸ್ಕಾರ ನೀಡುವುದರ ಬಗ್ಗೆ ಪ್ರಸ್ತಾಪಿಸಿ ಎಲ್ಲಾ ಮಕ್ಕಳು ಅದೇ ರೀತಿ ಉತ್ತಮವಾಗಿ ಅಂಕಗಳನ್ನು ಪಡೆದು ಮುಂದೆ ಬರಬೇಕು ಎಂದು ತಿಳಿಸಿದರು ಮತ್ತು ಗುರುಗಾಂವ್ ಕನ್ನಡ ಸಂಘ 2003 ರಚನೆಯಾಗಿ 2013ರಲ್ಲಿ ಸಂಘ ರಿಜಿಸ್ಟ್ರೇಷನ್ ಆದ ನಂತರ ಇದುವರೆಗೂ ನಮ್ಮದೇ ಆದ ರೀತಿಯಲ್ಲಿ ನಾವು ಕನ್ನಡಮ್ಮನ ಸೇವೆಯನ್ನು ಮಾಡುತ್ತಾ ಬಂದಿದ್ದೇವೆ ಎಂದು ವಿವರಿಸುತ್ತಾ, ಗುರುಗಾಂವ್ ಕನ್ನಡ ಸಂಘದ ಬೆಳವಣಿಗೆಗೆ ಎಲ್ಲಾ ಕನ್ನಡಿಗರು ಕೈ ಜೋಡಿಸಬೇಕು ಹಾಗೂ ದೆಹಲಿ ಕರ್ನಾಟಕ ಸಂಘವು ಈ ಮೊದಲಿನಿಂದಲೂ ಸಹಕಾರ ನೀಡಿದ ಹಾಗೆ ಮುಂದೆಯೂ ಗುರುಗಾಂವ್ ಕನ್ನಡ ಸಂಘಕ್ಕೆ ಸಹ ಸಹಕಾರ ನೀಡಬೇಕು ಎಂದು ವಿಶೇಷವಾಗಿ ಮನವಿ ಮಾಡಿದರು.







ಮುಖ್ಯ ಅತಿಥಿಗಳನ್ನು ದೆಹಲಿ ಕರ್ನಾಟಕ ಸಂಘದ, ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಹಾಗು ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರು ಹಾಗು ಕಾರ್ಯದರ್ಶಿಗಳು ಎರಡೂ ಸಂಸ್ಥೆಗಳ ಪರವಾಗಿ ಸನ್ಮಾನಿಸಿದರು.

10 ಮತ್ತು 12 ನೇಯ ತರಗತಿಯಲ್ಲಿ 90% ಕ್ಕಿಂತಲೂ ಅಧಿಕ ಅಂಕಗಳನ್ನು ಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ನಂತರ ನಡೆದ ಜಾನಪದ ಝೇಂಕಾರ ಕಾರ್ಯಕ್ರಮದಲ್ಲಿ ಕರ್ನಾಟಕದಿಂದ ಆಗಮಿಸಿದ್ದ ಸಿನಿಮಾ ಕ್ಷೇತ್ರದಲ್ಲಿ, ಹಿನ್ನೆಲೆ ಗಾಯಕರಾಗಿ, ಜಾನಪದ ಜಂಗಮ ಎಂದು ಹೆಸರುವಾಸಿಯಾದ ಅಂತರರಾಷ್ಟ್ರೀಯ ಜಾನಪದ ಕಲಾವಿದ ಶ್ರೀ ಜೋಗಿಲಾ ಸಿದ್ದರಾಜು, ರಂಗ ವಿಜಯ ತಂಡದ ಮುಖ್ಯಸ್ಥರಾದ ಶ್ರೀ ಮಾಲೂರು ವಿಜಿ, ಅನೇಕ ಧಾರಾವಾಹಿಗಳಲ್ಲಿ ನಟಿಸಿರುವ ಶ್ರೀಮತಿ ಗೀತಾ ಮತ್ತು ಅವರ ತಂಡದವರು ನೀಡಿದ ಜಾನಪದ ಹಾಡುಗಳು ಅದ್ಭುತವಾಗಿದ್ದವು. ಹಾಗೂ ರಂಗವಿಜಯ ತಂಡ ಅರ್ಪಿಸಿದ ಝೀ ಕನ್ನಡ ಟಿವಿಯಲ್ಲಿ 2024 ಸೀಸನ್ 05 ಡ್ರಾಮ ಜೂನಿಯರ್ಸ್‌ನ ವಿಜೇತರಾದ ಪ್ರತಿಭಾವಂತ ಬಾಲ ಕಲಾವಿದರಾದ ಕುಣಿಗಲ್ ವಿಷ್ಣು ಮತ್ತು ಲಿಖಿತ್ ಸಾಯಿ ಮತ್ತು ಸಂಗಡಿಗರಿಂದ ನೀಡಿದ ಹಾಸ್ಯದ ಕಾರ್ಯಕ್ರಮಗಳು ಅಮೋಘವಾಗಿ ಮೂಡಿ ಬಂದು ಸಭಾಂಗಣದಲ್ಲಿ ಕಿಕ್ಕಿರಿದು ನೆರೆದಿದ್ದ ಪ್ರೇಕ್ಷಕರ ಅಪಾರ ಮೆಚ್ಚುಗೆ ಪಡೆದವು.

ಗುರುಗಾಂವ್ ಕನ್ನಡ ಸಂಘದ ಶ್ರೀ ಪ್ರಧಾನ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಜೋಳದರಾಶಿ ಅವರು ಅತಿಥಿ ಗಣ್ಯರಿಗೆ, ಸಭಾಂಗಣದಲ್ಲಿ ಉಪಸ್ಥಿತರಿದ್ದ ಪ್ರೇಕ್ಷಕರಿಗೆ, ಕರ್ನಾಟಕದಿಂದ ಬಂದ ಹಾಗು ಸ್ಥಳೀಯ ಕಲಾವಿದರಿಗೆ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಪ್ರತಿಯೊಬ್ಬರಿಗೂ ಧನ್ಯವಾದ ತಿಳಿಸಿದರು.

ಈ ಕಾರ್ಯಕ್ರಮ ಯಶಸ್ವಿಯಾಗಲು ಗುರುಗಾಂವ್ ಕನ್ನಡ ಸಂಘದ ಖಜಾಂಚಿ ಶ್ರೀ ಮರಿಬಸಪ್ಪ ಎಂ. ಜಂಟಿ ಕಾರ್ಯದರ್ಶಿ ಶ್ರೀ ಲಕ್ಷ್ಮಣ ಕಟ್ಟಿಮನಿ ಹಾಗು ಸದಸ್ಯರಾದ ಸರ್ವಶ್ರೀ ಗೋಪಾಲ ತಲ್ವಾರ್, ಶರಣಬಸಪ್ಪ, ರಾಜಶೇಖರ ಪಾಟೀಲ್, ಗಿರೀಶ್ ಕುಲಕರ್ಣಿ, ಅಪ್ಪಸಾಬ್ ಗೋಟೆ, ಶ್ರೀಮತಿ ಸುನಂದಾ ದರ್ಗಾ ಸಹಕರಿಸಿದ್ದಾರೆ. ಅವರೆಲ್ಲರಿಗೂ ಹಾಗು ಸಹಕಾರ ನೀಡಿದ ಸರ್ವರಿಗೂ ಕೃತಜ್ಞತೆಗಳು.❑

**ಕೃಷ್ಣಪ್ಪ ಎಂ.,** ಅಧ್ಯಕ್ಷರು ಮತ್ತು
**ಚಂದ್ರಶೇಖರ ಜೋಳದರಾಶಿ**
ಪ್ರಧಾನ ಕಾರ್ಯದರ್ಶಿ
ಗುರುಗಾಂವ್ ಕನ್ನಡ ಸಂಘ

# ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ದೆಹಲಿ ಸ್ಥಳೀಯ ಕಲಾವಿದರು



ಜನಕಪುರಿ ಕನ್ನಡ ಕೂಟ



ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಸಮಿತಿ



ದೆಹಲಿ ಕರ್ನಾಟಕ ಸಂಘ ಕನ್ನಡ ಕಲಿಕಾ ಕೇಂದ್ರ



ದೆಹಲಿ ಒಕ್ಕಲಿಗ ಗೌಡ ಸಂಘ



ದೆಹಲಿ ಫ್ರೆಂಡ್ಸ್ ತಂಡ



ಶ್ರೀಗಣೇಶ ಮಿತ್ರ ಮಂಡಳಿ



ಗುರುಗಾಂವ್ ಕನ್ನಡ ಸಂಘ : ಗ್ರೂಪ್ 1



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

# ಹಾಗು ಸಂಘ ಸಂಸ್ಥೆಗಳ ಸದಸ್ಯರು ನೀಡಿದ ನೃತ್ಯ ಪ್ರದರ್ಶನದ ದೃಶ್ಯಗಳು




ಭಿವಾಡಿ ಕನ್ನಡ ಸಂಘ (ಮಕ್ಕಳು)




ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ




ಶ್ರೀನಿವಾಸಪುರಿ ಕನ್ನಡ ಕಲಿಕಾ ಕೇಂದ್ರದ ಮಕ್ಕಳು




ಗುರುಗಾಂವ್ ಕನ್ನಡ ಸಂಘ




ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್




ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು (ಮಕ್ಕಳು)




ಜನಕಪುರಿ ಮಹಿಳಾ ಮಂಡಳ



ದೆಹಲಿ ಒಕ್ಕಲಿಗ ಗೌಡ ಸಂಘ (ಮಕ್ಕಳು)



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ



ದೆಹಲಿ ಕರ್ನಾಟಕ ಸಂಘ ಕಲಿಕಾ ಕೇಂದ್ರ ಜೂನಿಯರ್ಸ್ (ಮಕ್ಕಳು)



ಶ್ರೀನಿವಾಸಪುರಿ ಕಲಿಕಾ ಕೇಂದ್ರ (ಹುಡುಗರು)



ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಮಹಿಳಾ ಪದಾಧಿಕಾರಿಗಳು ಹಾಗೂ ಸದಸ್ಯೆಯರಿಂದ ನಾಡಗೀತೆ ಪ್ರಸ್ತುತಿ

ಶ್ರೀಮತಿಯರಾದ ಅಶ್ವಿನಿ ಬಿ.ಎಸ್., ಶುಭಾ ದೇವಿಪ್ರಸಾದ್, ಪೂಜಾ ಪಿ. ರಾವ್, ಮಾಲಿನಿ ಪ್ರಹ್ಲಾದ, ಜಯಶ್ರೀ ಬಸವರಾಜು ಹಾಗು ಆಶಾಲತಾ ಎಂ.




ಗ್ರಾಂಡ್ ಫಿನಾಲೆ ಗೀತೆಗೆ ಸ್ಥಳೀಯ
ಕಲಾವಿದರಿಂದ ಸಮೂಹ ನೃತ್ಯ

# ಕರ್ನಾಟಕ ರಾಜ್ಯೋತ್ಸವ-ಕನ್ನಡಿಗರ ಹಬ್ಬ

**ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು**
**ಬದುಕು ಬಲು ಹೀನ ನಿಧಿಯು ಸದಭಿಮಾನದ ಗೂಡು...**

ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ರಾಜ್ಯೋತ್ಸವದ ಬಗ್ಗೆ ಬರೆಯಬೇಕೆಂದು ಕುಳಿತಾಗ ನನ್ನ ಯೋಚನೆಗೆ ಬಂದ ಮೊದಲ ಸಾಲುಗಳಿವು.

ಹುಯಿಲಗೋಳ ನಾರಾಯಣ ರಾಯರನ್ನು ನೆನೆಯದೆ ಕರ್ನಾಟಕ ರಾಜ್ಯೋತ್ಸವ ಪರಿಪೂರ್ಣವಾಗದು. ಅವರ ಈ ಸಾಲುಗಳು ಪ್ರತಿ ಕನ್ನಡಿಗನ ದನಿಯಾಗಿತ್ತು. ಕರ್ನಾಟಕ ಏಕೀಕರಣ ಕಾಲದಲ್ಲಿ ಕನ್ನಡಿಗರಿಗೆಲ್ಲ ಪ್ರೇರಣೆ ಕೊಟ್ಟ ಕವಿತೆ ಇದು ಅಲ್ಲದೆ ಕನ್ನಡದ ಮೊದಲ ನಾಡಗೀತೆಯಾಗಿ ಪ್ರಸಿದ್ಧಿ ಸಹಾ ಪಡೆದಿತ್ತು. ನಂತರ 70 ರ ದಶಕದಲ್ಲಿ ಅದನ್ನು ನಾಡಗೀತೆಯ ಪಟ್ಟಯಿಂದ ತೆಗೆದು ಹಾಕಿ ತದನಂತರ 2004 ನೇ ಸಾಲಿನಲ್ಲಿ ರಾಷ್ಟ್ರಕವಿ ಕುವೆಂಪು ವಿರಚಿತ ಭಾರತ ಜನನಿಯ ತನುಜಾತೆ ಗೀತೆಯು ಅಧಿಕೃತವಾಗಿ ಕರ್ನಾಟಕ ಸರ್ಕಾರದಿಂದ ನಾಡಗೀತೆಯಾಗಿ ಮಾನ್ಯತೆ ಪಡೆದುಕೊಂಡಿರುವುದು ನಮಗೆಲ್ಲ ತಿಳಿದಿರುವ ವಿಷಯವೇ! ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ನಡೆದ ನಮ್ಮ ಕನ್ನಡದ ಹಬ್ಬವನ್ನು ಅವಲೋಕಿಸೋಣ.

ನವೆಂಬರ್ ಬಂತೆಂದರೆ ಸಾಕು ಪ್ರತಿ ಕನ್ನಡಿಗನಿಗೂ ಏನೋ ಸಂಭ್ರಮ, ಅರಿವಿಲ್ಲದೆ ಮನಸ್ಸು ಉಲ್ಲಾಸ ಉತ್ಸಾಹದಿಂದ ಹಿಗ್ಗುತ್ತದೆ. ದೆಹಲಿಯ ಹವಾಮಾನ ತಂಪಾಗಿ ಕರ್ನಾಟಕ ಸಂಘದ ಚಟುವಟಿಕೆಗಳು ಪ್ರಾರಂಭವಾಗುವ ದಿನಗಳು. ಸಂಘವು ಪ್ರತಿವರ್ಷವೂ ಏನಾದರೊಂದು ವಿಶೇಷತೆಯಿಂದ ಕನ್ನಡದ ಹಬ್ಬವನ್ನು ನಡೆಸಿಕೊಡುತ್ತದೆ. ಇದಕ್ಕಾಗಿಯೇ ಜಾತಕ ಪಕ್ಷಿಯಂತೆ ಕಾಯುವ ನಮ್ಮಂಥ ಹೊರನಾಡ ಕನ್ನಡಿಗರು!! ಇಲ್ಲಿ ನಮ್ಮೆಲ್ಲರನ್ನೂ ಒಂದುಗೂಡಿಸುವುದು. ಯಾವುದೇ ಜಾತಿ, ಘನತೆ, ವಿದ್ಯಾರ್ಹತೆ, ಸ್ಥಾನ-ಮಾನ ಯಾವುದೂ ಅಲ್ಲ.... ಕೇವಲ ಭಾಷೆ., ಕನ್ನಡ ಭಾಷೆ., ನಮ್ಮ ಕನ್ನಡ ಕಸ್ತೂರಿ.

ರಾಜ್ಯೋತ್ಸವವನ್ನು ನವೆಂಬರ್ ಒಂದರಂದು ಶಾಸ್ತ್ರೋಕ್ತವಾಗಿ ಆಚರಿಸಿ ಮುಂಬರುವ ವಾರಾಂತ್ಯದಲ್ಲಿ ವಿಜೃಂಭಣೆಯಿಂದ ಆಚರಿಸಿ ಸಂಭ್ರಮಿಸುವುದು ಇಲ್ಲಿಯ ಪದ್ಧತಿಯಾಗಿ ಬೆಳೆದು ಬಂದಿದೆ. ಕಳೆದ ಬಾರಿ ಆಯೋಜಿಸಿದ್ದ ಜಾನಪದ ವೈಭವದ ಬಗ್ಗೆ ನಿಮ್ಮೆಲ್ಲರೊಂದಿಗೆ ಹಂಚಿಕೊಂಡಿದ್ದು ನೆನಪಿರಬಹುದಲ್ಲವೇ?

ಕಳೆದ ತಿಂಗಳು ದಿನಾಂಕ 24.11.2024ರ ಭಾನುವಾರದಂದು 69 ನೆಯ ಕನ್ನಡ ರಾಜ್ಯೋತ್ಸವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯ್ತು. ಈ ಬಾರಿ ದೆಹಲಿಯಲ್ಲಿರುವ 20 ಕನ್ನಡ ಸಂಘ ಸಂಸ್ಥೆಗಳಿಂದ ಸುಮಾರು 130 ಕಲಾವಿದರು ಭಾಗವಹಿಸಿ ಅತ್ಯುತ್ತಮ ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡಿ ಯಶಸ್ವಿಗೊಳಿಸಿದರು.

ಕಾರ್ಯಕ್ರಮವನ್ನು ಐದು ಭಾಗಗಳಾಗಿ ವಿಂಗಡಿಸಿ ಅದಕ್ಕೆ ಕ್ರಮವಾಗಿ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾದ ಕುವೆಂಪು, ಬೇಂದ್ರೆ, ಕಾರಂತರು, ಮಾಸ್ತಿ ಮತ್ತು ಗೋಕಾಕ್‌ರ ಹೆಸರುಗಳಿಂದ ಗುರುತಿಸಿದ್ದು ವಿಶೇಷವಾಗಿತ್ತು. ಕಾರ್ಯಕ್ರಮವನ್ನು ಚೊಕ್ಕವಾಗಿ ರೂಪಿಸಲಾಗಿತ್ತು. ದೆಹಲಿ ಕನ್ನಡಿಗರೆಲ್ಲ ತಮ್ಮ ತಮ್ಮ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಅತಿಥಿಗಳ ಪ್ರಶಂಸೆಗೆ ಪಾತ್ರರಾದರು.

ಪ್ರತಿ ವರ್ಷದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಕನ್ನಡಿಗರಿಗೆ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯ್ತು.

**ಈ ಗೌರವಕ್ಕೆ ಪಾತ್ರರಾದ ಮಹನೀಯರು**– ದೆಹಲಿ ಕರ್ನಾಟಕ ಸಂಘದ ಹುಟ್ಟು, ಬೆಳವಣಿಗೆ, ಯಶಸ್ಸುಗಳಲ್ಲಿ ಪ್ರಮುಖ ಪಾತ್ರ ವಹಿಸಿದ ದೆಹಲಿ ಕನ್ನಡಿಗ ಶ್ರೀ ಸರವು ಕೃಷ್ಣ ಭಟ್, ಸಂಸತ್



ಭವನದಲ್ಲಿ ರಾಜ್ಯಸಭಾ ಸೆಕ್ರೆಟರೀಯಟ್‌ನ ಹೆಚ್ಚುವರಿ ಕಾರ್ಯದರ್ಶಿಯಾಗಿರುವ ದೆಹಲಿ ಕನ್ನಡಿಗ ಡಾ. ಕೆ.ಎಸ್. ಸೋಮಶೇಖರ್, 'ಮಧ್ಯಂತರ' ಕಿರು ಚಲನ ಚಿತ್ರಕ್ಕಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ವಿಜೇತ ದೆಹಲಿ ಕನ್ನಡಿಗ ಶ್ರೀ ಬಸ್ತಿ ದಿನೇಶ್ ಶೆಣೈ ಹಾಗು ಹರಿಕಥೆ, ಯಕ್ಷಗಾನ, ಸಂಗೀತ ಮತ್ತು ಭಾರತನಾಟ್ಯ ಕಲಾವಿದೆ ದೆಹಲಿ ಕನ್ನಡತಿ ಶ್ರೀಮತಿ ರಾಜೇಶ್ವರಿ ಭಟ್.

ಸ್ಫೂರ್ತಿದಾಯಕ ನುಡಿಗಳನ್ನಾಡಿದ ಮುಖ್ಯ ಅತಿಥಿ ರಾಜ್ಯಸಭಾ ಸಂಸದೆ ಶ್ರೀಮತಿ ಸುಧಾ ಮೂರ್ತಿ ಅವರು ದೆಹಲಿಯ ಕನ್ನಡಿಗರ ಉತ್ಸಾಹ ಶ್ಲಾಘನೀಯ ಎಂದು ಬಣ್ಣಿಸಿದರು. ಇಂದಿನ ದಿನಗಳಲ್ಲಿ ಕನ್ನಡ ನಾಡಿನಲ್ಲೇ ಕಾಣದ ರಾಜ್ಯೋತ್ಸವ ಸಂಭ್ರಮ ದೆಹಲಿಯಲ್ಲಿ ಕಂಡೆ ಎಂದು ಸಂಭ್ರಮಿಸಿದರು. ಅಲ್ಲದೆ ಪ್ರತಿ ಬಾರಿ ಇಲ್ಲಿಯೇ ಬಂದು ಕನ್ನಡದ ಹಬ್ಬವನ್ನು ಆಚರಿಸುವ ಆಶಯವನ್ನು ಸಹಾ ವ್ಯಕ್ತಪಡಿಸಿದ್ದು ನಮಗೆಲ್ಲ ಹೆಮ್ಮೆಯ ವಿಷಯ.

ಸ್ಥಳೀಯ ಸಂಘ ಸಂಸ್ಥೆಗಳ ಕಲಾವಿದರಿಂದ ಸಂಘದ ವೇದಿಕೆಯಲ್ಲಿ ಪ್ರಸ್ತುತಿಗೊಂಡ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿ ಜನಕಪುರಿ ಮಹಿಳಾ ಮಂಡಳಿ ತಂಡದ ಸದಸ್ಯೆಯರೊಂದಿಗೆ ನೃತ್ಯ ಪ್ರದರ್ಶನ ನೀಡಿದ್ದು ಖುಷಿ ಕೊಟ್ಟಿತ್ತು. ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಹೃದಯಪೂರ್ವಕ ಶುಭಾಶಯಗಳು. ❑

***ವೈಜಯಂತಿ ಗಿರೀಶ್***

## ದೆಹಲಿ ಕರ್ನಾಟಕ ಸಂಘದ ರಾಜ್ಯೋತ್ಸವದಲ್ಲಿ ಭಿವಾಡಿ ಕನ್ನಡ ಸಂಘದಿಂದ ಪ್ರಸ್ತುತಿ-ಒಂದು ಇಣುಕು ನೋಟ



ದಿನಾಂಕ 24.11.2024 ರಂದು ದೆಹಲಿಯ ಪ್ರತಿಷ್ಠಿತ ದೆಹಲಿ ಕರ್ನಾಟಕ ಸಂಘವು ಆಯೋಜಿಸಿದ್ದ ರಾಜ್ಯೋತ್ಸವ ಸಂಭ್ರಮದ ಅಂಗವಾಗಿ ಸ್ಥಳೀಯ ಕಾರ್ಯಕ್ರಮದ ಅಡಿಯಲ್ಲಿ ಭಿವಾಡಿ ಕನ್ನಡ ಸಂಘವೂ ತಮ್ಮ ಕಲಿಕಾ ಕೇಂದ್ರದ ಏಳು ಮಂದಿ ವಿದ್ಯಾರ್ಥಿಗಳ ಒಂದು ತಂಡದ ಮೂಲಕ ಭಾಗವಹಿಸಿದ್ದು ನಮಗೆಲ್ಲಾ ಅತಿ ಸಂತಸ ತಂದ ಬೆಳವಣಿಗೆ. ಕಾರ್ಯಕ್ರಮದ ಒಟ್ಟು ಆಯೋಜನೆ ಮತ್ತು ನಿರ್ವಹಣೆ ಅಚ್ಚು ಕಟ್ಟಾಗಿ ನಡೆದಿದ್ದು ಚೊಚ್ಚಲ ಬಾರಿಗೆ ಈ ರೀತಿ ನಮ್ಮ ಮಕ್ಕಳ ನೃತ್ಯಪ್ರದರ್ಶನವೊಂದನ್ನು ನೇರವಾಗಿ ವೀಕ್ಷಿಸುವ ಸದವಕಾಶ ದೊರಕಿದ್ದು ನಮ್ಮೆಲ್ಲರ ಪಾಲಿಗೆ ಅನಿರೀಕ್ಷಿತ ಹಾಗೂ ಅಪರಿಮಿತ ಆನಂದ ತಂದುಕೊಟ್ಟಿತ್ತು.

ಸುಮಾರು ಮೂರು ವಾರಗಳ ಹಿಂದಿನಿಂದಲೇ ಸೂಚನೆ ಬಂದಿದ್ದರೂ ಭಿವಾಡಿಯಲ್ಲೂ ರಾಜ್ಯೋತ್ಸವದ ಆಚರಣೆಯಲ್ಲಿ ನಿರತರಾಗಿದ್ದ ನಾವೆಲ್ಲಾ ಸದರಿ ಕಾರ್ಯಕ್ರಮದ ಬಗ್ಗೆ ಸರಿಯಾಗಿ ಜಾಗೃತರಾಗಿ ಗಂಭೀರತೆಯಿಂದ ತಯಾರಿ ಹಾಗೂ ಅಭ್ಯಾಸ ನಡೆಸಲು ಆರಂಭಿಸಿದ್ದು ಕೊನೆಯ ಏಳೆಂಟು ದಿನಗಳಲ್ಲಿಯಷ್ಟೆ.

ರಾಷ್ಟ್ರೀಯ ರಾಜಧಾನಿ ಪರಿಸರದಲ್ಲಿನ ನುರಿತ 20 ತಂಡಗಳಲ್ಲಿ ಒಂದಾಗಿ ಗುರುತಿಸಿಕೊಳ್ಳುವ ಸಂದರ್ಭವನ್ನು ಒಂದು ಘನ ಗೌರವವೆಂದು ಭಾವಿಸಿ ಭಿವಾಡಿ ಕಂದಮ್ಮಗಳನ್ನೆಲ್ಲಾ ಅವರ ಪಾಲಕಪೋಷಕರು ಚೆನ್ನಾಗಿ ತಯಾರುಗೊಳಿಸಿದ್ದವು. ನಮ್ಮ ತಂಡದ 'ನಿಂಬಿಯಾ ಬನಾದ ಮ್ಯಾಗಳಾ' ನೃತ್ಯ ಪ್ರದರ್ಶನ ಎಲ್ಲರ ಮನಸೂರೆಗೊಂಡಿದ್ದು ನಮಗೆಲ್ಲಾ ಅಭಿಮಾನ ತಂದ ಘಟನೆ.

ಕಾರ್ಯಕ್ರಮದ ಪ್ರತಿಯೊಂದು ಪ್ರಸ್ತುತಿಯೂ ಅದರದೇ ಆದ ಛಾಪನ್ನು ಮುದ್ರಿಸಿದ್ದು ಎಲ್ಲರ ಮನಸ್ಸನ್ನೂ ಸೂರೆಗೊಳ್ಳುವಲ್ಲಿ ಯಸಸ್ವಿಯಾಗಿತ್ತು. ಸಭಾ ಕಾರ್ಯಕ್ರಮಗಳನ್ನು ಚಿಕ್ಕವಾಗಿ ಮತ್ತು ಚೊಕ್ಕವಾಗಿ ನಡೆಸಿಕೊಟ್ಟಿದ್ದಾಗ್ಯೂ ವಿಶಿಷ್ಟ ಕನ್ನಡಿಗರೆಂದು ಸನ್ಮಾನಗೊಂಡ ನಾಲ್ವರು ಶ್ರೇಷ್ಠ ವ್ಯಕ್ತಿಗಳಲ್ಲಿ ಪ್ರತಿಯೊರ್ವರೂ ಉತ್ಕೃಷ್ಟವಾಗಿ ಮಾತುಗಳನ್ನಾಡಿ ನಮ್ಮೆಲ್ಲರ ಗೌರವಕ್ಕೆ ಪಾತ್ರರಾಗಿದ್ದರು. ಆ ದಿನಕ್ಕೆ ಕಿರೀಟಪ್ರಾಯರಾಗಿ ಅತಿಹೆಚ್ಚಿನ ಘನತೆ ತಂದು ಕೊಟ್ಟಿದ್ದೆಂದರೆ ಸಂಸದೆಯಾಗಿದ್ದು ತೀರಾ ಜನಪ್ರಿಯರಾಗಿದ್ದರೂ ಸರಳ ವ್ಯಕ್ತಿತ್ವದ ಡಾ. ಸುಧಾ ಮೂರ್ತಿ ಅಮ್ಮನವರ ಮನತಟ್ಟುವ ಮಾತುಗಳು ಮತ್ತು ಅವರು ಎಲ್ಲರೊಂದಿಗೆ ಭಾವಚಿತ್ರಗಳನ್ನು ತೆಗೆಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದು. ನಮಗೆಲ್ಲಾ ಇದು ಜೀವನದ ಒಂದು ಅವಿಸ್ಮರಣೀಯ ಸಂಜೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಭಿವಾಡಿಯಲ್ಲಿ ಸುಮಾರು ಎರಡು ದಶಕಗಳಷ್ಟು ಸಮಯದಿಂದ ನೆಲೆಸಿರುವ ನಮಗೆ ತುಂಬಾ ವಿಳಂಬವಾಗಿಯಾದರೂ ದೆಹಲಿಯ ವೇದಿಕೆಯನ್ನೇರುವ ಅವಕಾಶ ದೊರಕಿದ್ದು ನಮ್ಮ ಭಿವಾಡಿ ಕನ್ನಡ ಸಂಘದ ದಕ್ಷ ಹಾಗೂ ಲವಲವಿಕೆಯ ಪದಾಧಿಕಾರಿಗಳಿಂದ ಎನ್ನಲು ನನಗೆ ಹೆಮ್ಮೆ ಎನಿಸುತ್ತಿದೆ. ನನಗೂ ಕಾರ್ಯಕಾರಿಣಿಯಲ್ಲಿ ಸದಸ್ಯಳಾಗಲು ಅವಕಾಶ ಒದಗಿಸಿಕೊಟ್ಟಿದ್ದಕ್ಕೂ ಸಂಘದ ಪರವಾಗಿ ನನ್ನ ಈ ಕೆಲವು ಅನಿಸಿಕೆಗಳನ್ನು ನಮೂದಿಸಿಕೊಳ್ಳಲು ಅನುವು ಮಾಡಿಕೊಟ್ಟ ಎಲ್ಲರಿಗೂ ನಾನು ಚಿರಋಣಿ.

ಇಂತಹಾ ಒಂದು ಅಭೂತಪೂರ್ವ ಆಯೋಜನೆಗೆ ಹಾಗೂ ದೂರದ ನಮ್ಮನ್ನು ಕೂಡಾ ದೆಹಲಿ ಕನ್ನಡಿಗರ ಒಂದು ಭಾಗವಾಗಿ ಪರಿಗಣಿಸುತ್ತಿರುವುದ್ದಕ್ಕಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಗೆ ನಮ್ಮೆಲ್ಲರ ನಲ್ಮೆಯ ಆದರವನ್ನು ತಿಳಿಸಲು ಹರ್ಷವೆನಿಸುತ್ತಿದೆ.

ಮುಂದೆಯೂ ಇದೇ ರೀತಿ ದೆಹಲಿ-ಭಿವಾಡಿಯ ನೆಂಟು ಸದಾ ಹಸುರಾಗಿ ಹಸನಾಗಿರಲಿ ಎಂಬ ಆಶಯದೊಂದಿಗೆ, ನಿಮ್ಮೆಲ್ಲರ ಭಿವಾಡಿ ಕನ್ನಡತಿ ❑

***ಸುಕನ್ಯಾ ಹಿರೇಮಠ***

# ನವದೆಹಲಿ ಕರ್ನಾಟಕ ಭವನದ ವತಿಯಿಂದ
# 69 ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ



ಪ್ರತಿ ವರ್ಷದಂತೆ ಈ ವರ್ಷವೂ ಸಹ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ 69ನೇ ಕರ್ನಾಟಕ ರಾಜ್ಯೋತ್ಸವವನ್ನು ಬಹಳಷ್ಟು ಸಂತೋಷ, ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು. ನವದೆಹಲಿಯ ಕರ್ನಾಟಕ ಭವನ (ಶರಾವತಿ)ಯಲ್ಲಿ ದಿನಾಂಕ 1ನೇ ನವೆಂಬರ್, 2024 ರ ಶುಕ್ರವಾರದಂದು ಬೆಳಿಗ್ಗೆ 9.00 ಗಂಟೆಗೆ ಕರ್ನಾಟಕ ಭವನ ನವದೆಹಲಿಯ ಅಪರ ನಿವಾಸಿ ಆಯುಕ್ತರಾದ ಶ್ರೀಮತಿ ಆಕೃತಿ ಬನ್ಸಲ್ ಐಎಎಸ್ ಅವರು ಧ್ವಜಾರೋಹಣ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತರಾದ ಶ್ರೀ ಸಿ. ಮೋಹನ್ ಕುಮಾರ್, ಹಾಗೂ ನಿವಾಸಿ ಆಯುಕ್ತರವರ ಕಛೇರಿ ಮತ್ತು ಕರ್ನಾಟಕ ಭವನದ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಕುಟುಂಬದವರು "ದೇವಿ ಭುವನೇಶ್ವರಿ ಪೂಜೆ" ಹಾಗೂ "ನಾಡಗೀತೆ"ಯನ್ನು ಹಾಡುವ ಮೂಲಕ ರಾಜ್ಯೋತ್ಸವ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ಇದೇ ವೇಳೆ ಕೆ.ಎಸ್.ಆರ್.ಪಿ. ತುಕಡಿ ನಡೆಸಿದ ಕವಾಯಿತು ಪ್ರಶಂಸನೀಯವಾಗಿತ್ತು.

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ದಿನಾಂಕ 04.11.2024 ರಂದು ನವದೆಹಲಿಯ ಕರ್ನಾಟಕ ಭವನದ ವತಿಯಿಂದ ವೈದ್ಯಾಧಿಕಾರಿ ಡಾ. ಟಿ. ಕಾರ್ತಿಕ್, ಎಂ.ಬಿ.ಬಿ.ಎಸ್., ಇವರ ನೇತೃತ್ವದಲ್ಲಿ 'ರಕ್ತದಾನ' ಹಾಗೂ ಉಚಿತ 'ನೇತ್ರ ತಪಾಸಣಾ ಶಿಬಿರ'ವನ್ನೂ, ಹಾಗು ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಬಾರಿ ಕರ್ನಾಟಕ ಭವನದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಅತ್ಯಂತ ಉತ್ಸಾಹದಿಂದ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು.

ಕರ್ನಾಟಕ ರಾಜ್ಯೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮವನ್ನು ದಿನಾಂಕ 09.11.2024 ರಂದು, 'ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಆಯೋಜನೆ ಮಾಡಲಾಗಿತ್ತು. ಜ್ಯೋತಿ ಬೆಳಗಿಸಿ ನಾಡಗೀತೆ ಹಾಡುವ ಮೂಲಕ' ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು. ಮುಖ್ಯ ಅತಿಥಿಗಳು, ವಿಶೇಷ ಅತಿಥಿಗಳು, ಅತಿಥಿ ಗಣ್ಯರುಗಳು, ಅಧಿಕಾರಿಗಳು, ನೌಕರರು ಹಾಗೂ ದೆಹಲಿ ಕನ್ನಡಿಗರನ್ನು ಸಹಾಯಕ ಸಮನ್ವಯ ಅಧಿಕಾರಿ ಶ್ರೀ ಎಚ್. ಆಂಜನೇಯ, ಅವರು ಕಾರ್ಯಕ್ರಮಕ್ಕೆ ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಉಪ ನಿವಾಸಿ ಆಯುಕ್ತರಾದ ಶ್ರೀ ಸಿ. ಮೋಹನ್ ಕುಮಾರ್, ಅವರು ಕನ್ನಡ ನಾಡು, ನುಡಿ, ಕರ್ನಾಟಕದ ಏಕೀಕರಣ ಬಗ್ಗೆ ಸವಿಸ್ತಾರವಾಗಿ ಹಾಗೂ ಕರ್ನಾಟಕ ರಾಜ್ಯೋತ್ಸವದ ಆಚರಣೆ ಕುರಿತಾದ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ನಿವಾಸಿ ಆಯುಕ್ತರಾದ ಶ್ರೀ ವಿಪುಲ್ ಬನ್ಸಲ್, ಅವರು ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಶುಭ ಕೋರಿದರು. ನಂತರ ಶ್ರೀಮತಿ ಆಕೃತಿ ಬನ್ಸಲ್ ಐಎಎಸ್., ಅಪರ ನಿವಾಸಿ ಆಯುಕ್ತರು, ನವದೆಹಲಿ ಇವರು ಕನ್ನಡ, ನಾಡು, ನುಡಿ, ನೆಲ, ಜಲ, ಭಾಷೆ ಹಾಗೂ ರಾಜೋತ್ಸವ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಈ ಸಭಾ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಬಿ.ವಿ. ರಾಘವೇಂದ್ರ, ವ್ಯವಸ್ಥಾಪಕರು (ಸಾ&ಶಿ) ಅವರು ಅಚ್ಚುಕಟ್ಟಾಗಿ ನೆರವೇರಿಸಿಕೊಟ್ಟರು.

ಸಾಂಸ್ಕೃತಿಕ ಕಾರ್ಯಕ್ರಮದ ಪ್ರಾರಂಭದಲ್ಲಿ, ಕುಮಾರಿ ರೋಷಿಣಿ ಗೌಡ, 'ಗಣೇಶ ಸ್ತುತಿ'ಯ ಪ್ರಾರ್ಥನೆಯನ್ನು ನೃತ್ಯರೂಪಕದ ಮೂಲಕ ನಡೆಸಿಕೊಟ್ಟರು. ನಂತರ, ಮಕ್ಕಳ ನೃತ್ಯ, ಕರ್ನಾಟಕ ಭವನದ ಸಿಬ್ಬಂದಿಗಳಿಂದ ಗಾಯನ, ಮಹಾಭಾರತದ ನೃತ್ಯ ರೂಪಕ ಹಾಗೂ ರಾಮಾಯಣ ನೃತ್ಯ ರೂಪಕಗಳು, ಭರತನಾಟ್ಯ ಮತ್ತು ಕನ್ನಡ ಕೋಗಿಲೆ ಖ್ಯಾತಿಯ ಗಾಯಕ ಶ್ರೀ ಖಾಸಿಂ ಆಲಿ ಅವರ ಇಂಪಾದ ಹಾಡುಗಾರಿಕೆ ನೆರೆದಿದ್ದ ಎಲ್ಲಾ ಸಭಿಕರ ಪ್ರಶಂಸೆಗೆ ಪಾತ್ರವಾದವು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಈ ಕಾರ್ಯಕ್ರಮಕ್ಕೆ ನಿಯೋಜಿಸಲಾಗಿದ್ದ ಸಾಂಸ್ಕೃತಿಕ ತಂಡದವರಾದ ಶ್ರೀ ಸೆಕ್ರೆಡ್ ಆರ್ಟ್ಸ್ ನೃತ್ಯ ಕಲಾ ತಂಡದ ಶ್ರೀ ಮಂಜುನಾಥ್ ಮತ್ತು ತಂಡದವರು ಹಾಗೂ ಶ್ರೀ ವಿಜಯ ಮಹಾಂತೇಶ್ವರ ಕಲಾ ಬಳಗದವರು, ಭವನದ ಸಿಬ್ಬಂದಿ ಮತ್ತು ಮಕ್ಕಳಿಗೆ ಅತ್ಯಂತ ಕಡಿಮೆ ಅವಧಿಯಲ್ಲಿ ನೃತ್ಯ ರೂಪಕಗಳ ಹಾಗೂ ಸಂಗೀತದ ತರಬೇತಿ ನೀಡಿ ಕಾರ್ಯಕ್ರಮ ಯಶಸ್ವಿಯಾಗಲು ಮುಖ್ಯ ಪಾತ್ರ ವಹಿಸಿದ್ದರು.

ಕರ್ನಾಟಕ ರಾಜ್ಯೋತ್ಸವಕ್ಕೆ ಪೂರ್ವಾನ್ವಯವಾಗಿ ನಡೆಸಿದ ಆಟೋಟ ಸ್ಪರ್ಧೆಗಳಲ್ಲಿ ಈ ಬಾರಿ ಭವನದ ಸಿಬ್ಬಂದಿಗಳು, ಕುಟುಂಬದವರು, ಮಕ್ಕಳು ಬಹಳಷ್ಟು ಅತ್ಯುತ್ಸಾಹದಿಂದ ಭಾಗವಹಿಸಿದ್ದರು. ಸರಿ ಸುಮಾರು 300 ಕ್ಕೂ ಹೆಚ್ಚು ಪ್ರಶಸ್ತಿ ವಿಜೇತರಿಗೆ ಕಾರ್ಯಕ್ರಮದಲ್ಲಿ ಬಹುಮಾನ ವಿತರಣೆ ಮಾಡಲಾಯಿತು.

ಕರ್ನಾಟಕ ರಾಜ್ಯೋತ್ಸವ ಆಚರಣೆ ಸಂಬಂಧ, ಪೂರ್ವಾನ್ವಯವಾಗಿ ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರು ವಿವಿಧ ಸಮಿತಿಯನ್ನು ರಚಿಸಿದ್ದರು. ಕ್ರೀಡಾ ಸಮಿತಿಯ ಅಧ್ಯಕ್ಷರಾದ ಶ್ರೀ ಹರಿಕೃಷ್ಣ, ಅಲಂಕಾರ ಸಮಿತಿಯ ಅಧ್ಯಕ್ಷರು ಕುಮಾರಿ ಚಿನ್ಮಯ್, ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರು ಶ್ರೀ ಎಸ್. ರಮೇಶ, ಪ್ರಚಾರ ಸಮಿತಿಯ ಅಧ್ಯಕ್ಷರು ಶ್ರೀ ಡಿಕ್ಸನ್ ಡಿ'ಸೋಜ, ಊಟೋಪಚಾರ ಸಮಿತಿಯ ಅಧ್ಯಕ್ಷರು ಶ್ರೀ ಕೆ.ಆರ್. ವೆಂಕಟೇಶ್, ಹಾಗೂ ಆಯಾ ತಂಡದ ಎಲ್ಲಾ ಸದಸ್ಯರುಗಳು ಬಹಳ ಉತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಕಾರಣಕರ್ತರಾಗಿದ್ದರು. ಅವರೆಲ್ಲರ ಸಹಕಾರವನ್ನು ವ್ಯವಸ್ಥಾಪಕರಾದ ಶ್ರೀ ಬಿ.ವಿ. ರಾಘವೇಂದ್ರ, ಅವರು ಈ ಸಂದರ್ಭದಲ್ಲಿ ಶ್ಲಾಘಿಸುತ್ತಾ, ಈ ಬಾರಿಯ ಆಟೋಟ ಸ್ಪರ್ಧೆಗಳನ್ನು ನಡೆಸಲು ಮೈದಾನದ ವ್ಯವಸ್ಥೆ ಮಾಡಿಕೊಟ್ಟ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ "ಅಧ್ಯಕ್ಷರು ಹಾಗೂ ಆಡಳಿತ ಸಮಿತಿಯ ಎಲ್ಲಾ ಪದಾಧಿಕಾರಿಗಳಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನಡೆಸಲು ಸಭಾಂಗಣದ ವ್ಯವಸ್ಥೆ ಮಾಡಿಕೊಟ್ಟ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳಿಗೆ ಹಾಗೂ ನೆರೆದಿದ್ದ ಎಲ್ಲಾ ಕನ್ನಡ ಮನಸುಗಳಿಗೂ, ಹಾಗೂ ಮಾದ್ಯಮ ಮಿತ್ರರೂ ಹಾಗೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ವಂದನಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಯಶಸ್ವಿಯಾಗಿ ಸಂಪನ್ನಗೊಂಡ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಈ ಬಾರಿ ದಾವಣಗೆರೆಯ ಬಾಣಸಿಗರಿಂದ ಕರ್ನಾಟಕ ಶೈಲಿಯ ವಿವಿಧ ಭಕ್ಷಗಳನ್ನೊಳಗೊಂಡ ರಾತ್ರಿ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಕರ್ನಾಟಕ ಭವನದ ಎಲ್ಲಾ ಅಧಿಕಾರಿ ವರ್ಗದವರು, ಸಿಬ್ಬಂದಿ, ಮಕ್ಕಳು, ಮಹಿಳೆಯರು ಒಟ್ಟಾರೆಯಾಗಿ ಸೇರಿ ಸುವ್ಯವಸ್ಥಿತವಾಗಿ ಆಯೋಜನೆಗೊಂಡ ಕರ್ನಾಟಕ ರಾಜ್ಯೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಅಪಾರ ಸಂಖ್ಯೆಯಲ್ಲಿ ಸಭಾಂಗಣದಲ್ಲಿದ್ದ ದೆಹಲಿ ಕನ್ನಡಿಗರ ಸಮ್ಮುಖದಲ್ಲಿ ಅದ್ದೂರಿಯಿಂದ ಆಚರಿಸಿ ಸಂಭ್ರಮಪಟ್ಟರು.

ಸಮಸ್ತ ನಾಡಿನ ಮತ್ತು ಹೊರನಾಡಿನ ಕನ್ನಡಿಗರಿಗೆ 69ನೇ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.❑

**ಎಸ್. ರಮೇಶ**
ಸಂಯೋಜಕರು, ಸಾಂಸ್ಕೃತಿಕ ಸಮಿತಿ,
ಕರ್ನಾಟಕ ಭವನ





# ರಾಜ್ಯದ ಮುಖ್ಯಮಂತ್ರಿಗಳಿಂದ ಕನ್ನಡ ನಾಡಿನ ಪ್ರಸಿದ್ಧ 'ನಂದಿನಿ' ವಿವಿಧ ಶ್ರೇಣಿಯ ಹಾಲು ನವದೆಹಲಿಯಲ್ಲಿ ಬಿಡುಗಡೆ




ಕರ್ನಾಟಕ ರಾಜ್ಯದ ಪ್ರತಿ ಮನೆಗಳಲ್ಲಿ ಕನ್ನಡಿಗರ ಮನಗಳಲ್ಲಿ ಹೆಸರುವಾಸಿಯಾಗಿರುವ ಉತ್ಕೃಷ್ಟ ಹಾಲು ಮತ್ತು ಹಾಲಿನ ಪ್ರಾಡಕ್ಟ್‌ಗಳ ಬ್ರಾಂಡ್ 'ನಂದಿನಿ' ತನ್ನ ರುಚಿ, ಸ್ವಾದಿಷ್ಟತೆ ಹಾಗು ಉತ್ತಮ ಗುಣಮಟ್ಟದ ಕೊಬ್ಬು, ಪ್ರೋಟೀನ್, ಕ್ಯಾಲ್ಸಿಯಂ ಸಾಂದ್ರತೆಯುಕ್ತ ಹಾಲು ರಾಜ್ಯದಾದ್ಯಂತ ಜನರ ಮೆಚ್ಚುಗೆ ಪಾತ್ರವಾಗಿದ್ದು ಈಗ ರಾಷ್ಟ್ರ ರಾಜಧಾನಿ ದೆಹಲಿಗೆ ಕಾಲಿಡುತ್ತಿದ್ದು, ಇಲ್ಲಿನ ದೆಹಲಿ ಎನ್.ಸಿ.ಆರ್. ಕನ್ನಡಿಗರಲ್ಲಿ ಸಂತಸವನ್ನು ಮೂಡಿಸಿದೆ.

ನವದೆಹಲಿಯ ಚಾಣಕ್ಯಪುರಿ ಬಳಿ ಪಂಚಶೀಲ ಮಾರ್ಗದಲ್ಲಿರುವ ಪಂಚತಾರಾ ಅಶೋಕ ಹೋಟೆಲಿನಲ್ಲಿ ದಿನಾಂಕ 21.11.2024 ರಂದು ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ (ಕೆಎಂಎಫ್) ಹಾಗು ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಅಭೂತಪೂರ್ವ ಸಮಾರಂಭದಲ್ಲಿ ವಿವಿಧ ಶ್ರೇಣಿಯ ನಂದಿನಿ ಹಾಲು ಮತ್ತು ಹಾಲಿನ ಪ್ರಾಡಕ್ಟ್ಸ್‌ಗಳನ್ನು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರಿಂದ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಅತಿಥಿ ಗಣ್ಯರ ಸಮ್ಮುಖದಲ್ಲಿ ಹಾಗು ದೆಹಲಿ ಕನ್ನಡಿಗರ ನಡುವೆ ಬಿಡುಗಡೆ ಮಾಡಲಾಯಿತು.

ಮುಖ್ಯ ಅತಿಥಿಗಳಾಗಿ ರಾಜ್ಯದ ಕೃಷಿ ಸಚಿವರೂ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶ್ರೀ ಎನ್. ಚಲುವರಾಯ ಸ್ವಾಮಿ, ರಾಜ್ಯದ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರಾದ ಶ್ರೀ ಕೆ. ವೆಂಕಟೇಶ್, ರಾಜ್ಯದ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಶ್ರೀ ಬೈರತಿ ಸುರೇಶ್, ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎ.ಬಿ. ರಮೇಶ ಬಂಡಿಸಿದ್ದೇಗೌಡ, ವಿಶೇಷ ಆಹ್ವಾನಿತರಾದ ಶ್ರೀ ಟಿ. ಬೋರೇಗೌಡ, ಅಧ್ಯಕ್ಷರು ಹಾಗು ಶ್ರೀ ರಘುನಂದನ್ ಎಂ.ಎಸ್, ಉಪಾಧ್ಯಕ್ಷರು ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟ, ಮಾನ್ಯ ರಾಜ್ಯಸಭಾ ಸದಸ್ಯರಾದ ಶ್ರೀ ಈರಣ್ಣ ಕಡಾಡಿ ಅವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೆಎಂಎಫ್ ನ ಅಧ್ಯಕ್ಷರೂ ಹಾಗು ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ಎಲ್.ಬಿ.ಪಿ. ಭೀಮ ನಾಯ್ಕ ಅವರು ವಹಿಸಿದ್ದರು. ಆಹ್ವಾನಿತರಾಗಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಡಾ. ಅಜಯ್ ನಾಗಭೂಷನ್ ಎಂ.ಎನ್., ಐಎಎಸ್., ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರದ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಶ್ರೀಮತಿ ಇಮ್‌ಕೊಂಗ್ಲ ಜಮೀರ್, ಅಪರ ನಿವಾಸಿ ಆಯುಕ್ತೆ ಶ್ರೀಮತಿ ಆಕೃತಿ ಬನ್ಸಲ್, ಐಎಎಸ್, ಕರ್ನಾಟಕ ರಾಜ್ಯ ನಾಟಕ ಅಕಾಡೆಮಿ ಅಧ್ಯಕ್ಷರಾದ ಶ್ರೀ ಕೆ.ವಿ. ನಾಗರಾಜಮೂರ್ತಿ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಶ್ರೀ ಗೋವಿಂದರಾಜು, ಕೆಎಂಎಫ್ ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಂ.ಕೆ. ಜಗದೀಶ್ ಕೆಎಎಸ್ ಹಾಗೂ ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಡಿ.ಆರ್. ಮಂಜೇಶ್ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಮೊದಲಿಗೆ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದಂತೆಯೇ ಅಶೋಕ ಹೋಟೆಲ್‌ನ ಮುಖ್ಯದ್ವಾರದಲ್ಲಿ ಹಳದಿ ಕೆಂಪು ಬಣ್ಣದ ಕನ್ನಡ ಶಾಲನ್ನು ಅವರಿಗೆ ಹೊದಿಸುವುದರೊಂದಿಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಗೌರವ ಸಮರ್ಪಿಸಿದರು. ದೆಹಲಿ ಕನ್ನಡ ಮಹಿಳೆಯರು ಕುಂಭ ಕಳಸದೊಂದಿಗೆ ಮುಖ್ಯಮಂತ್ರಿಗಳನ್ನು ಸ್ವಾಗತಿಸಿ ಮುಖ್ಯ ದ್ವಾರದಿಂದ ಬಾಂಕ್ವೆಟ್ ಹಾಲಿನ ವೇದಿಕೆಯವರೆಗೆ ಕರೆತಂದರು ವೇದಿಕೆ ಕಾರ್ಯಕ್ರಮದ ಆರಂಭದಲ್ಲಿ ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ಅವರ ನೇತೃತ್ವದಲ್ಲಿ ದೆಹಲಿ ಕನ್ನಡತಿಯರು ನಾಡಗೀತೆಗೆ ಧ್ವನಿಯಾದರು. ನಾಡಗೀತೆಯಲ್ಲಿ ಭಾಗಿಯಾದ ಮಹಿಳೆಯರು ಶ್ರೀಮತಿ ಮಾಲಿನಿ ಪ್ರಹ್ಲಾದ, ಶ್ರೀಮತಿ ಶುಭಾ ದೇವಿಪ್ರಸಾದ್, ಶ್ರೀಮತಿ ಶ್ವೇತಾಸುಧೀರ್, ಶ್ರೀಮತಿ ಶೋಭಾ ನಾಗರಾಜ, ಶ್ರೀಮತಿ ಜಯಶ್ರೀ ಬಸವರಾಜು, ಮತ್ತು ಶ್ರೀಮತಿ ಮಮತಾ ಶಿವರಾಮ್ ಅವರು ನಾಡಗೀತೆ ಹಾಡಿದ ಸಮಯ ಎಲ್ಲರೂ ಎದ್ದು ನಿಂತು ನಾಡದೇವಿಗೆ ಗೌರವ ಸಲ್ಲಿಸಿದರು. ನಂತರ ಶ್ರೀ ಭೀಮಸೇನ ಭಜಂತ್ರಿ ಮತ್ತು ಶ್ರೀ ಶಶಿಕಾಂತ ಪಾಟೀಲ್ ಅವರು ಕನ್ನಡ ಮಹಿಳೆಯರೊಂದಿಗೆ 'ನೇಗಿಲ ಹಿಡಿದ ಉಳುವ ನೇಗಿಯ ನೋಡಣ್ಣ' ರೈತಗೀತೆಯನ್ನು ಪ್ರಸ್ತುತಪಡಿಸಿದರು.

ಕೆಎಂಎಫ್ ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಂ.ಕೆ. ಜಗದೀಶ್ ಅವರು ಮುಖ್ಯಮಂತ್ರಿಗಳನ್ನು, ಅತಿಥಿ ಗಣ್ಯರನ್ನು ಹಾಗು ನೆರೆದಿದ್ದ ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು. ವೇದಿಕೆ ಮೇಲಿದ್ದ ಅತಿಥಿ ಗಣ್ಯರಿಂದ ದೀಪ ಪ್ರಜ್ವಲನೆಯೊಂದಿಗೆ ಸಮಾರಂಭ ವಿದ್ಯುಕ್ತವಾಗಿ ಆರಂಭವಾಯಿತು. ಅತಿಥಿ ಗಣ್ಯರಿಗೆ ಎರಡೂ ಒಕ್ಕುಟಗಳ ಪರವಾಗಿ ಗೌರವ ಸಮರ್ಪಣೆ ಮಾಡಲಾಯಿತು.

ಕೆಎಂಎಫ್ ನ ಅಧ್ಯಕ್ಷರಾದ ಶ್ರೀ ಭೀಮ ನಾಯ್ಕ್ ಅವರು ಪ್ರಾಸ್ತಾವಿಕ ಮಾತನಾಡುತ್ತಾ ಅಂಕಿ ಅಂಶಗಳೊಂದಿಗೆ ಕೆಎಂಎಫ್ ಹಾಗು ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟಗಳ ಹಾಲು ಉತ್ಪಾದನಾ ಸಾಮರ್ಥ್ಯ,ವಿತರಣಾ ಸಾಧನೆ ಹಾಗೂ ನವದೆಹಲಿಯಲ್ಲಿ ವಿವಿಧ ಶ್ರೇಣಿಯ ಹಾಲು ಬಿಡುಗಡೆಯಾಗುತ್ತಿರುವ



ಹಿನ್ನೆಲೆ ಹಾಗು ಉದ್ದೇಶಗಳ ಬಗ್ಗೆ ವಿವರ ನೀಡಿದರು ಮತ್ತು ಈ ಕಾರ್ಯಕ್ರಮಕ್ಕೆ ಆಗಮಿಸಿರುವ ಮಾನ್ಯ ಮುಖ್ಯಮಂತ್ರಿಗಳನ್ನು, ರಾಜ್ಯದ ಸಚಿವರು, ಸಂಸದರು, ಅತಿಥಿಗಣ್ಯರಿಗೆ ಕೃತಜ್ಞತೆ ವ್ಯಕ್ತಪಡಿಸಿದರು. ರಾಜ್ಯದ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳ ಕಾರ್ಯದರ್ಶಿಗಳಾದ ಡಾ. ಅಜಯ್ ನಾಗಭೂಷನ್ ಎಂ.ಎನ್. ಅವರು ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ವಿಶೇಷತೆ, ಗುಣಮಟ್ಟ, ಮಾಡುವ ವಿವಿಧ ಪರೀಕ್ಷೆಗಳು ಹಾಗು ಆಧುನಿಕ ವಿಧಾನದ ಸಂಸ್ಕರಣೆ, ಸಂಗ್ರಹಣೆ ಮತ್ತು ವಿಲೇವಾರಿ/ ವಿತರಣೆ ವ್ಯವಸ್ಥೆಗಳ ಬಗ್ಗೆ ಮಾಹಿತಿ ಹಂಚಿಕೊಂಡರು. ರಾಜ್ಯದ ಕೃಷಿ ಸಚಿವರಾದ ಶ್ರೀ ಎನ್. ಚಲುವರಾಯ ಸ್ವಾಮಿ ಹಾಗು ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರಾದ ಶ್ರೀ ಕೆ. ವೆಂಕಟೇಶ್ ಅವರು ಮಾತನಾಡಿ ನವದೆಹಲಿಯಲ್ಲಿ ನಂದಿನಿ ಹಾಲು ಬಿಡುಗಡೆಯಾಗಿ ಇಲ್ಲಿನ ಕನ್ನಡಿಗರಿಗೆ ದೊರೆಯುವಂತಾಗುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿ ಈ ಅಭಿಯಾನಕ್ಕೆ ಶುಭ ಹಾರೈಸಿದರು.

ನಂತರ 'ಶುಭಂ', 'ಸಂಪೂರ್ಣ', 'ಹಸು ಹಾಲು' ಮುಂತಾದ ವಿವಿಧ ಶ್ರೇಣಿಯ ನಂದಿನಿ ಹಾಲನ್ನು ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದರು. ದೆಹಲಿ ಕನ್ನಡತಿಯರಿಗೆ ವೇದಿಕೆ ಮೇಲೆ ವಿತರಿಸಿದರು. ಇಲ್ಲಿನ ಕನ್ನಡ ಮಹಿಳೆಯರು ಬಹಳ ಉತ್ಸಾಹದಿಂದ ಈ ನಂದಿನಿ ಹಾಲು ಬಿಡುಗಡೆ ಕ್ಷಣಗಳಿಗೆ ಸಾಕ್ಷಿಯಾದರು. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಾಲೆ ಹಾಗು ಸ್ಥಳೀಯ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು. ನಂತರ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ಮಾತನಾಡಿ ಇಂದಿನ ಕಾರ್ಯಕ್ರಮದ ಆಯೋಜಕರಿಗೆ ವೇದಿಕೆ ಮೇಲಿದ್ದ ಅತಿಥಿ ಗಣ್ಯರಿಗೆ ಹಾಗು ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ದೆಹಲಿ ಕನ್ನಡಿಗರು ಹಾಗು ಕನ್ನಡೇತರರಿಗೆ ಅಭಿನಂದನೆ ತಿಳಿಸಿದರು. ಕೆಎಂಎಫ್ ಮತ್ತು ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಅಧ್ಯಕ್ಷರಿಗೆ, ವ್ಯವಸ್ಥಾಪಕರ ನಿರ್ದೇಶಕರಿಗೆ, ಒಕ್ಕೂಟಗಳ ಸದಸ್ಯರು ಗಳಿಗೆ ಮೆಚ್ಚುಗೆ ಸೂಚಿಸುತ್ತಾ ನವದೆಹಲಿಯಲ್ಲಿ ನಂದಿನಿ ವಿವಿಧ ಶ್ರೇಣಿ ಹಾಲುಗಳನ್ನು ತಮ್ಮಿಂದ ಬಿಡುಗಡೆ ಮಾಡಿಸಿದ್ದಕ್ಕಾಗಿ ಸಂತಸ ವ್ಯಕ್ತಪಡಿಸಿ ದೆಹಲಿಯ ಜನತೆಗೆ ನಂದಿನಿ ಹಾಲು ವಿತರಣೆಯಾಗುತ್ತಿರುವುದನ್ನು ಶ್ಲಾಘಿಸುತ್ತಾ ಹಾಗು ಉತ್ತಮ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗಿಯಾದ ಎಲ್ಲರನ್ನು ಅಭಿನಂದಿಸಿದರು.

ದೆಹಲಿ ಎನ್‌ಸಿಆರ್ ಕನ್ನಡಿಗರು ಮುಖ್ಯಮಂತ್ರಿಗಳು ಹಾಗು ಸಚಿವರೊಂದಿಗೆ ಸೆಲ್ಫಿ ಪಡೆದುಕೊಂಡು ಖುಷಿ ಪಟ್ಟರು. ಬಿಡುಗಡೆ ಕಾರ್ಯಕ್ರಮದ ನಂತರ ಪಂಚತಾರಾ ಹೋಟೆಲಿನ ಶುಚಿ ರುಚಿಯಾದ ಭೋಜನ ಸವಿದು ಎಲ್ಲರೂ ಸಂಭ್ರಮಿಸಿದರು. ವಿವಿಧ ಶ್ರೇಣಿಯ ನಂದಿನಿ ಹಾಲು, ಮೊಸರು, ತುಪ್ಪ ಮತ್ತು ಇತರ ಹಾಲಿನ ಉತ್ಪನ್ನಗಳು ನವದೆಹಲಿಯಲ್ಲಿ ಬಿಡುಗಡೆಯಾದ ಸಂದರ್ಭ ಕೆಎಂಎಫ್‌ನ ಅಧ್ಯಕ್ಷರು, ಎಂ.ಡಿ. ಹಾಗು ಆಡಳಿತ ಮಂಡಳಿ ಸದಸ್ಯರು ಮತ್ತು ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಅಧ್ಯಕ್ಷರು, ಎಂ.ಡಿ. ಹಾಗೂ ಆಡಳಿತ ಮಂಡಳಿ ಸದಸ್ಯರುಗಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘವು ಹಾರ್ದಿಕ ಅಭಿನಂದನೆಗಳನ್ನು ತಿಳಿಸುತ್ತಾ ನಂದಿನಿ ಹಾಲು ಹಾಗೂ ಹಾಲಿನ ಉತ್ಪನ್ನಗಳು ದೆಹಲಿ ಕನ್ನಡಿಗರಿಗೆ ನಿರಂತರವಾಗಿ ದೊರಕಲಿ ಹಾಗು ಈ ಅಭಿಯಾನ ಯಶಸ್ವಿಯಾಗಲೆಂದು ಶುಭ ಹಾರೈಸುತ್ತದೆ.❑

ವಿಶೇಷ ವೈದ್ಯಕೀಯ ಲೇಖನ -16 ಆರೋಗ್ಯವೇ ಭಾಗ್ಯ

# ದೆಹಲಿಯಲ್ಲಿನ ವಾಯು ಮಾಲಿನ್ಯಕ್ಕೆ ಆಯುರ್ವೇದದ ಪರಿಹಾರ




ಲೇಖಕರು : ಡಾ. ಭೀಮ ಭಟ್ಟ,
ಪ್ರಸಿದ್ಧ ಆಯುರ್ವೇದ ತಜ್ಞರು
ಮೆಡಿಕಲ್ ಡೈರೆಕ್ಟರ್
ಮೇದಾಂತ ಮೆಡಿಸಿಟಿ ಆಯುರ್ ವೈದ್, ಗುರುಗ್ರಾಮ
ಮತ್ತು ಆಪೋಲೋ ಆಯುರ್ ವೈದ್, ನವದೆಹಲಿ
ಇಮೇಲ್ : bheemabhat@gmail.com
ಮೊ : 9810113902


ಈಗ ಕೆಲವು ದಿನಗಳಿಂದ ದೆಹಲಿಯಲ್ಲಿನ ವಾಯು ಮಾಲಿನ್ಯ ಜನರ ಆರೋಗ್ಯಕ್ಕೆ ಅತ್ಯಂತ ಹಾನಿಕರಕವಾಗಿದೆ. ಸಾಮಾನ್ಯವಾಗಿ ಚಳಿಗಾಲ ಪ್ರಾರಂಭವಾಗುವ ಸಮಯದಲ್ಲಿ ವಾಯು ಮಾಲಿನ್ಯ ಹೆಚ್ಚಾಗುತ್ತದೆ. Air Quality Index (AQI) 50 ಕ್ಕಿಂತ ಕಡಿಮೆ ಇದ್ದರೆ ಆರೋಗ್ಯಕ್ಕೆ ಉತ್ತಮ. ಆದರೆ ಈಗ ದೆಹಲಿಯಲ್ಲಿ 450 ಕ್ಕಿಂತ AQI ಹೆಚ್ಚಾಗಿದೆ. ಈ ವಾಯು ಮಾಲಿನ್ಯದಿಂದ ಆರೋಗ್ಯದ ಮೇಲೆ ಅನೇಕ ದುಷ್ಪರಿಣಾಮಗಳು ಬರಬಹುದು. ಮುಖ್ಯವಾಗಿ ಕೆಮ್ಮು, ನೆಗಡಿ, ಉಸಿರಾಡುವುದಕ್ಕೆ ತೊಂದರೆ, ಹೃದಯರೋಗ, ಚರ್ಮರೋಗ, ಅಲರ್ಜಿ, ಕ್ಯಾನ್ಸರ್, ರೋಗ ಪ್ರತಿಬಂಧಕ ಶಕ್ತಿ ಕ್ಷೀಣವಾಗುವುದು ಇತ್ಯಾದಿ ಅನೇಕ ರೋಗಗಳು ಬರಬಹುದು. ವಾಯು ಮಾಲಿನ್ಯ ಹೆಚ್ಚಾಗಿ ಮಕ್ಕಳ ಮತ್ತು ವೃದ್ಧರ ಮೇಲೆ ದುಷ್ಪರಿಣಾಮ ಮಾಡುತ್ತದೆ ಅಲ್ಲದೆ ಮನುಷ್ಯನ ಆಯುಸ್ಸನ್ನು 10–15 ವರ್ಷ ಕಡಿಮೆ ಮಾಡುತ್ತದೆ.

**ಮುಖ್ಯ ಕಾರಣಗಳು** : ವಾಹನಗಳಿಂದ ಬರುವ ಹೊಗೆ, ಕಾರ್ಖಾನೆಗಳಿಂದ ಬರುವ ಹೊಗೆ, ರೈತರು ಹುಲ್ಲು ಸುಡುವುದರಿಂದ ಬರುವ ಹೊಗೆ ಕಟ್ಟಡ ನಿರ್ಮಾಣ ಕಾರ್ಯಗಳಿಂದ ಬರುವ ಧೂಳಿನಿಂದಾಗುವ ಪ್ರದೂಷಣ ಇತ್ಯಾದಿಗಳು.

**ಪರಿಹಾರ ಕ್ರಮ** : ಆಯುರ್ವೇದದ ಪ್ರಕಾರ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಕೆಲವು ಪ್ರಮುಖ ಮಾರ್ಗಗಳನ್ನು ಅನುಸರಿಸಬಹುದು. ಆಯುರ್ವೇದ ಪ್ರಕೃತಿಯೊಂದಿಗೆ ಸಮ್ಮಿಲಿತವಾಗಿರುವ ಜೀವನ ಶೈಲಿಯು ಪರಿಸರವನ್ನು ಶುದ್ಧೀಕರಿಸಲು ಸಹಾಯಕವಾಗಿದೆ.

**1. ರೋಗ ಪ್ರತಿಬಂಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು.**

* ಚ್ಯವನ ಪ್ರಾಶ ಲೇಹ್ಯ 1 ಚಮಚ ಹಾಲಿನೊಡನೆ
* ಅರಿಶಿನ ಪುಡಿ 1/4 ಚಮಚ ಹಾಲಿನೊಡನೆ
* ಅಮೃತ ಬಳ್ಳಿ ರಸ ಅಥವಾ ಚೂರ್ಣ 1/2 –1 ಚಮಚ
* ತುಳಸಿ ರಸ 1 ಚಮಚ ಜೇನಿನೊಡನೆ
* ನೀಲಿಗಿರಿ ಎಣ್ಣೆ (Eucalyptus oil) 4–5 ಹನಿ ಬಿಸಿ ನೀರಿನ ಮೇಲೆ ಹಾಕಿ ಅದರ ಬಾಷ್ಪ (ಸ್ಟೀಮ್)ವನ್ನು ಇನ್‌ಹೇಲ್ ಮಾಡಬೇಕು.

2. ದೇಹದ ಶುದ್ಧೀಕರಣಕ್ಕೆ (Detox the Body) ತ್ರಿಫಲಾ, ಬೇವು, ಅರಿಶಿನ, ಅಶ್ವಗಂಧ, ಔಷಧಗಳನ್ನು 1/4–1/2 ಚಮಚ ನೀರಿನೊಡನೆ ತೆಗೆದುಕೊಂಡರೆ ದೇಹದಲ್ಲಿರುವ ಕಲ್ಮಶ (Toxin)ಗಳು ಹೊರ ಬರುತ್ತದೆ.

3. ಶ್ವಾಸಕೋಶದ ಆರೋಗ್ಯಕ್ಕೆ ಕೆಮ್ಮು, ನೆಗಡಿಗೆ–ತುಳಸಿ ರಸ ಒಂದು ಚಮಚೆ ಜೇನುತುಪ್ಪ (Honey) ಜೊತೆಗೆ ದಿನಕ್ಕೆ ಎರಡು ಬಾರಿ ಜೇಷ್ಠ ಮಧು 1/2–1 ಚಮಚ ಮತ್ತು ಅರಿಶಿನ 1/4 ಚಮಚೆ ಸೇರಿಸಿ ಜೇನಿನೊಡನೆ ಸೇವಿಸಬೇಕು.

4. ನೆಗಡಿಗೆ : ನೀಲಿಗಿರಿ ಎಣ್ಣೆ (Eucalyptus oil) Steam 3–5 ನಿಮಿಷ ತೆಗೆದುಕೊಂಡ ನಂತರ 2–4 ಹನಿ (Drops) ಅಣು ತೈಲ ಮೂಗಿಗೆ ಹಾಕಬೇಕು. (Nasma)

5. ಔಷಧೀಯ ಚಹ (Harbal Tea) ಶುಂಠಿ, ತುಳಸಿ, ಅರಿಶಿನ, ಜೇಷ್ಠ ಮಧು ಸೇರಿಸಿ ನೀರಿನೊಂದಿಗೆ ಕುದಿಸಿದ ಚಹವನ್ನು ದಿನಕ್ಕೆ 2 ಸರಿ ದಾಲಚೀನಿ 1/2 ಚಮಚ, 1/2 ಲೋಟ ಬಿಸಿ ನೀರು ಮತ್ತು ಜೇನು (Nasma) ಸೇರಿಸಿದ ಚಹ.

6. ಆಹಾರ–ಹಿತಮಿತವಾದ ಆಹಾರ, ಹಣ್ಣು, ತರಕಾರಿ ಸೇವಿಸಬೇಕು. ಬೆಚ್ಚಗಿನ ನೀರನ್ನು ಕುಡಿಯಬೇಕು.

7. ಸಾಂಬ್ರಾಣಿ ಧೂಪ ಹಾಕಬೇಕು

8. ಮಾಸ್ಕ್, ವಾಯು ಶುದ್ಧಿ ಮಾಡುವ ಉಪಕರಣ (Air Purifier) ಉಪಯೋಗಿಸಬೇಕು.

ಈ ಮೇಲೆ ವಿವರಿಸಿದ ಆಯುರ್ವೇದದ ಉಪಾಯವನ್ನು ಅಳವಡಿಸಿದರೆ ದೆಹಲಿಯಲ್ಲಿನ ವಾಯು ಮಾಲಿನ್ಯದಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಡೆಗಟ್ಟಬಹುದು.❑



# ಶ್ರೀ ಹೆಬ್ರಿ ಚಂದ್ರಕಾಂತ ಮಲ್ಯ



ಶ್ರೀ ಹೆಬ್ರಿ ಚಂದ್ರಕಾಂತ ಮಲ್ಯ

ರಿಸರ್ವ್ ಬ್ಯಾಂಕಿನಲ್ಲಿ ಉದ್ಯೋಗ. ನಂತರ ಸಿಂಡಿಕೇಟ್ ಬ್ಯಾಂಕ್‌ನ ಮ್ಯಾನೇಜರ್ ಆಗಿದ್ದು ಕೈ ತುಂಬಾ ಸಂಬಳ ಬರುತ್ತಿದ್ದರೂ ಅಂತಹ ಉದ್ಯೋಗದಿಂದ ಅವಧಿಗೂ ಮೊದಲೇ ನಿವೃತ್ತಿ ಏಕೆ ಹೊಂದಿದಿರಿ ಎಂಬ ಪ್ರಶ್ನೆಗೆ ಬಹಳ ಶಾಂತ ಚಿತ್ತದಿಂದಲೇ ನೀಡಿದ ಉತ್ತರ: "ಮರ್ಯಾದೆಯಿಂದ ಜೀವನ ಸಾಗಿಸುವುದಕ್ಕೆ ರಾತ್ರಿ ಹಗಲು ಒದ್ದಾಟ ಮಾಡಿಕೊಂಡು, ಟೆನ್ಷನ್ ತಗೊಂಡು ಕೆಲಸ ಮಾಡಬೇಕಾಗಿಲ್ಲ. ನಮ್ಮ ನೀಡ್‌ಗಳನ್ನು ಪೂರೈಸಲು ಹಿತಮಿತವಾದ ಕೆಲಸ ಸಾಕು. ಗ್ರೀಡ್‌ಗಳನ್ನು ಪೂರೈಸಲು ಎಷ್ಟು ದುಡಿದರೂ ಸಾಲದು" ಎಂದು ಬಹಳ ನಿಧಾನವಾಗಿ, ಮೆಲುದನಿಯ ಮೂಲಕವೇ ನನ್ನ ಗಮನ ಸೆಳೆದು ಆಕರ್ಷಿಸಿದ ವ್ಯಕ್ತಿ ಹೆಬ್ರಿ ಚಂದ್ರಕಾಂತ ಮಲ್ಯರವರು. 1989ರಲ್ಲಿ ದೆಹಲಿಯ ಪಶ್ಚಿಮವಿಹಾರದ ಸಹೃದಯ ಅಪಾರ್ಟ್‌ಮೆಂಟ್‌ನಲ್ಲಿ ಹೊಸದಾಗಿ ಪರಿಚಯವಾಗಿದ್ದ ಮಲ್ಯರು ಹೇಳಿದ ಮಾತು ನನಗೀಗಲೂ ಕೂಡ ನನ್ನ ಬದುಕಿನ ತುಂಬಾ ರೂಲ್ ಆಗಿದೆ. ಆಫೀಸಿನ ಕೆಲಸವೇ ಬದುಕಿನ ಸಾಧನೆಯೇನೋ ಎಂಬ ರೀತಿಯಲ್ಲಿ ಹಗಲು ರಾತ್ರಿ ದುಡಿಯುತ್ತಿದ್ದ ದಿನಗಳವು. ಕೆಲಸ ಕೆಲಸ ಕೆಲಸ.

ನಮ್ಮ ಆಫೀಸಿನ ಸಹೋದ್ಯೋಗಿಗಳೆಲ್ಲ ಸೇರಿ ನಿರ್ಮಿಸಿದ್ದ ಸಹೃದಯ ಅಪಾರ್ಟ್‌ಮೆಂಟ್ ಎಂಬ ಚಿಕ್ಕ ಸೊಸೈಟಿಯ ಮೊದಲ ಅಂತಸ್ತಿನಲ್ಲಿ ನಮ್ಮ ಮನೆ. ನನ್ನ 4 ವರ್ಷದ ಮಗಳನ್ನು ಕರೆದುಕೊಂಡು ನಾವು ಮನೆಯಿಂದ ಹೊರ ಬಂದು ಕೆಳಗಿಳಿದಾಗ, ಗ್ರೌಂಡ್ ಫ್ಲೋರಿನ ಮಲ್ಯರವರು ನಮ್ಮ ಮಾತುಗಳನ್ನು ಕೇಳಿಸಿಕೊಂಡು ಹೊರಬಂದು ತಮ್ಮ ಪರಿಚಯ ಮಾಡಿಕೊಂಡರು.

ಪರಿಚಯ ಸ್ನೇಹವಾಗಿ ಬೆಳೆಯಿತು. ಸಮಯ ಸಿಕ್ಕಾಗಲೆಲ್ಲ ಮಲ್ಯರ ಮನೆಯಲ್ಲಿ ಕುಳಿತು ಮಾತನಾಡುವುದು ಚಹಾ ಕುಡಿಯುವುದು ಸರ್ವೇ ಸಾಮಾನ್ಯವಾಗಿತ್ತು. ಸಿಂಡಿಕೇಟ್ ಬ್ಯಾಂಕ್ ಸೇರಿ ಅನೇಕ ಊರುಗಳನ್ನು ನೋಡಿ, ಅಪಾರ ಜನಸಂಪರ್ಕವನ್ನು ಹೊಂದಿದ್ದ ಮಲ್ಯರಿಗೆ ಜನರ ಬದುಕಿನ ಅನೇಕ ಮಜಲುಗಳು ಚಿರಪರಿಚಿತವಾಗಿದ್ದವು. ಬಡ ಮುದುಕಿಯೊಬ್ಬಳ ಜೀವನದ ಕಥೆ 'ತಂದ ಅಕ್ಕಿ ತೀರಿತು' ಅವರ ಲೇಖನಿಯಿಂದ ಪುಸ್ತಕವಾಗಿ ಹೊರಬಿದ್ದಿತ್ತು. ಕರ್ನಾಟಕದ ಪತ್ರಿಕೆಗಳಲ್ಲಿ ಅವರ ಹಲವಾರು ಲೇಖನಗಳು, ಅವರೊಂದಿಗಿನ ಚರ್ಚೆಗಳು ಮತ್ತೆ ನನ್ನನ್ನು ಕನ್ನಡ ಲೋಕಕ್ಕೆ ಕರೆದೊಯ್ಯುತ್ತಿತ್ತು. ಬ್ಯಾಂಕಿನ ಜಂಜಾಟಗಳು ಒತ್ತಡಗಳನ್ನು ನೋಡಿದ ಮಲ್ಯರವರ ಬದುಕಿನ ಅನುಭವದ ಮಾತು ನನಗೆ ಬಹಳ ಹಿತವೆನಿಸಿತು. ಆ ದಿನಗಳಲ್ಲಿ ಕಂಚು, ಹಿತ್ತಾಳೆಯ ಚಿಕ್ಕ ಮೂರ್ತಿಗಳು, ಗಿಫ್ಟ್ ಐಟಮ್‌ಗಳ ತಯಾರಿಕೆ-ಪೂರೈಕೆಯ ಚಿಕ್ಕ ವ್ಯವಹಾರವನ್ನು ಮಾಡುತ್ತಿದ್ದರು. ಅಂದರೆ, ತಿಂಗಳಲ್ಲಿ ನಾಲ್ಕಾರು ದಿನ ಕೆಲಸವಷ್ಟೇ ಅವರ ಕೆಲಸ. ನೆಮ್ಮದಿಯ ಜೀವನ ನಡೆಸುತ್ತಾ ಬಂದಿದ್ದ ಚಂದ್ರಕಾಂತ ಮಲ್ಯರು ಕನ್ನಡ, ತುಳು, ಕೊಂಕಣಿ, ಮರಾಠಿ, ಇಂಗ್ಲಿಷ್ ಹಿಂದಿ ಹೀಗೆ ಹಲವು ಭಾಷೆಗಳಲ್ಲಿ ಒಳ್ಳೆಯ ಹಿಡಿತ ಸಾಧಿಸಿದವರು. ಉದ್ಯೋಗವೇ ಬದುಕು; ಬದುಕೇ ಉದ್ಯೋಗವೆಂದು ಎಣಿಸಿದ್ದ ನನಗೆ ಉದ್ಯೋಗವೆಂಬುದು ಬದುಕಿಗಾಗಿ ಮಾತ್ರ ಎಂಬುದನ್ನು ಮನದಟ್ಟು ಮಾಡಿದ್ದು ಹೆಬ್ರಿ ಚಂದ್ರಕಾಂತ ಮಲ್ಯರು. ಹರಟೆ ಹೊಡೆಯುತ್ತಾ ನನ್ನಲ್ಲೊಬ್ಬ ಕಲಾವಿದನಿದ್ದಾನೆ ಎಂಬುದನ್ನು ಗುರುತಿಸಿದ್ದರು. ನಾಟಕಗಳ ಕುರಿತಾದ ಅನುಭವ, ಸಾಹಿತ್ಯವನ್ನು ನೋಡುವ ಬಗೆ, ಸಮಾಜ ಮತ್ತು ಸಾಹಿತ್ಯಕ್ಕೆ ಇರುವ ಸಂಬಂಧ-ಹೀಗೆ ಹಲವು ಹತ್ತು ವಿಷಯಗಳು ಅವರಿಂದ ಪುಂಖಾನುಪುಂಖವಾಗಿ ಹೊರಬರುತ್ತಿದ್ದವು. ಸಾಹಿತ್ಯ ಕಾರ್ಯಾಗಾರದ ಲಾಭಗಳು ನನಗೆ ಅವರಿಂದ ದೊರೆತಿದ್ದು ಸತ್ಯ.

ಪಶ್ಚಿಮ ವಿಹಾರದಲ್ಲಿ ಕನ್ನಡ ಕುಸುಮ ಎಂಬ ಸಂಸ್ಥೆಯೊಂದು ಆಗಲೇ ಹುಟ್ಟಿಕೊಂಡಿತ್ತು. ಕೇವಲ ಹಬ್ಬ ಹರಿ ದಿನಗಳಿಗಷ್ಟೇ ಕನ್ನಡದ ಸಂಸ್ಥೆ ಸೀಮಿತವಾಗಿದ್ದರೆ ಸಾಲದು; ಸಾಂಸ್ಕೃತಿಕ ಚಟುವಟಿಕೆಗಳು ಅದರಲ್ಲಿ ನಡೆಯಬೇಕು ಎಂಬ ಎಂಬ ನನ್ನ ವಾದಕ್ಕೆ ಮಲ್ಯರವರು ದನಿಗೂಡಿಸಿದ್ದು ಮಾತ್ರವಲ್ಲ, ನಮಗಾಗಿ 'ರಫ್ತು' ಎಂಬ ಒಂದು ಚಿಕ್ಕ ನಾಟಕವನ್ನು ಬರೆದುಕೊಟ್ಟರು. ಅದನ್ನು ಪ್ರದರ್ಶಿಸುವುದು ನಮಗೆ ಸುಲಭವಾಗಿತ್ತು. ಏಕೆಂದರೆ, ನಾಟಕಗಳಲ್ಲಿ ಆಸಕ್ತಿ ಉಳ್ಳವರು ಅಲ್ಲಿ ಎಷ್ಟು ಮಂದಿ ಇದ್ದಾರೆ ಎಂದು ನೋಡಿ ಎಂಟು ಮಂದಿ ಕಲಾವಿದರಿಗೆ ಅನುಕೂಲವಾಗುವಂತಹ ಒಂದು ಒಳ್ಳೆಯ ನಾಟಕವನ್ನು ಬರೆದುಕೊಟ್ಟರು. ಪಶ್ಚಿಮ ವಿಹಾರದಲ್ಲಿ ಕನ್ನಡ ಕುಸುಮದ ಅಧ್ಯಕ್ಷರಾಗಿದ್ದ ಶ್ರೀ ಎಂ.ಎ. ರಾವ್ ಅವರ ಮನೆಯ ತಾರಸಿಯಲ್ಲಿ ಆ ನಾಟಕದ ಪ್ರದರ್ಶನವಾಯಿತು. ವಿಶೇಷ ಬೆಳಕು ಸಂಗೀತ. ರಂಗ ಪರಿಕರಗಳಿಲ್ಲದಿದ್ದರೂ, ನಾಟಕದ ಯಶಸ್ವಿಗೆ ಮಲ್ಯರ ಬರವಣಿಗೆಯೇ ಮೂಲ ಶಕ್ತಿ ಎಂಬುದನ್ನು ಒಪ್ಪಿಕೊಳ್ಳಲು ನನಗೆ ಯಾವ ಸಂಕೋಚವೂ ಇಲ್ಲ.

ಅನಂತರ ಆ ನಾಟಕವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಪ್ರದರ್ಶಿಸಲು ನಮಗೆ ಅವಕಾಶ ಸಿಕ್ಕಿತು ಎಂಬುದು ಇಂದು ಇತಿಹಾಸ. ಆ ಸಮಯದಲ್ಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಎನ್.ಪಿ. ಭಟ್ಟರವರು ಸ್ಥಳೀಯ ಕನ್ನಡಿಗರಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ತವಕ ಹೊಂದಿದ್ದರು. ಸ್ಥಳೀಯ ಕನ್ನಡಿಗರು ತಿಂಗಳಿಗೆ ಒಂದು ನಾಟಕವನ್ನು ತಂದು ಪ್ರದರ್ಶಿಸಲು ಅವಕಾಶ ಮಾಡಿಕೊಡಲಾಗುವುದು ಎಂದು ಅನೇಕ ಕಡೆ ಹೇಳಿದ್ದರು. ಅಂತಹ ನಾಟಕವನ್ನು ಪ್ರದರ್ಶಿಸಿದವರಿಗೆ ಒಂದು ಸಾವಿರ ರೂಪಾಯಿಗಳ ಸಹಾಯಧನವನ್ನು ನೀಡುವುದಾಗಿ ಘೋಷಿಸಿದ್ದರು. ದೆಹಲಿ ಕರ್ನಾಟಕ ಸಂಘದಲ್ಲಿ ಪ್ರದರ್ಶಿಸಲಾದ ರಫ್ತು ನಾಟಕದ ಯಶಸ್ಸನ್ನು ಕಂಡ ಮಲ್ಯರವರು 'ನವರಸ' ಎಂಬ ಇನ್ನೊಂದು ನಾಟಕವನ್ನು ಬರೆದರು. ಬ್ಯಾಂಕ್ ಮ್ಯಾನೇಜರ್ ಒಬ್ಬ ತನ್ನ ಬ್ಯಾಂಕ್ ಕೆಲಸದ ಸಂದರ್ಭದಲ್ಲಿ ಬರುವಂತಹ ಬೇರೆ ಬೇರೆ ಗ್ರಾಹಕರ ಮನಸ್ಥಿತಿ, ಅವರ ಜೊತೆ ಕಾರ್ಯನಿರ್ವಹಿಸುವಾಗ ಆ ಬ್ಯಾಂಕ್ ಮ್ಯಾನೇಜರ್‌ನ ಮನಃಸ್ಥಿತಿ; ಕೆಲವೊಮ್ಮೆ ಮಾಡಬೇಕಾದ ನಾಟಕಗಳು; ಇವೆಲ್ಲವನ್ನೂ ಸಮ್ಮಿಳಿಸಿ ಶೃಂಗಾರ-ವೀರ-ಕರುಣ-ಅದ್ಭುತ ಶಾಂತ-ಹಾಸ್ಯ-ಭಯಾನಕ-ಭೀಭತ್ಸ-ರೌದ್ರ-ಹೀಗೆ ಒಂದೊಂದು ರಸಗಳಿಗೆ ಒಂದೊಂದು ದೃಶ್ಯವನ್ನು ಸೃಜಿಸಿ ಬರೆದ ನಾಟಕವದು. ನವರಸದ ಮುಖ್ಯಪಾತ್ರ ನನಗೊಂದು ಸವಾಲಾಗಿತ್ತು. ನನ್ನನ್ನು ಮೊದಲ ಬಾರಿಗೆ ದೆಹಲಿಯ ಕನ್ನಡಿಗರು ಸ್ಥಳೀಯ ಪ್ರತಿಭೆ ಎಂದು ಗುರುತಿಸುವಲ್ಲಿಂದ, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡುವುದಕ್ಕೆ ಅದು ಭದ್ರ ಬುನಾದಿಯೂ ಆಯಿತು. ದೆಹಲಿಯ ಗೋಕರ್ಣ ಮಂಡಲದ ಶಾರದಾ ಪೂಜೆ ಅಥವಾ ಪಿಕ್‌ನಿಕ್ ಮುಂತಾದ ಕಾರ್ಯಕ್ರಮಗಳಲ್ಲಿ ಕೆಲವರು ತಮ್ಮ ಪ್ರತಿಭೆಗಳನ್ನು ತೋರುತ್ತಿದ್ದರು. ಆ ದಿನಗಳಲ್ಲಿ ಮಲ್ಯರವರು ನನಗಾಗಿ ಒಂದು ಚಿಕ್ಕ ಲೇಖನವನ್ನು ಬರೆದು, ಅದನ್ನು ಹೇಗೆ ಓದಿದರೆ ಜನರನ್ನು ಆಕರ್ಷಿಸಬಹುದು, ಹಾಗೂ ಅದುವೇ ಒಂದು ಪ್ರಹಸನದಂತೆ ರಂಜಿಸುತ್ತದೆ ಎಂಬುದನ್ನು ಕಲಿಸಿದ್ದರು. ಮರಾಠಿ ನಾಟಕಗಳಲ್ಲಿ ಪು.ಲ. ದೇಶಪಾಂಡೆಯವರ ನಾಟಕಗಳಿಂದ ಬಹಳ ಪ್ರಭಾವಿತರಾದ ಮಲ್ಯರವರು, ಮಂಗಳೂರು ಕನ್ನಡದ ತಿಳಿ ಹಾಸ್ಯ ಮಿಶ್ರಿತ ಲೇಖನಕ್ಕೆ, ಸೂಕ್ತ ಸ್ವರ ಭಾರ ಮತ್ತು ಶೈಲಿಯ ಸೇರ್ಪಡೆಯೊಂದಿಗೆ ಸೃಜನಶೀಲ ಸದಭಿರುಚಿಯ ಸಾಹಿತ್ಯ ನಿರ್ಮಾಣ ಹೇಗಾಗುತ್ತದೆ ಎಂಬುದನ್ನು ಉದಾಹರಣೆ ಸಮೇತ ತಿಳಿಸುತ್ತಾ ಇದ್ದರು. ಬೇಂದ್ರೆಯವರ ಸಾಯೋ ಆಟ ಮುಂತಾದ ಸಾರ್ವಕಾಲಿಕ ಪ್ರಸಿದ್ಧವಾಗುವಂತಹ ನಾಟಕಗಳ ಪರಿಚಯ ಮಾಡಿಕೊಟ್ಟದ್ದು ಮಲ್ಯರವರೇ.

ಮಲ್ಯರವರ ಬರವಣಿಗೆ ಕನ್ನಡಕ್ಕಷ್ಟೇ ಸೀಮಿತವಲ್ಲ. ತಿಹಾರ ಜೈಲಿನ ಕೈದಿಗಳ ಸುಧಾರಣೆ ಕುರಿತಂತೆ 'ರಿಫಾರ್ಮ್‌ಡ್ ಟರ್ನ್ ರಿಫಾರ್ಮರ್ಸ್', ಪಂಜಾಬಿನಲ್ಲಿ ಡ್ರಗ್ ಎಡಿಕ್ಟ್‌ಗಳ ಹಾಗೂ ನಶಾ ನಿರ್ಮೂಲನೆ ಕುರಿತಂತೆ "ಫೇರ್‌ವೆಲ್ ಟು ಡ್ರಗ್ಸ್ ಫಾರ್ ಎವರ್" ಸೇರಿದಂತೆ ಹಲವಾರು ಬರಹಗಳು ಸಾಮಾಜಿಕ ಚಿಂತನೆಗೆ ಜನರನ್ನು ಒಡ್ಡಿಕೊಳ್ಳುವಂತೆ ಮಾಡಿವೆ. 'ಜಿಂದಾಬಾದ್' ಎಂಬ ಕಥೆ ಎಚ್‌ಎಂಟಿ ಅವಾರ್ಡ್ ತಂದುಕೊಟ್ಟಿದೆ.

ದೆಹಲಿಯಲ್ಲಿರುವ ಕನ್ನಡದ ಅಮೂಲ್ಯ ಸಂಪನ್ಮೂಲ ವ್ಯಕ್ತಿ ಹೆಬ್ರಿ ಚಂದ್ರಕಾಂತ ಮಲ್ಯರವರು ಶತಾಯುಷಿಗಳಾಗಲು ಹದಿನಾಲ್ಕೇ ವರ್ಷ ಬಾಕಿ. 1970ರಿಂದ ದೆಹಲಿಯಲ್ಲಿ ವಾಸವಾಗಿದ್ದ ಮಲ್ಯರವರು, ಕನ್ನಡದ ಚಟುವಟಿಕೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳದಿದ್ದರೂ, ಅನೇಕ ಹೋರಾಟಗಳಲ್ಲಿ ಬೆಂಗಾವಲಾದವರು. ಸಂಘದ ಏಕಾಂಕ ನಾಟಕ ಸ್ಪರ್ಧೆಯಲ್ಲಿ ತೀರ್ಪುಗಾರರಾಗಿ ಬಂದಿದ್ದರು. ಅನೇಕ ಸಾಹಿತ್ಯಿಕ, ಕಾರ್ಯಕ್ರಮಗಳಲ್ಲಿ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ ವಿಶಿಷ್ಟ ಕನ್ನಡಿಗ ಹೆಬ್ರಿ ಚಂದ್ರಕಾಂತ ಮಲ್ಯ.

ಮಗ ಅಂಶುಮನ್ ಇಂಜಿನಿಯರಿಂಗ್ ಮಾಡಿ ಅಮೆರಿಕದಲ್ಲಿ ವಾಸವಾಗಿದ್ದಾನೆ. ಚಿಕ್ಕ ಮಗ ಅಪ್ರತಿಮ ಸಂಗೀತ ಪ್ರಿಯನಾಗಿದ್ದುದರಿಂದ ತನ್ನದೇ ಬ್ಯಾಂಡ್ ರಚಿಸಿ, ಭಾರತ, ಸಿಂಗಾಪೂರ್, ಮಲೇಶಿಯಾ, ದುಬೈ ಮುಂತಾದೆಡೆ ಕಾರ್ಯಕ್ರಮಗಳನ್ನು ನೀಡಿದ ಬೇಡಿಕೆಯ ಕಲಾವಿದ. ಮೂಲತಃ ಮೀರತ್‌ನವರಾದ ಅವರ ಪತ್ನಿ ಶ್ರೀಮತಿ ಸುಷ್ಮಾ ಮಲ್ಯರವರು, ಗಂಡನ ಸಾಹಿತ್ಯಕ್ಕೆ ಪ್ರೇರಕಶಕ್ತಿ. ನಮ್ಮ ಸಂಘದ ಆಜೀವ ಸದಸ್ಯೆ ಕೂಡ.

ಇಳಿ ವಯಸ್ಸಿನಲ್ಲೂ 'ಡೆಲ್ಲಿ ದಿವ್ಯಜ್ಯೋತಿ ಜಾಗೃತಿ ಸಂಸ್ಥಾನದ' ಉಪಾಧ್ಯಕ್ಷರಾಗಿರುವ ಹೆಬ್ರಿ ಚಂದ್ರ ಕಾಂತ ಮಲ್ಯರವರ ಜೊತೆ ಮಾತನಾಡುವುದೇ ಅತ್ಯಂತ ಖುಷಿ ಕೊಡುವ ವಿಚಾರ. ನಮ್ಮ ಓಡಾಟದ ಬದುಕಿನ ನಡುವೆಯೂ ಕೆಲಸಮಯದ ತನಕ ನಮ್ಮನ್ನು ದೂರ ಕೊಂಡೊಯ್ಯಬಲ್ಲ ಮಲ್ಯರಂತಹ ವಿಶಿಷ್ಟ ವ್ಯಕ್ತಿಗಳು ಮರುಭೂಮಿಯಲ್ಲಿ ನಮಗೆ ಸಿಗುವ 'ಓಯೆಸಿಸ್' ಎಂದರೆ ಉತ್ಪ್ರೇಕ್ಷೆ ಆಗಲಾರದು. ❑



**ಸರವು ಕೃಷ್ಣ ಭಟ್**

# ಪ್ರಾದೇಶಿಕ ಭಾಷಾ ಬಲದಿಂದ ದೇಶಕ್ಕೆ ಬಲ-ಡಾ. ಬಿಳಿಮಲೆ




ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಕ್ಕಾಗಿ ದುಡಿದ ಡಾ. ಪುರುಷೋತ್ತಮ ಬಿಳಿಮಲೆಯವರು ರಾಜ್ಯದ ರಾಜಧಾನಿಗೆ ಬಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಚುಕ್ಕಾಣಿ ಹಿಡಿದ ಹಿನ್ನೆಲೆಯಲ್ಲಿ ಅಭಿನಂದನೆಯ ಸ್ವರೂಪದಲ್ಲಿ ದೆಹಲಿಯ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರ ನೇತೃತ್ವದ ನಿನಾದ ಸಂಸ್ಥೆಯ ವತಿಯಿಂದ ಇತ್ತೀಚೆಗೆ ಹೊರತರಲಾದ ಸಂಶೋಧನಾ ಗ್ರಂಥ 'ಹುಡುಕಾಟ'. ಚಿರಂತ್ ಪ್ರಕಾಶನದ ಈ ಕೃತಿಯ ಬಿಡುಗಡೆ ಬೆಂಗಳೂರಿನಲ್ಲಿ ಬಹಳ ಅರ್ಥಪೂರ್ಣವಾಗಿ ನೆರವೇರಿತು. ಶ್ರೀ ವಸಂತ ಶೆಟ್ಟಿಯವರ ಪ್ರಾಸ್ತಾವಿಕ ಭಾಷಣ, ಬಿಡುಗಡೆ ಮಾಡಿದ ಹಂಪಾನಾ ಅವರ ಮಾತುಗಳು, ಸಾಂದರ್ಭಿಕವಾಗಿ ಮಾತನಾಡಿದ ಶ್ರೀವೀರಪ್ಪ ಮೊಯಿಲಿಯವರ ಮಾತುಗಳು, ಚ.ಹ ರಘುನಾಥರವರಿಂದ ಪುಸ್ತಕ ಕುರಿತಾದ ಸಮಗ್ರ ಪರಿಚಯ-ವಿಮರ್ಶೆ ಎಲ್ಲವೂ ಒಂದು ಅರ್ಥಪೂರ್ಣ ಸಾಹಿತ್ಯ ಸಂಜೆಯನ್ನು ನಮ್ಮದಾಗಿಸಿದ್ದವು.

ಸುಮಾರು ನಲುವತ್ತು ವರ್ಷಗಳಿಂದ ಅವರು ಬರೆಯುತ್ತಿದ್ದ ಅವರ ಅನೇಕ ಲೇಖನಗಳು ಸಂಘಟನೆ, ಹೋರಾಟ ಕುರಿತಾಗಿತ್ತು. ಇಪ್ಪತ್ತೊಂದನೆ ಶತಮಾನಕ್ಕೆ ಬರುವಾಗ ಆ ಲೇಖನಗಳ ಒಳನೋಟಗಳು ಹೇಗಿದ್ದರೆ ಚಂದ ಎಂಬ ಹಿನ್ನೆಯಲ್ಲಿ ಆ ಲೇಖನಗಳನ್ನು ಮತ್ತೆ ಪರಿಷ್ಕರಿಸಿದ್ದು, ಅದನ್ನು ಬಿಡುಗಡೆ ಮಾಡಿದ ಗುರು ಹಂಪನಾ ಅವರಿಗೆ ನಮನಗಳನ್ನು ಸಲ್ಲಿಸುತ್ತ ತಮ್ಮ ಮಾತುಗಳನ್ನು ಪ್ರಾರಂಭಿಸಿದ ಡಾ. ಬಿಳಿಮಲೆಯವರು, ತಮ್ಮ ಬದುಕಿನ ಹಲವು ಹಂತಗಳಲ್ಲಿ ಸಹಾಯ ಮಾಡಿದ ಶ್ರೀ ವೀರಪ್ಪ ಮೊಯಿಲಿಯವರನ್ನು ಶ್ಲಾಘಿಸುತ್ತಲೇ ತಮ್ಮ ಮಾತನ್ನು ಪ್ರಾರಂಭಿಸಿದರು.'

"ನಾವು ಇಡೀ ಕನ್ನಡ ಸಂಶೋಧನೆಯನ್ನು ಇವತ್ತಿನ ಕಾಲದ ಅಗತ್ಯಕ್ಕೆ ಅನುಗುಣವಾಗಿ ಪುನರ್ ರೂಪಿಸದೇ ಹೋದರೆ, ಕನ್ನಡ ಸಂಶೋಧನೆಗೆ ಯಾವುದೇ ಭವಿಷ್ಯ ಇಲ್ಲ. ಕನ್ನಡಕ್ಕೆ ಒಂದು ಬಹಳ ಉತ್ತಮ ಸಂಶೋಧನಾ ಪರಂಪರೆಯಿದೆ. ಗೋವಿಂದ ಪೈಯವರು, ಮುಳಿಯ ತಿಮ್ಮಪ್ಪಯ್ಯನವರು, ಡಿ.ಎಲ್. ನರಸಿಂಹಾಚಾರ್ಯರು, ಆರ್ ನರಸಿಂಹಾಚಾರ್ಯರು, ಪಿ.ಬಿ. ದೇಸಾಯಿಯವರು-ಹೀಗೆ ಒಂದು ದೊಡ್ಡ ಪರಂಪರೆಯಿದೆ. ಅದಕ್ಕೂ ಹಿಂದೆ ಹೋದರೆ ಮೆಕೆನಿಯಲ್, ಕಿಟ್ಟಲ್ ಮುಂತಾದವರ ಪರಂಪರೆ 1960-70ರ ತನಕ ತುಂಬಾ ಚೆನ್ನಾಗಿ ಬಂತು. ಅತ್ಯುತ್ತಮ ಸಂಶೋಧನೆಯ ಕೊನೆಯ ತಲೆಮಾರು ಎಂದರೆ ಎಂ.ಎಂ. ಕಲಬುರ್ಗಿ, ಚಿದಾನಂದ ಮೂರ್ತಿ, ಶೆಟ್ಟರ್, ರಾಮಮೂರ್ತಿ, ರಹಮತ್ ತರಿಕೆರೆ ಅವರು. 1990ರ ನಂತರ ಜಾಗತೀಕರಣದ ಪರಿಣಾಮವಾಗಿ ಭಾಷೆ ಎದುರಿಸುತ್ತಿರುವಂತಹ ಅನೇಕ ಬಿಕ್ಕಟ್ಟುಗಳ ಸಂದರ್ಭದಲ್ಲಿ ನಮಗೆ ಅಂತರರಾಷ್ಟ್ರೀಯ ಜ್ಞಾನ ದೊರಕಿದರೂ ಕೂಡ ಆದರ ಹಿನ್ನೆಲೆಯಲ್ಲಿ ನಮ್ಮ ಸಂಶೋಧನೆಯನ್ನಾಗಲೀ ಭಾಷೆಯನ್ನಾಗಲೀ ಹೊಸದುಗೊಳಿಸಲು ಸಾಧ್ಯವಾಗಲಿಲ್ಲ' ಎಂದು ಕೊರಗಿದರು.

ಕನ್ನಡ ಶಾಲೆಗೆ ಸೇರುತ್ತಿರುವ ಮಕ್ಕಳ ಸಂಖ್ಯೆಯ ಕುಸಿತ, ಮುಚ್ಚಿಹೋಗುತ್ತಿರುವ ಕನ್ನಡ ಶಾಲೆಗಳ ಅಂಕಿ ಅಂಶಗಳ ಕುರಿತು ಆತಂಕ ವ್ಯಕ್ತ ಪಡಿಸಿದ ಬಿಳಿಮಲೆಯವರು, ಎಲ್ಲಾ ತಾಯಂದಿರೂ ತಮ್ಮ ಮಕ್ಕಳು ಇಂಗ್ಲಿಷ್ ಕಲಿಯಬೇಕೆಂದು ಬಯಸುವ ದಿನಗಳಲ್ಲಿ 'ತಾಯಿನುಡಿ' ಎಂಬ ಪದವೇ ಕಾಣೆಯಾಗತೊಡಗಿದೆ ಎಂದರು. 2011ರ ಜನಗಣತಿಯಂತೆ ಭಾರತದಲ್ಲಿ 19569 ತಾಯ್ನುಡಿಗಳಿವೆ. ಇಡೀ ದೇಶದ ಭಾಷಾ ಬಹುತ್ವದಲ್ಲೇ ದೇಶದ ಶ್ರೇಷ್ಠತೆ ಇರುವುದು. ಆ ಭಾಷೆಗಳ ಅಳಿವು ಎಂದರೆ ದೇಶದ ಸಂಸ್ಕೃತಿ ಒಣಗಿ ಹೋದಂತೆ ಆಗಬಹುದು ಎಂದು ಎಚ್ಚರಿಸಿದರು. ಎರಡು ಸಾವಿರ ವರುಷಗಳಿಂದ ನಮ್ಮ ನಡುವೆ ಇದ್ದ ಹೆಸರುಗಳು ಭಾರತದಲ್ಲಿ ಈಗ ಬದಲಾಗುತ್ತಿರುವ ಬಗ್ಗೆ ಖೇದ ವ್ಯಕ್ತಪಡಿಸಿದ ಬಿಳಿಮಲೆಯವರು, ಕೃಷ್ಣದೇವರಾಯನೂ ತನ್ನ ಊರಿನ ಹೆಸರನ್ನು ಹಂಪಿಯಾಗಿಯೇ ಇಟ್ಟುಕೊಂಡಿದ್ದನೇ ಹೊರತು 'ಕೃಷ್ಣದೇವರಾಯ ನಗರ' ಎಂದೇನೂ ಬದಲಾಯಿಸಲಿಲ್ಲ. ಶ್ರೀ ವಿಜಯನನ್ನು ತನ್ನ ಆಸ್ಥಾನದಲ್ಲಿ ಸಾಕಿದ ನೃಪತುಂಗ, ಮಾಳ್ಖೇಡ ಎಂಬ ಹೆಸರನ್ನು ಬದಲಾಯಿಸಿ 'ನೃಪತುಂಗ ಪುರ' ಎಂದೇನೂ ಮಾಡಿಲ್ಲ. ಹೀಗೆ ಸಂಶೋಧನಾ ಪರಂಪರೆ, ಸಾಂಸ್ಕೃತಿಕ ಪರಂಪರೆ, ಸಾಂಸ್ಕೃತಿಕ ಸಮನ್ವಯ ಪರಂಪರೆ, ಅವೆಲ್ಲವನ್ನು ನಾಶಗೊಳಿಸಿ ಹೊಸ ದಾರಿ ಹಿಡಿಯುತ್ತಿರುವಾಗ ವಹಿಸಬೇಕಾದ ಎಚ್ಚರಿಕೆ, ಸೃಜನಾತ್ಮಕತೆಯನ್ನು ವಿವರಿಸಿದ ಬಿಳಿಮಲೆಯವರು ಸಂಶೋಧನಾ ಲೇಖನಗಳಲ್ಲಿ ಕನ್ನಡದ ಮಟ್ಟ ಕುಸಿಯದಂತೆ ಜಾಗೃತಿ ವಹಿಸುವ ಬಗ್ಗೆ ಎಚ್ಚರಿಸಿದರು. ಕಾವ್ಯಗಳಲ್ಲಿ ಉಲ್ಲೇಖಿತ ಕಾವೇರಿಯಿಂದ ಗೋದಾವರಿ ತನಕದ ಕನ್ನಡ ನಾಡು ಪೂರ್ತಿ ಉತ್ತರವೂ ಅಲ್ಲದ, ಪೂರ್ತಿ ದಕ್ಷಿಣವೂ ಅಲ್ಲದ ಭೂಭಾಗವನ್ನು ಹೊಂದಿದ ಈ ದಕ್ಷಿಣ ಪ್ರಸ್ಥಭೂಮಿ 230 ಭಾಷೆಗಳ, ಅನೇಕ ಸಮುದಾಯಗಳ, ತತ್ವಸಿದ್ಧಾಂತಗಳ ಆಗರ ಸ್ಥಾನವಾಗಿದೆ ಎಂಬುದನ್ನು ದೃಷ್ಟಾಂತ ಸಹಿತವಾಗಿ ವಿವರಿಸಿದರು. ಭಾಷೆಗಳು, ಸಂಸ್ಕೃತಿಗಳು, ಸಮುದಾಯಗಳನ್ನು ಹೊಸದಾಗಿ ಅರ್ಥಮಾಡಿಕೊಂಡು ಒಂದು ಸಾಮರಸ್ಯದ ಸರ್ವ ಜನಾಂದ ಶಾಂತಿಯ ತೋಟದ ಮೂಲವನ್ನು ಅರ್ಥೈಸಿಕೊಂಡು ಸಂಶೋಧನೆ, ಭಾಷೆಯ ಮೂಲಕ ಕರ್ನಾಟಕವನ್ನು ಮರುಕಟ್ಟಲು ವಿಫಲವಾದರೆ ಬಹುದೊಡ್ಡ ಬೆಲೆತೆರಬೇಕಾದೀತು ಎಂದು ಎಚ್ಚರಿಸಿದರು.

ಮುಂಬರುವ ದಿನಗಳಲ್ಲಿ ಡಿಲಿಮಿಟೇಶನ್ ನಡೆದಾಗ ದಕ್ಷಿಣ ಭಾರತದ ಲೋಕ ಸಭಾ ಸ್ಥಾನಗಳು ಉತ್ತರ ಭಾರತದ ಲೋಕಸಭಾ ಸ್ಥಾನಗಳಿಗೆ ಹೋಲಿಸಿದರೆ ಅನುಪಾತದಲ್ಲಿ ಗಣನೀಯವಾಗಿ ಕುಗ್ಗಲಿದ್ದು, ಇದು ದಕ್ಷಿಣದ ಭಾಷೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಆತಂಕವನ್ನು ವ್ಯಕ್ತಪಡಿಸಿದರು. ನಾವು ನಮ್ಮ ಭಾಷೆಯ ಪರವಾಗಿ ಗಟ್ಟಿಯಾಗಿ ನಿಲ್ಲಬೇಕಾದ ಅಗತ್ಯದ ಕುರಿತು ಬಿಳಿಮಲೆಯವರು ವಿವರಿಸಿದರು. ಅನುವಾದದ ಜೊತೆಗೆ ಭಾಷೆಯಲ್ಲಿ ಕೃಷಿ ಜ್ಞಾನ, ತಂತ್ರಜ್ಞಾನ, ಸಾಹಿತ್ಯ ಜ್ಞಾನ, ಸಾಂಸ್ಕೃತಿಕ ಜ್ಞಾನ, ಆಡಳಿತಾತ್ಮಕ ಜ್ಞಾನ ಬೆಳೆದಾಗ ಒಕ್ಕೂಟ ವ್ಯವಸ್ಥೆಯಲ್ಲಿ ಗಟ್ಟಿಯಾಗಿ ನಿಲ್ಲಲು ಸಾಧ್ಯ; ಇಲ್ಲವಾದರೆ ಮುಂದಿನ ನೂರು ವರ್ಷಗಳಲ್ಲಿ ಕನ್ನಡವೆಂಬುದು ಕೇವಲ ಆಡುಭಾಷೆಯಾಗಿ ಉಳಿಯುವ ಅಪಾಯವಿರುವುದರಿಂದ ಈಗ ಹೋರಾಟದ ಅಗತ್ಯವಿದೆ ಎಂಬುದನ್ನು ಮನಗಾಣಿಸಿದರು.

ಕರ್ನಾಟಕದ ಸಣ್ಣ ಭಾಷೆಗಳಿಂದ ದೊಡ್ಡ ಭಾಷೆ ಬೆಳೆದಿದೆ ಆದರೆ ರಾಜ್ಯದ ಅನೇಕ ಭಾಷೆಗಳು ಅಳಿವಿನಂಚಿಗೆ ಬರುತ್ತಿವೆ. ಹಿಂದಿಯಷ್ಟೇ ಬೆಳೆಯುತ್ತಿದೆ. ಬೆಳೆಯುವ ಭಾಷೆಯೊಂದು ಇತರ ಭಾಷೆಗಳ ಅಳಿವಿಗೆ ಕಾರಣವಾಗುವುದನ್ನು ಸಹಿಸಿದರೆ ಅದು ನಮ್ಮ ಭಾಷೆಗೆ, ನಮ್ಮ ಊರಿಗೆ, ನಮ್ಮ ಸಂಸ್ಕೃತಿಗೆ, ನಮ್ಮಕಲೆಗೆ ನಾವು ಮಾಡಿದ ಅನ್ಯಾಯವಾಗುತ್ತದೆ ಎಂದ ಬಿಳಿಮಲೆಯವರು, ಪ್ರತಿಯೊಂದು ಮಗುವು ಸಹ ಐದನೇ ತರಗತಿ ತನಕ ಕನ್ನಡವನ್ನು ಖಡ್ಡಾಯವಾಗಿ ಓದುವ ಮೂಲಕ ಕನ್ನಡವನ್ನು ಉಳಿಸಬಹುದು, ಆ ಮೂಲಕ ದೇಶದ ಒಕ್ಕೂಟ ವ್ಯವಸ್ಥೆಯನ್ನು ಉಳಿಸಬಹುದು ಮತ್ತು ದೇಶವನ್ನು ಗಟ್ಟಿಗೊಳಿಸಬಹುದು, ದೇಶವನ್ನು ಸಶಕ್ತಗೊಳಿಸಬಹುದು ಎಂಬ ಮಾತಿನೊಂದಿಗೆ ಅವರು ತಮ್ಮ ಭಾಷಣವನ್ನು ಮುಗಿಸಿದರು. ಬಂದಿದ್ದ ಪ್ರೇಕ್ಷಕರ ಮನಸ್ಸಿನಲ್ಲಿ ಹೊಸ ಚಿಂತನೆಯನ್ನು ಮೂಡಿಸುವಲ್ಲಿ ಯಶಸ್ವಿಯಾದರು.❑

**ಸರವು ಕೃಷ್ಣ ಭಟ್**

## ಅಭಿನಂದನೆ




ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರುಗಳಾದ ಶ್ರೀಮತಿ ಸವಿತಾ ನೆಲ್ಲಿ ಮತ್ತು ಶ್ರೀ ಕೃಷ್ಣರಾಜ್ ಕೆ.ಎನ್. ದಂಪತಿಗಳ ಸುಪುತ್ರಿಯಾದ **ಕು. ಅವನಿ ನೆಲ್ಲಿ** ಅವರು ಇತ್ತೀಚೆಗೆ ನಡೆದ ರಾಷ್ಟ್ರ ಮಟ್ಟದ ಜಿಮ್ನಾಸ್ಟಿಕ್‌ನಲ್ಲಿ ಚಿನ್ನದ ಪದಕವನ್ನು ಮುಡಿಗೇರಿಸಿಕೊಂಡಿದ್ದಾರೆ.

ಇವರಿಗೆ ದೆಹಲಿ ಕರ್ನಾಟಕ ಸಂಘ ಹಾಗು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

ಇವರು ಇನ್ನೂ ಹೆಚ್ಚಿನ ಪದಕಗಳನ್ನು ಗಳಿಸಲಿ ಎಂದು ದೆಹಲಿ ಕರ್ನಾಟಕ ಸಂಘ ಶುಭ ಹಾರೈಸುತ್ತದೆ.

# ದೆಹಲಿ ಕನ್ನಡ 'ಸ್ನೇಹಾ' ಮಹಿಳೆಯರಿಂದ ಕರ್ನಾಟಕ ರಾಜ್ಯೋತ್ಸವ ಆಚರಣೆ













ಈಗಿನ ನಮ್ಮ ಕರ್ನಾಟಕ ರಾಜ್ಯ ನಮಗೆಲ್ಲಾ ತಿಳಿದಂತೆ 1956 ನವೆಂಬರ್ 1 ರಂದು ಮೈಸೂರು ರಾಜ್ಯವೆಂದು ಘೋಷಿತಗೊಂಡಿತ್ತು. ಆಗಿನ ಹಿರಿಯ ಮುತ್ಸದ್ದಿಗಳು, ರಾಜಕಾರಣಿಗಳು ಮತ್ತು ಪ್ರಖ್ಯಾತ ಸಾಹಿತಿಗಳಾದ ಕುವೆಂಪು, ಆಲೂರು ವೆಂಕಟರಾವ್, ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಇತ್ಯಾದಿ ಪ್ರಮುಖರ ಪರಿಶ್ರಮದಿಂದ ಹೆಚ್ಚಾಗಿ ಕನ್ನಡ ಮಾತನಾಡುವ ಪ್ರದೇಶಗಳಾದ ಹೈದರಾಬಾದ್ ಕನ್ನಡ, ಮುಂಬಯಿ ಕನ್ನಡ, ಮದ್ರಾಸ್ ಕನ್ನಡ, ಮೈಸೂರು ಪ್ರಾಂತ್ಯ ಪ್ರದೇಶ, ಮಲೆನಾಡು ಪ್ರಾಂತ್ಯಗಳನ್ನು ಒಟ್ಟಾಗಿಸಿ ಒಂದುಗೂಡಿಸಿ 19 ಜಿಲ್ಲೆಗಳ ಮೈಸೂರು ರಾಜ್ಯ ಅಂದು ಉದಯವಾಗಿತ್ತು. ನಂತರ 1973ರಲ್ಲಿ ಶ್ರೀ ದೇವರಾಜ್ ಅರಸ್ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನಮ್ಮೆಲ್ಲರ ಅಭಿಮಾನದ ಹೆಮ್ಮೆಯ ನಾಡು, 'ಕರು' ಮತ್ತು 'ನಾಡು' ಶಬ್ದಗಳ ಜೋಡಣೆಯೊಂದಿಗೆ 'ಕರ್ನಾಟಕ ರಾಜ್ಯ'ವೆಂದು ಹೊಸ ನಾಮಕರಣ ಪಡೆದುಕೊಂಡಿತು. ಈಗ ನಮ್ಮ ರಾಜ್ಯ 31 ಜಿಲ್ಲೆಗಳನ್ನು ಒಳಗೊಂಡಿದೆ. ದೇಶದಾದ್ಯಂತ ಹಾಗು ಹೊರದೇಶಗಳಲ್ಲಿಯೂ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುತ್ತಿರುವುದು ಹೆಮ್ಮೆಯ ಮತ್ತು ಅಭಿಮಾನದ ವಿಷಯ.

'69'ನೇ ಕರ್ನಾಟಕ ರಾಜ್ಯೋತ್ಸವವನ್ನು 'ಸ್ನೇಹಾ'ದ ಮಹಿಳೆಯರೆಲ್ಲಾ ದೆಹಲಿ ಕರ್ನಾಟಕ ಸಂಘದಲ್ಲಿ ನವೆಂಬರ್ 20, 2024ರಂದು ಜೊತೆ ಸೇರಿ ಸಂಭ್ರಮದಿಂದ ಆಚರಿಸಿಕೊಂಡರು. ನಾಡಗೀತೆಯೊಂದಿಗೆ ಕರ್ನಾಟಕದ ಬಾವುಟಗಳನ್ನು ಹಾರಿಸಿ ಕನ್ನಡ ಮಾತೆಗೆ ದೀಪ ಬೆಳಗಿಸಿ ನಮಿಸಿದರು. ಅಧ್ಯಕ್ಷೆ ಶ್ರೀಮತಿ ಸರೋಜಾ ಮಾಧವ ಅವರ ಮುನ್ನುಡಿಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತ್ತು. ರಾಜ್ಯೋತ್ಸವದ ಅಂಗವಾಗಿ ಮಹಿಳೆಯರಿಗೆ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಕನ್ನಡ ಬಾವುಟದ ಬಣ್ಣ 'ಹಳದಿ' ಶಾಂತಿ ಹಾಗೂ ಪ್ರೀತಿಯ ದ್ಯೋತಕವಾಗಿದ್ದರೆ, 'ಕೆಂಪು' ಬಣ್ಣ ಕ್ರಾಂತಿ ಹಾಗೂ ಉಜ್ವಲತೆಯ ಪ್ರತೀಕವಾಗಿದೆ, ಈ ಎರಡೂ ಬಣ್ಣಗಳನ್ನು ಮುಖ್ಯವಾಗಿ ಉಪಯೋಗಿಸಿ ಮಾಡುವಂತೆ ಅಧ್ಯಕ್ಷರ ಸೂಚನೆಯ ಮೇರೆಗೆ ರಂಗೋಲಿಗಳ ಸೃಷ್ಟಿಯಾಗಿತ್ತು.

ಮಹಿಳೆಯರು ತಮ್ಮ ಕೈ ಚಳಕಗಳಿಂದ ಕಣ್ಮನ ಸೆಳೆಯುವ ಸುಂದರ ರಂಗೋಲಿಯ ಚಿತ್ತಾರ ಮೂಡಿಸಿದ್ದರು. ರಂಗೋಲಿ ನಮ್ಮ ಕಲೆ ಮತ್ತು ಸಂಸ್ಕೃತಿಯ ಕನ್ನಡಿ. ಇದರಲ್ಲಿ ಭಾಗವಹಿಸಿದ್ದವರು– ಶ್ರೀಮತಿ ಉಷಾ ಮೋಹನ್, ಶ್ರೀಮತಿ ಗೀತಾ ರೆಡ್ಡಿ, ಶ್ರೀಮತಿ ಪಾರ್ವತಿ ಉಭಾಳೆ, ಶ್ರೀಮತಿ ಸುಜಾತ ನಾಯ್ಕ್, ಶ್ರೀಮತಿ ಶೋಭಾ ಗೌಡ. ಶ್ರೀಮತಿ ಶಕುಂತಲಾ ರಾವ್ ಮತ್ತು ಶ್ರೀಮತಿ ರಂಗಮಣಿ ರಾವ್. ಶ್ರೀಮತಿ ಕೋಕಿಲಾ ರಾವ್ ಅವರು ತೀರ್ಪುಗಾರರಾಗಿ ಪರೀಕ್ಷಿಸಿ ತೀರ್ಪು ನೀಡಿದರು. ಶ್ರೀಮತಿ ಗೀತಾ ರೆಡ್ಡಿ ಅವರು ಪ್ರಥಮ ಬಹುಮಾನ ಗಿಟ್ಟಿಸಿಕೊಂಡರೂ ಅತ್ಯದ್ಭುತವಾಗಿ ರಂಗೋಲಿ ರಚಿಸಿದ ಇತರ ಮಹಿಳೆಯರಿಗೂ ಪುಟ್ಟ ಪ್ರೀತಿಯ ಗೌರವ ಧನವನ್ನು ನೀಡಿ ಗೌರವಿಸಲಾಯಿತು.

ಸೇರಿದ್ದ ಹೆಚ್ಚಿನ ಮಹಿಳೆಯರು ಹಾಗು ಕನ್ನಡ ನಾಡು ನುಡಿ, ಭಾಷೆ, ಕಲೆಯನ್ನು ಬಣ್ಣಿಸುವ ಗೀತೆಗಳನ್ನು ನಾಡಗೀತೆಗಳನ್ನು ಹಾಡಿ ರಾಜ್ಯಕ್ಕೆ, ಭಾಷೆಗೆ ಗೌರವ ಅಭಿಮಾನ ನೀಡಿ ಎಲ್ಲರ ಮನರಂಜಿಸಿದರು. ಹಿರಿಯ ದೆಹಲಿ ಕನ್ನಡತಿ ಡಾ. ಅಹಲ್ಯಾ ಚಿಂತಾಮಣಿ ಅವರು ತಮ್ಮ ಇಳಿ ವಯಸ್ಸಿನಲ್ಲೂ ಬಂದು ನಮ್ಮೊಂದಿಗೆ ಇದ್ದು ಸ್ಫೂರ್ತಿಯ ಮಾತುಗಳನ್ನಾಡಿದರು. ಶ್ರೀಮತಿ ಆಶಾ ಕಾರಿಯಪ್ಪ ಅವರು ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಎಲ್ಲರಿಗೂ ರುಚಿಕರವಾದ ಊಟದ ವ್ಯವಸ್ಥೆ ಆಯೋಜಿಸಿದ್ದರು. ಎಲ್ಲರೂ ಅವರನ್ನು ಪ್ರೀತಿಯಿಂದ ಅಭಿನಂದಿಸಿದರು. ಸಂಘದ ಸಿಬ್ಬಂದಿಗಳೆಲ್ಲಾ ನಮ್ಮೊಂದಿಗೆ ಸೇರಿ ಸ್ವಾದಿಷ್ಟ ಭೋಜನವನ್ನು ಜೊತೆಯಾಗಿ ಸವಿದು ರಾಜ್ಯೋತ್ಸವ ಸಂಭ್ರಮ ಆಚರಣೆಯಲ್ಲಿ ಸಹಭಾಗಿಗಳಾದರು. ❑

***ಸರೋಜ ಮಾಧವ***

## ಕರ್ನಾಟಕದ ಸರ್ವಾಂಗೀಣ ಪ್ರಗತಿಗೆ ಬಾ. ಸಾಮಗ ಕರೆ



ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಪ್ರಗತಿಯೆಂದರೆ ಕನ್ನಡ ನಾಡಿನ ಪ್ರಗತಿಯೇ ಆಗಿರುವುದರಿಂದ ಕೇಂದ್ರ ಸರ್ಕಾರವು ನೆನೆಗುದಿಯಲ್ಲಿರುವ ಕರ್ನಾಟಕದ ಯೋಜನೆಗಳಿಗೆ ಅನುಮತಿ ನೀಡಿ ಕಾರ್ಯಗತಗೊಳಿಸಿ ಕರ್ನಾಟಕದ ಸರ್ವಾಂಗೀಣ ಪ್ರಗತಿಗೆ ಕಾರಣವಾಗಬೇಕೆಂದು ದೆಹಲಿ ಕನ್ನಡಿಗ ಪತ್ರಿಕೆ ಸಂಪಾದಕರಾದ ಶ್ರೀ ಬಾ. ಸಾಮಗ ಅವರು ಕರೆ ನೀಡಿದರು.

ದಿನಾಂಕ 23.11.2014 ರಂದು ಶ್ರೀ ವಿಷ್ಣುಮೂರ್ತಿ ಯಕ್ಷಗಾನ ಕಲಾಸಂಘವು ಉಡುಪಿ ಸಮೀಪದ ಕೆಳಾರ್ಕಳಬೆಟ್ಟಿನಲ್ಲಿ ಏರ್ಪಡಿಸಿದ 17ನೇ ವಾರ್ಷಿಕೋತ್ಸವದ ಸಮಾರಂಭದ ಮುಖ್ಯ ಅತಿಥಿಯಾಗಿ ಸಾಮಗ ಅವರು ಭಾಗವಹಿಸಿದ್ದರು.

ಕರಾವಳಿಯಲ್ಲಿ ಮೆಚ್ಚುಗೆ ಪಡೆದ ಯಕ್ಷಗಾನವು ಕಾಲಕಾಲಕ್ಕೆ ಇತಿಮಿತಿಯಲ್ಲಿ ಬದಲಾವಣೆಗೊಂಡು ಉತ್ತಮ ಅಭಿರುಚಿಯನ್ನು ಬೆಳೆಸಿ ಕನ್ನಡ ವಾತಾವರಣವನ್ನು ಸೃಷ್ಟಿಸಿ ಯುವ ಜನಾಂಗದವರು ಸರಿಯಾದ ಮಾರ್ಗದಲ್ಲಿ ಮುನ್ನಡೆಯಲು ಕಾರಣವಾಗಿದೆ, ಕರ್ನಾಟಕದ ಜಾನಪದ ಕಲೆಗಳ ಕುರಿತು ಮರುಚಿಂತನೆ ಮಾಡಬೇಕೆಂದು ಸಾಮಗರು ಹೇಳಿದರು.

ವಿಷ್ಣುಮೂರ್ತಿ ದೇವಸ್ಥಾನದ ಅಧ್ಯಕ್ಷರಾದ ಶ್ರೀ ಸದಾನಂದ ನಾಯಕ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಯಕ್ಷಗುರು ಬಡಾನಿಡಿಯೂರು ಕೇಶವ ರಾವ್ ಅವರನ್ನು ಸನ್ಮಾನಿಸಲಾಯಿತು. ಪ್ರಾಧ್ಯಾಪಕ ಸುಬ್ರಹ್ಮಣ್ಯ ಜೋಷಿ, ಕವಿ ದಿನೇಶ್ ಉಪ್ಪೂರು, ಕಲಾವಿದೆ ಮಮತಾ ಶೆಟ್ಟಿ, ಉದ್ಯಮಿ ದಯಾನಂದ ಆಚಾರ್ಯ, ಶೇಷರಾಜ್, ಎಮ್.ಕೆ ಸುಕುಮಾರ್ ಶೆಟ್ಟಿ, ಸಕ್ಕಟ್ಟು ಜಯರಾಮಯ್ಯ ಉಪಸ್ಥಿತರಿದ್ದರು. ರವಿನಂದನ್ ಭಟ್ ನಿರೂಪಿಸಿದರು.

ಬಳಿಕ ವೀರ ಬರ್ಬರೀಕ, ವಿದ್ಯುನ್ಮಾಲಿ ಕಾಳಗ, ಮಯಾಪುರಿ ವಿಜಯ, ದಕ್ಷಯಜ್ಞ, ಗಿರಿಜಾ ಕಲ್ಯಾಣ ಪ್ರಸಂಗಗಳ ಯಕ್ಷಗಾನ ಪ್ರದರ್ಶನ ನಡೆಯಿತು. ❑

# ಗುರುವಂದನಾ ಕಾರ್ಯಕ್ರಮ



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಸುಮಾರು 24 ವರ್ಷಗಳ ಶಿಕ್ಷಕ ವೃತ್ತಿ ಜೀವನವನ್ನು ಸಾರ್ಥಕ ಕ್ಷಣಗಳಿಂದ ಪೂರೈಸಿ ನಿವೃತ್ತಿ ಜೀವನ ನಡೆಸುತ್ತಿರುವ ಶ್ರೀಮತಿ ಅರುಣಾ ಯು.ಎಸ್. ರಾವ್ ಅವರನ್ನು ದ್ವಾರಕಾದಲ್ಲಿರುವ ಅವರ ಸ್ವಗೃಹದಲ್ಲಿ ಗುರುವಂದನಾ ಕಾರ್ಯಕ್ರಮದ ಮೂಲಕ ಇತ್ತೀಚೆಗೆ ಅಭಿನಂದಿಸಿ ಗೌರವಿಸಲಾಯಿತು.

ಕಣ್ಣ ಮುಂದಿರುವ ಮಕ್ಕಳನ್ನು ತಾಯಿಯಂತೆ ಕಾಣುವ ವಾತ್ಸಲ್ಯಮಯಿ, ಹಿರಿಯರಲ್ಲಿ ಹಿರಿಯರಾಗಿ, ಕಿರಿಯರಲ್ಲಿ ಕಿರಿಯರಾಗಿ, ಮಕ್ಕಳೊಂದಿಗೆ ಮಕ್ಕಳಾಗಿ ಸದಾ ಉತ್ಸಾಹದ ಚಿಲುಮೆಯಂತಿರುವ ನಗುಮೊಗದ ಅರುಣಾ ಅವರು ಮೂಲತಃ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದವರು. 1987ರಲ್ಲಿ ಕರುನಾಡಿನಿಂದ ದೆಹಲಿಗೆ ಬಂದು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ವೃತ್ತಿ ಜೀವನವನ್ನು 1996ರಲ್ಲಿ ಆರಂಭಿಸಿದರು. ಇದರ ಪೂರ್ವದಲ್ಲಿ ದೆಹಲಿಯಲ್ಲಿರುವ ಆಂಧ್ರ ಶಿಕ್ಷಣ ಸಂಸ್ಥೆಯಲ್ಲಿ ಪ್ರೌಢ ಶಾಲಾ ಶಿಕ್ಷಕಿಯಾಗಿ ಹಾಗೂ ದೆಹಲಿ ಪಬ್ಲಿಕ್ ಸ್ಕೂಲ್‌ನಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದರು.

ಕನ್ನಡದ ಚಟುವಟಿಕೆಗಳಿಗೆ ಸದಾ ಬೆನ್ನು ತಟ್ಟುವ ಸಹೃದಯಿಯಾದ ಇವರು ಮಕ್ಕಳಿಗೆ ವಿಜ್ಞಾನ, ಇಂಗ್ಲಿಷ್ ಹಾಗೂ ಕನ್ನಡ ಭಾಷೆಯ ಜ್ಞಾನವನ್ನು ಧಾರೆಯೆರೆದವರು. ಶಿಕ್ಷಕ ವೃತ್ತಿ ಎಂಬುವುದು ಎಲ್ಲ ವೃತ್ತಿಯಂತಲ್ಲ. ಕೇವಲ ದುಡಿಯುವುದು, ಸಂಪಾದಿಸುವುದು ಶಿಕ್ಷಕ ವೃತ್ತಿಯ ಗುರಿಯಲ್ಲ. ನಮ್ಮ ವೃತ್ತಿ ಜೀವನದ ಅನುಭವ ನಮಗೆ ಸಂತೃಪ್ತಿ ಕೊಡುವಂತಾಗಬೇಕು. ಈ ವೃತ್ತಿಯಲ್ಲಿ ನಿಷ್ಠೆ, ಪ್ರಾಮಾಣಿಕತೆ ಇದ್ದು ಸಂತೋಷದಿಂದ ಮಕ್ಕಳಿಗೆ ಕಲಿಸಿ ನಾವು ಕಲಿಯವಂತಿರಬೇಕು ಎನ್ನುವ ಅರುಣಾ ಯು.ಎಸ್. ಅವರ ಅನುಭವದ ಮಾತುಗಳಿಗೆ ನಾವು ತಲೆ ಬಾಗಲೇಬೇಕು.

ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವಿಜ್ಞಾನ ಶಿಕ್ಷಕ ಶ್ರೀ ಹೆಚ್. ಎಸ್. ತೇಲಿ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಶ್ರೀಮತಿ ಅರುಣಾ ಯು.ಎಸ್. ಅವರ ಪತಿ ಡಾ.ಎಸ್. ಎಂ. ವೀರಭದ್ರಪ್ಪ, ರಾಜ್ಯಶಾಸ್ತ್ರ ಉಪನ್ಯಾಸಕ ಶ್ರೀ ನಾಗರಾಜ್ ಎಂ., ಸಹಶಿಕ್ಷಕಿ ಶ್ರೀಮತಿ ಸುನೀತಾ ಎನ್. ಜೆ., ಶ್ರೀಮತಿ ಶೋಭಾ ತೇಲಿ ಉಪಸ್ಥಿತರಿದ್ದರು. ಕನ್ನಡ ಶಿಕ್ಷಕ ಶ್ರೀ ಅರವಿಂದ ಬಿಜ್ಜೆ ಕಾರ್ಯಕ್ರಮ ನಿರೂಪಿಸಿದರು.❑

# ನವದೆಹಲಿಯಲ್ಲಿ ಕರುನಾಡಿನ ಸ್ವಾದಿಷ್ಟ ನಂದಿನಿ ಹಾಲು ಉಚಿತ ವಿತರಣೆ



ರಾಜ್ಯದ ಹೆಮ್ಮೆಯ ಉತ್ಪನ್ನ ನಂದಿನಿ ಇದೀಗ ರಾಷ್ಟ್ರ ರಾಜಧಾನಿ ದೆಹಲಿಯ ಜನರ ಕೈ ಸೇರುತ್ತಿದೆ. ಆ ಪ್ರಯುಕ್ತ 90 ಲೀಟರ್ ಹಾಲನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಶಿಕ್ಷಕ-ಶಿಕ್ಷಕೇತರ ವೃಂದದವರಿಗೆ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳಿಗೆ ಉಚಿತವಾಗಿ ವಿತರಿಸಲಾಯಿತು. ಈ ಕುರಿತಾಗಿ ಮಾತನಾಡಿದ ಶಾಲಾ ಪ್ರಾಂಶುಪಾಲ ಶ್ರೀ ಪ್ರಶಾಂತ ಕುಮಾರ್ ಅವರು ದೆಹಲಿಯಂತಹ ದೂರದೂರಿನಲ್ಲಿದ್ದರೂ ನಮ್ಮೂರಿನ ಸ್ವಾದಿಷ್ಟ ನಂದಿನಿ ಹಾಲು ಹಾಗೂ ಉತ್ಪನ್ನಗಳು ಈಗ ಇಲ್ಲಿ ದೊರೆಯಲಿದೆ ಎಂಬುವುದು ಸಂತೋಷಕರ. ಈ ಸೌಲಭ್ಯವನ್ನು ಸಂಸ್ಥೆಯ ಕನ್ನಡಿಗರು, ಕನ್ನಡೇತರರು ಪಡೆದುಕೊಳ್ಳಬೇಕು ಎಂದು ಹೇಳುತ್ತಾ ಸಂಸ್ಥೆಗೆ ಉಚಿತವಾಗಿ ಹಾಲನ್ನು ನೀಡಿದ ಕೆ.ಎಂ.ಎಫ್. ಆಡಳಿತ ವರ್ಗಕ್ಕೆ ಧನ್ಯವಾದಗಳನ್ನು ಅರ್ಪಿಸಿದರು. ಈ ಸಂದರ್ಭದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶ್ರೀ ಬಿ.ಕೆ. ಬಸವರಾಜು, ಗೌರವ ಕಾರ್ಯದರ್ಶಿ ಶ್ರೀ ಟಿ. ಎಂ. ಮೈಲಾರಪ್ಪ, ಆಡಳಿತ ಸಮಿತಿಯ ಸದಸ್ಯರು, ಶಾಲಾ ಉಪ ಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ ಮತ್ತು ಶಿಕ್ಷಕರು, ಸಿಬ್ಬಂದಿ ಮುಂತಾದವರು ಉಪಸ್ಥಿತರಿದ್ದರು.❑

# ದೆಹಲಿ ಕನ್ನಡ ಶಾಲೆಯಲ್ಲಿ ವಿಶ್ವ ಪುರುಷರ ದಿನಾಚರಣೆ



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ವಿಶ್ವ ಪುರುಷರ ದಿನಾಚರಣೆ ಕಾರ್ಯಕ್ರಮವನ್ನು ಇತ್ತೀಚೆಗೆ ಆಚರಿಸಲಾಯಿತು. ಕಾರ್ಯಕ್ರಮದ ಕುರಿತಾಗಿ ಶಾಲೆಯ ಉಪ ಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ಅವರು ಮಾತನಾಡಿ ತಂದೆ, ಅಜ್ಜ, ಅಣ್ಣ, ತಮ್ಮ, ಪತಿ, ಮಾವ, ಮಗ, ಅಳಿಯ ಹೀಗೆ ವಿವಿಧ ಬಗೆಯ ಪಾತ್ರ ನಿರ್ವಹಿಸಿ, ಜವಾಬ್ದಾರಿ ಹೊರುವ ಪುರುಷರು ಕುಟುಂಬದಲ್ಲಿ ಬಹುಮುಖ್ಯ ಪಾತ್ರವಹಿಸುವರು. ಪ್ರತಿಯೊಬ್ಬ ಪುರುಷನ ಶಕ್ತಿ ಸಾಮರ್ಥ್ಯದ ಜೊತೆಗೆ ಅವರ ತ್ಯಾಗಕ್ಕೆ ಗೌರವವನ್ನು ಸಲ್ಲಿಸೋಣ. ಅವರ ಭಾವನೆಗಳನ್ನು, ಅಭಿವ್ಯಕ್ತಿಯನ್ನು ಅರಿಯುವ ಮನಸ್ಸು ಪ್ರತಿಯೊಬ್ಬ ಮಹಿಳೆಗೆ ಇರಬೇಕು ಎಂದು ಹೇಳಿದರು.

ಶಾಲಾ ಶಿಕ್ಷಕ – ಶಿಕ್ಷಕೇತರ ಪುರುಷ ಸಿಬ್ಬಂದಿಗಳಿಗಾಗಿ ವಿವಿಧ ರೀತಿಯ ಮನೋರಂಜನಾತ್ಮಕ ಆಟಗಳನ್ನು ಏರ್ಪಡಿಸಲಾಗಿತ್ತು. ಶಾಲಾ ಪ್ರಾಂಶುಪಾಲ ಶ್ರೀ ಪ್ರಶಾಂತ್ ಕುಮಾರ್ ಹಾಗೂ ಶಿಕ್ಷಕರು ಉಪಸ್ಥಿತರಿದ್ದರು. ಶ್ರೀಮತಿ ಪ್ರೊಮಿಳಾ ದಹಿಯಾ, ಶ್ರೀಮತಿ ವಂದನಾ, ಕುಮಾರಿ ಬಿದಿಶಾ ಚಟರ್ಜಿ ಕಾರ್ಯಕ್ರಮವನ್ನು ಜಂಟಿಯಾಗಿ ನಿರೂಪಿಸಿದರು.❑

# ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರವನ್ನು ಬೆಳಗಿದ ಕನ್ನಡ ಮಕ್ಕಳ ಕೂಟ




ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವತಿಯಿಂದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಕನ್ನಡ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಹಾಗೂ ಆಡಳಿತ ಸಮಿತಿಯವರಿಗೆ 'ಕನ್ನಡ ಮಕ್ಕಳ ಕೂಟ' ವಿಶಿಷ್ಟ ಕಾರ್ಯಕ್ರಮವನ್ನು ಇತ್ತೀಚೆಗೆ ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಗಾರ್ಗಿ ಮಹಿಳಾ ಕಾಲೇಜು, ನವದೆಹಲಿ ಇಲ್ಲಿನ ನಿವೃತ್ತ ಪ್ರಾಧ್ಯಾಪಕರು, ದೆಹಲಿಯ ಹಿರಿಯ ಕನ್ನಡತಿ ಡಾ. ಅಹಲ್ಯಾ ಚಿಂತಾಮಣಿ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು ಭಾಷೆ ಸಂಸ್ಕೃತಿಯ ಪ್ರತೀಕ. ಕನ್ನಡಿಗರು ತಾವೆಲ್ಲಿ ನೆಲೆ ನಿಂತರೂ ನಾಡುನುಡಿಯ ಬಗ್ಗೆ ಅಪಾರ ಅಭಿಮಾನವುಳ್ಳವರು. ತಮ್ಮ ಮುಂದಿನ ತಲೆಮಾರಿಗೆ ಮಾತೃಭಾಷೆಯಾದ ಕನ್ನಡದ ಸವಿಯನ್ನು ಉಣಬಡಿಸಲು ಇಂತಹ ವಿಶಿಷ್ಟವಾದ ಕಾರ್ಯಕ್ರಮವನ್ನು ಆಯೋಜಿಸಿರುವುದು ಸಂತೋಷ. ಸುಮಾರು 38 ವರ್ಷಗಳ ಹಿಂದೆ ಇದೇ ಶಾಲೆಯಲ್ಲಿ ನಾನು ಹಾಗೂ ನನ್ನಂತಹ ಸಮಾನ ಮನಸ್ಕರು ಸೇರಿ ಕನ್ನಡ ಮಕ್ಕಳ ಕೂಟವನ್ನು ಆಯೋಜಿಸಿದ್ದೆವು. ಆ ಸಂದರ್ಭದಲ್ಲಿ ಕನ್ನಡಿಗ ವಿದ್ಯಾರ್ಥಿಗಳ, ಪೋಷಕರ ಸಂಖ್ಯೆ ಹೆಚ್ಚಾಗಿತ್ತು. ಕನ್ನಡಕ್ಕಾಗಿ ತುಡಿಯುವ ಮನಸ್ಸುಗಳನ್ನು ಕಂಡು ಬಹಳ ಸಂತೋಷವಾಗುತ್ತಿತ್ತು. ಮುಖ್ಯವಾಗಿ ಈ ನೆಲೆಯ ಕಾರ್ಯಕ್ರಮಗಳಿಂದ ಎಳೆಯ ಮನಸ್ಸುಗಳಲ್ಲಿ ಸಂಸ್ಕೃತಿ ಕೇಂದ್ರೀತ ವಿಚಾರಗಳನ್ನು ಬಿತ್ತುತ್ತಿರುವುದು ಅನುಕರಣೀಯ ಎಂದರು. ಹಾಗೆಯೇ ಅಕ್ಷರದ ಜೊತೆಗೆ ಸಂಸ್ಕೃತಿ, ಸಂಸ್ಕಾರವನ್ನು ಕನ್ನಡಮ್ಮನ ಸೇವೆಯನ್ನು ನಿಸ್ವಾರ್ಥವಾಗಿ ಮಾಡುತ್ತಿರುವ ಸಂಸ್ಥೆಯ ಆಡಳಿತ ಸಮಿತಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಗೌರವ ಉಪಸ್ಥಿತರಿದ್ದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ನಿವೃತ್ತ ಶಿಕ್ಷಕಿಯಾದ ಶ್ರೀಮತಿ ಅರುಣಾ ಯು.ಎಸ್. ಅವರು ಮಾತನಾಡಿ ಹೊಸ ವಿಚಾರಗಳಿಗೆ, ಹೊಸತನಕ್ಕೆ ವೇದಿಕೆಯಾಗಿರುವ ಎರಡು ದಿನಗಳ ಈ ಕನ್ನಡ ಮಕ್ಕಳ ಕೂಟವು ಕನ್ನಡತನದ ಜೊತೆಗೆ ಕನ್ನಡಿಗರ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ. ಮಕ್ಕಳೊಂದಿಗೆ ಪೋಷಕರಿಗೆ, ಶಿಕ್ಷಕರಿಗೆ ಆಯೋಜಿಸುವ ವಿಭಿನ್ನ ಸೃಜನಶೀಲ ಚಟುವಟಿಕೆಗಳು ಸಂಸ್ಥೆಯ ಉತ್ಸಾಹಕ್ಕೆ ಸಾಕ್ಷಿಯಾಗಿವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ಅವರು ಬೆಳೆವ ಸಿರಿ ಮೊಳಕೆಯಲ್ಲಿ ಎಂಬಂತೆ ಮಕ್ಕಳ ಕನ್ನಡದ ಪ್ರತಿಭೆಗೆ ಅರ್ಥಪೂರ್ಣ ವೇದಿಕೆ ಕನ್ನಡ ಮಕ್ಕಳ ಕೂಟ. ನಮಗಿಂದು ಬೇಕಾಗಿರುವುದು ಸೃಜನಶೀಲ ಮಕ್ಕಳು. ಸೃಜನಶೀಲರಾದವರು ಬುದ್ಧಿವಂತರಾಗಿ ಇರುತ್ತಾರೆ. ಆದರೆ ಅದೇ ಬುದ್ಧಿವಂತರೆಲ್ಲರೂ ಸೃಜನಶೀಲರಾಗಿರುವುದಿಲ್ಲ. ಮಕ್ಕಳಿಗೆ ಕಲಾನುಭವದ ಮೂಲಕ ಸೃಜನಶೀಲತೆಯನ್ನು ವರ್ಧಿಸಿಕೊಳ್ಳಲು ಅವಕಾಶ ನೀಡಬೇಕು. ಸೃಜನಶೀಲ ಚಿಂತನೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಶಿಕ್ಷಕರು, ಪೋಷಕರು ಪ್ರೋತ್ಸಾಹ ನೀಡಬೇಕು. ಇಂತಹ ಹೊಸತನದ ಕಾರ್ಯಕ್ರಮಗಳು ಮಕ್ಕಳಲ್ಲಿರುವ ಸೃಜನಶೀಲತೆಯನ್ನು ವಿಕಾಸಗೊಳಿಸಿ ಸರ್ವಾಂಗೀಣ ಬೆಳವಣಿಗೆಗೆ ಕಾರಣವಾಗುತ್ತವೆ ಎಂದರು.

ಶಾಲಾ ಪ್ರಾಂಶುಪಾಲರಾದ ಶ್ರೀ ಪ್ರಶಾಂತ್ ಕುಮಾರ್ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ ಸತತ ಎರಡನೇ ಬಾರಿ ವಿಶಿಷ್ಟವಾದ, ವಿನೂತನವಾದ ಕನ್ನಡ ಮಕ್ಕಳ ಕೂಟವು ಶಾಲೆಯಲ್ಲಿ ಆಯೋಜನೆಗೊಳ್ಳುತ್ತಿರುವುದು ಅಭಿಮಾನದ ವಿಚಾರ. ಕನ್ನಡಿಗರ ಇಚ್ಛಾಶಕ್ತಿಗೆ ಸರಿಸಾಟಿಯಿಲ್ಲ. ಎರಡು ದಿನಗಳ ಈ ಕಾರ್ಯಕ್ರಮವನ್ನು ಕನ್ನಡಕ್ಕಾಗಿ ಆಯೋಜಿಸಲು ಶಿಕ್ಷಕರು, ಪೋಷಕರು, ಆಡಳಿತ ಸಮಿತಿ ಸದಸ್ಯರು ಬಹಳಷ್ಟು ಶ್ರಮವಹಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ 2023–24ನೇ ಶೈಕ್ಷಣಿಕ ಸಾಲಿನಲ್ಲಿ 10ನೇ ತರಗತಿಯ ಸಿಬಿಎಸ್‌ಸಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯಲ್ಲಿ 90ಕ್ಕಿಂತ ಅಧಿಕ ಅಂಕ ಪಡೆದು ವಿಶಿಷ್ಟ ಸಾಧನೆಗೈದ ವಿದ್ಯಾರ್ಥಿಗಳಾದ ನೀಕ್ಷಿತ್ ಕೆ., ಸುಮಂತ್, ಶಿಖಾ ಘಾಳೆ, ವಾಣಿ ಬೆನ್ನೂರು, ಮಧುಸೂದನ್ ಅವರನ್ನು ಅಭಿನಂದಿಸಲಾಯಿತು. ಮಕ್ಕಳಲ್ಲಿ ಕಲಿಕೆ, ಮನರಂಜನೆ ಹಾಗೂ ಸಹಭಾಗಿತ್ವದ ಧ್ಯೇಯದೊಂದಿಗೆ ಆಯೋಜಿಸಿದ ಕನ್ನಡ ಮಕ್ಕಳ ಕೂಟದಲ್ಲಿ ಭಕ್ತಿಭಾವದಿಂದ ಕೂಡಿದ ಭಜನೆ, ಪ್ರತಿಭೆಗೆ ವೇದಿಕೆ ನೀಡಿದ ನಾನು ನನ್ನ ಪ್ರತಿಭೆ ಸಾಂಸ್ಕೃತಿಕ ಕಾರ್ಯಕ್ರಮ, ಮಾತಾಪಿತರಿಗೆ ಭಕ್ತಿಯಿಂದ ಅರ್ಪಿಸಿದ ಗುರುವಂದನಾ ಕಾರ್ಯಕ್ರಮ, ಮಾತೃಭೋಜನ, ಮನಸ್ಸಿಗೆ ಉಲ್ಲಾಸವನ್ನು ನೀಡಿದ ಯೋಗಾಸನ, ಅರುಣೋದಯದಲ್ಲಿ ಮುದ ನೀಡಿದ ವಿದುಷಿ ಶ್ರೀಮತಿ ಶುಭಾದೇವಿ ಪ್ರಸಾದ್ ಅವರ ಸಂಗೀತ ಸುಧೆ, ಕನ್ನಡವನ್ನು ಕಟ್ಟುವ ಭಾಷಾ ಚಟುವಟಿಕೆ, ಹೊಸ ಕಲಿಕೆಯ ಅನುಭವ ನೀಡಿದ ಮನರಂಜನಾತ್ಮಕ ಆಟಗಳು, ಆತ್ಮಬಲವನ್ನು ಹೆಚ್ಚಿಸಿದ ಕ್ರೀಡಾ ಚಟುವಟಿಕೆ, ಮಧ್ಯರಾತ್ರಿಯಲ್ಲಿ ನಿದ್ದೆ ಕಣ್ಣುಗಳಿಗೆ ಹೊಸ ಬೆಳಕು ನೀಡಿದ ಶಿಬಿರಾಗ್ನಿಯು ಕನ್ನಡ ಮಕ್ಕಳಿಗೆ ಹೊಸತನದ ರಸದೂಟವನ್ನು ನೀಡಿತು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ, ಉಪಾಧ್ಯಕ್ಷ ಡಾ. ಅವನೀಂದ್ರನಾಥ ರಾವ್, ಸಂಸ್ಥೆಯ ಆಡಳಿತ ಸಮಿತಿಯ ಸದಸ್ಯರುಗಳಾದ ಡಾ. ಅಶೋಕ್ ಗೋನಾಳ್, ಬಿ.ಎನ್. ಮೋಹನ್, ಶಾಲಾ ನಿಕಟಪೂರ್ವ ಗೌರವ ವ್ಯವಸ್ಥಾಪಕ ಶ್ರೀ ಶಿವಾನಂದ ಸಿರ್ಸಿಕರ್, ಉಪಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ., ಶಿಕ್ಷಕ ವೃಂದ, ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಉಪನ್ಯಾಸಕ ಶ್ರೀ ನಾಗರಾಜ ಎಂ., ಶಿಕ್ಷಕರುಗಳಾದ ಹೆಚ್. ಎಸ್. ತೇಲಿ, ಶಿವರಾಮ ಎನ್., ಗಣೇಶ್ ಹೆಗಡೆ, ಶ್ರೀಮತಿ ಸುನೀತಾ ಎನ್. ಜೆ., ಶ್ರೀಮತಿ ಪ್ರತಿಭಾ ಗೌಡ, ಶ್ರೀಮತಿ ವೀಣಾ ಕೊಠಾರಿ, ಶ್ರೀಮತಿ ರಂಜಿತಾ ಆರ್., ಶ್ರೀಮತಿ ನಿವೇದಿತಾ, ಶ್ರೀಮತಿ ರೇಣುಕಾ ಕಾರ್ಯಕ್ರಮ ನಿರ್ವಹಣೆಗೆ ಸಹಕರಿಸಿದರು. ಕನ್ನಡ ಶಿಕ್ಷಕ ಶ್ರೀ ಅರವಿಂದ ಬಿಜ್ಜೈ ಕಾರ್ಯಕ್ರಮ ನಿರೂಪಿಸಿದರು. ಸಂಸ್ಥೆಯ ಆಡಳಿತ ಸಮಿತಿ ಸದಸ್ಯ ಶ್ರೀ ಹರಿಪ್ರಿಯಾ ಎಸ್. ಸ್ವಾಗತಿಸಿದರು. ಗೌರವ ವ್ಯವಸ್ಥಾಪಕ ಶ್ರೀ ಉಮೇಶ್ ಬಿ.ಆರ್. ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.❑

## ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಕೇಂದ್ರ ಹಣಕಾಸು ಮತ್ತು ಸಾಂಸ್ಥಿಕ ವ್ಯವಹಾರಗಳ ಸಚಿವರ ಉಡುಗೊರೆ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಕೇಂದ್ರ ಹಣಕಾಸು ಮತ್ತು ಸಾಂಸ್ಥಿಕ ವ್ಯವಹಾರಗಳ ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಸಂವಿಧಾನ ದಿನಾಚರಣೆ ಅಂಗವಾಗಿ ಭಾರತ ಸಂವಿಧಾನದ ಮೂಲಪ್ರತಿ, ಕನ್ನಡ ಕೃತಿಗಳು ಹಾಗೂ ವೀಣೆಯನ್ನು ಉಡುಗೊರೆಯಾಗಿ ನೀಡಿರುತ್ತಾರೆ.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಇತ್ತೀಚೆಗೆ ನಡೆದ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಬೇಕಾಗಿತ್ತು. ವಾಯು ಮಾಲಿನ್ಯದ ಕಾರಣದಿಂದಾಗಿ ಶಾಲಾ ತರಗತಿಗಳು ಆನ್‌ಲೈನ್ ಮೂಲಕ ನಡೆದ ಕಾರಣ ಮಾನ್ಯ ಸಚಿವರು ಭಾಗಿಯಾಗಲು ಸಾಧ್ಯವಾಗಲಿಲ್ಲ. ಈ ನಿಮಿತ್ತ ಸಂಸ್ಥೆಗೆ ಉಡುಗೊರೆಯನ್ನು ಕಳುಹಿಸಿ ಕನ್ನಡ ಅಭಿಮಾನವನ್ನು ಮೆರೆದಿದ್ದಾರೆ.

ಈ ಸಂದರ್ಭದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಆಡಳಿತ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು, ಗೌರವ ವ್ಯವಸ್ಥಾಪಕರು, ಶಾಲಾ ಪ್ರಾಂಶುಪಾಲರು ಮತ್ತು ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.❑

## ದೆಹಲಿ ಕನ್ನಡ ಶಾಲೆಯಲ್ಲಿ ಸಂವಿಧಾನ ದಿನಾಚರಣೆ



ದಿನಾಂಕ 26.11.2024 ರಂದು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಸಂವಿಧಾನ ದಿನವನ್ನು ಆಚರಿಸಲಾಯಿತು. ಸಂವಿಧಾನ ದಿನವನ್ನು 'ರಾಷ್ಟ್ರೀಯ ಕಾನೂನು ದಿನ' ಎಂದು ಕರೆಯುತ್ತಾರೆ. 1949 ನವೆಂಬರ್ 26ರಂದು ಸಂವಿಧಾನ ಅಂಗೀಕರಿಸಿದ ನೆನಪಿಗಾಗಿ ಪ್ರತಿವರ್ಷ ನವೆಂಬರ್ 26ರಂದು 'ಸಂವಿಧಾನ ದಿನ' ಎಂದು ಆಚರಿಸಲಾಗುತ್ತಿದೆ. ನಮ್ಮ ಸಂವಿಧಾನ ಶಾಶ್ವತ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಅದು ನಮ್ಮ ಮಾರ್ಗದರ್ಶಿ ತತ್ವಗಳಾಗಿ ಕಾರ್ಯನಿರ್ವಹಿಸುತ್ತದೆ. "ಸಂವಿಧಾನ ಬರಿಯ ವಕೀಲರ ದಾಖಲೆಯಲ್ಲ ಅದರ ಚೈತನ್ಯ ಸದಾ ಬಾಳಿನ ಚೈತನ್ಯವಾಗಿದೆ" ಎಂದ ಡಾ. ಅಂಬೇಡ್ಕರ್ ಅವರ ಮಾತನ್ನು ನೆನಪಿಸಲಾಯಿತು.

ಶಾಲಾ ಪ್ರಾಂಶುಪಾಲರು, ಉಪ ಪ್ರಾಂಶುಪಾಲೆ ಮತ್ತು ಎಲ್ಲಾ ಶಿಕ್ಷಕ ವೃಂದದವರು–ನಾವೆಲ್ಲರೂ ಪ್ರಜಾಪ್ರಭುತ್ವ ರಾಷ್ಟ್ರದ ಮೂಲ ಮೌಲ್ಯಗಳಿಗೆ ಬದ್ಧರಾಗಿದ್ದೇವೆ ಮತ್ತು ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಿರುವ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ತತ್ವಗಳನ್ನು ಗೌರವಿಸುವ ಪ್ರತಿಜ್ಞೆಯನ್ನು ಪುನರುಚ್ಚರಿಸಿದರು.

ರಾಜ್ಯಶಾಸ್ತ್ರ ಉಪನ್ಯಾಸಕ ಶ್ರೀ ನಾಗರಾಜ ಎಂ. ಅವರು ಪ್ರತಿಜ್ಞಾ ವಿಧಿಯನ್ನು ಬೋಧಿಸುವುದರೊಂದಿಗೆ, ಸಂವಿಧಾನ ರಚನಾ ಸಭೆ ನಡೆದು ಬಂದ ನಡಾವಳಿಗಳು, ಸಂವಿಧಾನ ರಚನೆಯಲ್ಲಿ ಕೊಡುಗೆ ನೀಡಿದ ಪ್ರಮುಖ ವ್ಯಕ್ತಿಗಳ ಬಗ್ಗೆ ಹಾಗೂ ಸಂವಿಧಾನ ದಿನದ ಮಹತ್ವದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಾಲಾ ಪ್ರಾಂಶುಪಾಲ ಶ್ರೀ ಪ್ರಶಾಂತ್ ಕುಮಾರ್ ಅವರು ಮಾತನಾಡಿ ಶಾಲೆಯಲ್ಲಿ ಪ್ರತಿವರ್ಷವೂ ಸಂವಿಧಾನ ದಿನವನ್ನು ಅತ್ಯಂತ ಉತ್ಸುಕತೆಯಿಂದ ಆಚರಿಸಿಕೊಂಡು ಬರುತ್ತಿದ್ದೇವೆ. ಸಂವಿಧಾನದ ಆಶಯಗಳನ್ನು ನಾವೆಲ್ಲರೂ ನಮ್ಮೊಳಗೆ ಅಂಗೀಕರಿಸಿ ರಾಷ್ಟ್ರದ ಏಕತೆಗೆ ಬದ್ಧರಾಗಿರಬೇಕು. ಸಂವಿಧಾನದ ಮೌಲ್ಯಗಳಾದ ಜಾತ್ಯತೀತತೆ, ಪ್ರಜಾಪ್ರಭುತ್ವ, ಸಾರ್ವಭೌಮತ್ವ, ಸಮಾನತೆ, ಸ್ವಾತಂತ್ರ್ಯ, ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯಲು ನಾವೆಲ್ಲರೂ ಒಟ್ಟಿಗೆ ಶ್ರಮಿಸಬೇಕು ಎಂದರು.

ಸಂವಿಧಾನ ದಿನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಆಚರಿಸಲು, ಮಕ್ಕಳಲ್ಲಿ ಸಂವಿಧಾನ ಪ್ರಜ್ಞೆಯನ್ನು ಮೂಡಿಸುವ ಸಲುವಾಗಿ ಮತ್ತು ಸಂವಿಧಾನವನ್ನು ನಮಗೆ ನೀಡಿದ ಮಹನೀಯರಿಗೆ ಗೌರವ ಸಲ್ಲಿಸಲು ಶಾಲೆಯ ಹಿರಿಯ ಮತ್ತು ಕಿರಿಯ ವಿಭಾಗದ ವಿದ್ಯಾರ್ಥಿಗಳಿಗೆ ಭಾರತೀಯ ಸಂವಿಧಾನ ಮತ್ತು ನಾಗರಿಕ ಕರ್ತವ್ಯಗಳ ಬಗ್ಗೆ ರಸಪ್ರಶ್ನೆ, ಪ್ರಬಂಧ ಬರವಣಿಗೆ ಮತ್ತು ವಿಚಾರ ಸಂಕಿರಣವನ್ನು ಆಯೋಜಿಸಲು ನಿರ್ಧರಿಸಿದೆ ಎಂದು ತಿಳಿಸಿದರು.

ಶಾಲಾ ಉಪ ಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ರಾಜ್ಯಶಾಸ್ತ್ರ ಉಪನ್ಯಾಸಕ ನಾಗರಾಜ ಎಂ. ಕಾರ್ಯಕ್ರಮ ನಿರೂಪಿಸಿದರು. ❑

ಸಮಗ್ರ ವರದಿ :
**ಅರವಿಂದ ಬಿಜ್ಜೆ**

## ಭಾವಪೂರ್ಣ ಶ್ರದ್ಧಾಂಜಲಿ... ಓಂ ಶಾಂತಿ.

## ಕಂಬನಿ



ದೆಹಲಿ ಕರ್ನಾಟಕ ಸಂಘದ ರೂವಾರಿಗಳಲ್ಲಿ ಒಬ್ಬರಾದ ದಿ. ಜಿ.ಆರ್. ಇನಾಮದಾರರ ಧರ್ಮಪತ್ನಿ ಶ್ರೀಮತಿ ಪ್ರಮೀಳಾ ಇನಾಂದಾರ್ (ಶ್ರೀ ಶಿರೀಶ್ ಇನಾಮದಾರ್ ಅವರ ತಾಯಿ, ಶ್ರೀಮತಿ ಸವಿತಾ ಇನಾಮದಾರ್ ಅವರ ಅತ್ತೆ) ನವೆಂಬರ್ 22, 2024 ರಂದು ದೆಹಲಿಯ ಸ್ವಗೃಹದಲ್ಲಿ ಇಹಲೋಕ ತ್ಯಜಿಸಿದರು. ಅವರಿಗೆ 95 ವರ್ಷ ವಯಸ್ಸಾಗಿತ್ತು.

ದೆಹಲಿ ಕನ್ನಡಿಗರು ನಿಜಕ್ಕೂ ಅದೃಷ್ಟವಂತರು. ನಮ್ಮ ಹಿರಿಯರು ಕಷ್ಟಪಟ್ಟು ಕಟ್ಟಿ ಬೆಳೆಸಿದಂತಹ ದೆಹಲಿ ಕರ್ನಾಟಕ ಸಂಘ ನಮ್ಮೆಲ್ಲರ ಪ್ರತಿಭೆಗಳಿಗೆ ಅವಕಾಶ ನೀಡಿ ಪ್ರೋತ್ಸಾಹಿಸುವ ವೇದಿಕೆ. ಹಾಗಾಗಿ ಸಂಘ ದೆಹಲಿ ಕನ್ನಡಿಗರ ಅಭಿಮಾನದ ಪ್ರತೀಕ.

ಈ ನಮ್ಮ ಹೆಮ್ಮೆಯ 'ದೆಹಲಿ ಕರ್ನಾಟಕ ಸಂಘದ' ಕಟ್ಟಡ ನಿರ್ಮಾಣದ ಕೈಂಕರ್ಯದಲ್ಲಿ ಬೆವರು ಸುರಿಸಿದಂತಹ–ಡಾ. ಸರೋಜಿನಿ ಮಹಿಷಿ, ಶ್ರೀ. ಬಿ.ಕೆ ಸೀತಾರಾಮ್, ಶ್ರೀ ಬಿ.ಜಿ. ಆಚಾರ್ಯ, ಶ್ರೀ ಎನ್. ಎಚ್. ದೇಶಪಾಂಡೆ, ಶ್ರೀ ಭೇಂಡೆ, ಶ್ರೀ ನಾರಾಯಣ್, ಶ್ರೀ ಎಸ್. ಗೋಪಾಲ್ ಶಾಸ್ತ್ರಿ, ಶ್ರೀ ರತ್ನಾಕರ್ ಮತ್ತು ಎಲೆ ಮರೆಯ ಕಾಯಿಯಂತೆ ಸೇವೆಯನ್ನು ಸಲ್ಲಿಸಿದ ನಮ್ಮ ಪೂಜ್ಯ ಮಾವನವರಾದ ಶ್ರೀ ಜಿ.ಆರ್. ಇನಾಮದಾರ್ ಅವರ ಹೆಸರನ್ನು ನೆನೆಯಲೇ ಬೇಕು. ಹೊಸದಾಗಿ ಬಂದವರಿಗೆ ದೆಹಲಿ ಕರ್ನಾಟಕ ಸಂಘದ ಇತಿಹಾಸದ ಬಗ್ಗೆ, ಅದಕ್ಕಾಗಿ ದುಡಿದವರ ಬಗ್ಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಆಗ ಸಂಘಕ್ಕೆ ಸಂಬಂಧಿಸಿದ ಚಿಕ್ಕ ಪುಟ್ಟ ಸಭೆಗಳು ಆರ್. ಕೆ.ಪುರಂ ನಲ್ಲಿದ್ದ ನಮ್ಮ ಮನೆಯಲ್ಲಿ ನಡೆಯುತ್ತಿದ್ದವು. ನಗುಮುಖದ, ಸೌಮ್ಯ ಹಾಗೂ ಉದಾರ ಮನದ ನಮ್ಮ ಅತ್ತೆಯವರ ಅಡುಗೆಯ ಕೈರುಚಿಯ ಜೊತೆಗೆ ಅವಲಕ್ಕಿ–ಉಂಡಿಗಳ ಸವಿಯನ್ನು ನೆನೆಯುವವರಲ್ಲಿ ಶ್ರೀಮತಿ ಸುಧಾ ಮೂರ್ತಿಯವರೂ ಒಬ್ಬರು.

ನನ್ನ ಮತ್ತು ಅತ್ತೆಯವರ ಸುಂದರ ಸಂಬಂಧ 35 ವರ್ಷಗಳದ್ದು. ಅಡುಗೆ ಮನೆಯಲ್ಲಿ ಪಾತ್ರೆಗಳು ಸದ್ದು ಮಾಡುತ್ತ ಇದ್ದರೆ ಮಾತ್ರ ಆ ಮನೆಯಲ್ಲಿ ಜೀವಂತಿಕೆ ಇದೆ ಅಂತ ತಿಳಿಯಬೇಕು ಎಂದು ಎಲ್ಲೋ ಓದಿದ್ದು ನೆನಪಿಗೆ ಬಂದಾಗ ನಗು ಬರುತ್ತದೆ. ಕಾರಣ ಇಲ್ಲಿ ಆ ಸದ್ದು ಆಗದಂತೆ ಮತ್ತು ಜೀವಂತಿಕೆ ಉಳಿಯುವಂತೆ ನೋಡಿಕೊಂಡವರು ನಮ್ಮತ್ತೆ.

ಮದುವೆಯಾದ ಹೊಸದರಲ್ಲಿ ನಾನು ಏನೇ ಹೊಸ ರುಚಿ ಮಾಡಿದರೆ, ಹೊಸ ಕವನ ರಚಿಸಿ, ವಾಚನ ಮಾಡಿದರೂ, ಹೊಸ ಹಾಡು ಕಟ್ಟಿ ಹಾಡಿದರೂ ಸಹ ಅತ್ತೆಯವರು ಯಾವುದೇ ರೀತಿಯ ಪ್ರತಿಕ್ರಿಯೆ ನೀಡುತ್ತಿರಲಿಲ್ಲ. ಒಳ್ಳೇದೂ ಇಲ್ಲ...ಕೆಟ್ಟದ್ದೂ ಇಲ್ಲ. ಕೆಲವೊಮ್ಮೆ ಇವರೆಷ್ಟು ನಿರ್ಲಿಪ್ತರಿದ್ದಾರೆ ಅಂತ ಮನಸಿಗೆ ತುಂಬಾ ನೋವಾಗುತ್ತಿತ್ತು.

ಮನೆಯವರ ಮುಂದೆ ಹೇಳಲು ಮುಜುಗರ, ಕೊನೆಗೊಮ್ಮೆ ನನ್ನ ಮನದ ಅಳಲನ್ನ ಅಮ್ಮನ ಮುಂದ ಹೇಳಿದಾಗ, 'ನೋಡು, ನಿಮ್ಮ ಅತ್ತೆಯವರಿಗೆ ಅಕ್ಕ ತಂಗಿಯರಿಲ್ಲ ಮತ್ತು ಹೆಣ್ಣು ಮಕ್ಕಳೂ ಇಲ್ಲ. ಪಾಪ, ನಿನಗೆ ಯಾವ ರೀತಿಯಲ್ಲಿ ಪ್ರೋತ್ಸಾಹ ನೀಡಬೇಕು ಎಂದು ತಿಳಿಯದೇ ಇರಬಹುದು. ಆದರೆ ಅವರು ಎಂದೂ ಯಾವುದಕ್ಕೂ ನಿನಗೆ ಅಡ್ಡಿ ಮಾಡುವುದಿಲ್ಲ ಅಲ್ಲವೇ? ಮತ್ತೆ ಇದೇ ಅವರ ಪ್ರೀತಿಯ ರೀತಿ ಅಂತ ತಿಳಿದುಕೋ' ಎಂದು ಹೇಳುತ್ತಿದ್ದರು.

ಸರಿ, ಅಮ್ಮನ ಮಾತು ವೇದವಾಕ್ಯ ಎಂಬಂತೆ ನಾನು ಮುಂದೆ ಇದರ ಬಗ್ಗೆ ತಲೆ ಕೆಡಿಸಿಕೊಳ್ಳದೇ ಅವರ ಈ ಸ್ವಭಾವಕ್ಕೆ ಹೊಂದಿಕೊಂಡು 35 ವರ್ಷಗಳಿಂದ ಮಗಳಾಗಿ ನನ್ನ ಕರ್ತವ್ಯ ಮಾಡ್ತಾ ಬಂದೆ. ನಾನೇನೇ ಮಾಡಿದರೂ ಅದರ ಬಗ್ಗೆ ಹೇಳದೇ ಇರುತ್ತಿರಲಿಲ್ಲ. ಇಲ್ಲದೇ ಹೋದಲ್ಲಿ ಈ ಸುಂದರ ಜೀವನದ ಆಸ್ವಾದ ಸಿಗಲು ಸಾಧ್ಯವಾಗುತ್ತಿರಲಿಲ್ಲ. ಅಂದಿನಿಂದ ಇಂದಿನವರೆಗೂ ನಮ್ಮ ಅತ್ತೆ ಹಾಗೇನೇ ಇದ್ದರು. ಅವರನ್ನು ಕೂಸಿನ ಹಾಗೆ ನೋಡಿಕೊಳ್ಳುವ ಸಂದರ್ಭದಲ್ಲಿ ಸುಮ್ಮನೇ ನನ್ನ ಕೈ ಹಿಡಿದುಕೊಂಡು ಪ್ರೀತಿಯಿಂದ ನೋಡುತ್ತಿದ್ದರು. ಅಷ್ಟೆ. ಇದುವೇ ನನಗೆ ಸಿಕ್ಕ ಬಹುಮಾನ ಅಂತ ತಿಳಿದುಕೊಂಡೆ.

ಈಗ ನನಗೂ ಹೊಸದಾಗಿ 'ಅತ್ತೆಯ' ಪಟ್ಟ ಸಿಕ್ಕಿದೆ. ಹೊಸ ಸೊಸೆಗೆ ಮನೆತನದ ರೀತಿ–ರಿವಾಜುಗಳನ್ನು ಕಲಿಸಬೇಕು...ಅತ್ತೆಯವರ ಹಾಗೆ ನಾನೂ ಸಹ ಗಂಡ ಮತ್ತು ಮಗನ ಮನಸನ್ನ ಅರಿತು ಮನೆಯಲ್ಲಿ ಸುಖ ಶಾಂತಿ ನೆಮ್ಮದಿ ಖಾಯಂ ಆಗಿ ಉಳಿಸಿಕೊಳ್ಳಬೇಕು... ಈ ಎಲ್ಲಾ ಪಾತ್ರಗಳನ್ನ ಯಶಸ್ವಿಯಾಗಿ ನಿರ್ವಹಣೆ ಮಾಡಿದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ ಎಂದು ನನ್ನ ನಂಬಿಕೆ. ಸಂಬಂಧಗಳ ಈ ಸೂಕ್ಷ್ಮ ಕೊಂಡಿಗಳಿಗೆ ಬೆಸುಗೆ ಹಾಕುವುದು ನಮ್ಮ ಕೈಯಲ್ಲಿ ಇದೆ ಎಂದು ತೋರಿಸಿಕೊಟ್ಟ ನನ್ನ ಅತ್ತೆಯವರಿಗೆ ಶತಶತ ನಮನಗಳು. ಅತ್ತೆ ಅಮ್ಮನಾದಾಗ–ಸೊಸೆ ಮಗಳಾಗುವಳು, ಅವರಿಬ್ಬರ ನಗುವ ಮೊಗ ನೋಡಿ ಮನೆಯೂ ನಗುವುದು. ಅನೇಕ ವಿಷಯಗಳ ಬಗ್ಗೆ ಮಾದರಿಯಾದ ಅತ್ತೆಯವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುವೆ.❑

**ಸವಿತಾ ಇನಾಮದಾರ್**



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀಮತಿ ವಸುಂಧರಾ ಕುರಂದವಾಡ ಅವರು ದಿನಾಂಕ 18.11.2024 ರಂದು ಮುಂಬೈಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಶ್ರೀ ಸುಧಾಕರ ಕುರಂದವಾಡ ಅವರ ಧರ್ಮಪತ್ನಿ.

**ದೆಹಲಿ ಕನ್ನಡಿಗರನ್ನು ಅಗಲಿದ ಶ್ರೀಮತಿ ವಸುಂಧರಾ ಕುರಂದವಾಡ ಹಾಗು ದಿನಾಂಕ 22.11.2024 ರಂದು ನಿಧನರಾದ ಶ್ರೀ ಶಿರೀಶ್ ಇನಾಮದಾರ ಅವರ ತಾಯಿ ಶ್ರೀಮತಿ ಪ್ರಮೀಳಾ ಇನಾಮದಾರ್ (ಶ್ರೀಮತಿ ಸವಿತಾ ಇನಾಮದಾರ್ ಅವರ ಅತ್ತೆ) ಅವರುಗಳ ಆತ್ಮಕ್ಕೆ ಮೋಕ್ಷ ಸಿಗಲಿ ಮತ್ತು ಅವರ ಕುಟುಂಬಕ್ಕೆ ಅವರ ಅಗಲಿಕೆಯ ದು:ಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ದೆಹಲಿ ಕರ್ನಾಟಕ ಸಂಘ ಪ್ರಾರ್ಥಿಸುತ್ತದೆ. ಸಮಸ್ತ ದೆಹಲಿ ಕನ್ನಡಿಗರಿಂದ ಭಾವಪೂರ್ಣ ಶ್ರದ್ಧಾಂಜಲಿ.**

# ಭಿವಾಡಿ ಕನ್ನಡ ಸಂಘದ ರಾಜ್ಯೋತ್ಸವ-2024

ಭಿವಾಡಿ ಕನ್ನಡ ಸಂಘವು ಈ ಬಾರಿ ಕರ್ನಾಟಕ ರಾಜ್ಯೋತ್ಸವವನ್ನು ಇತ್ತೀಚೆಗೆ ಮಕ್ಕಳ ದಿನಾಚರಣೆಯ ಜೊತೆಗೆ ಜಾಲತಾಣದ ಮುಖೇನ ವಿಭಿನ್ನ ರೀತಿಯಲ್ಲಿ ಅದ್ದೂರಿಯಾಗಿ ಆಚರಿಸಿತ್ತು. 2017 ರಲ್ಲಿ ಸುಮಾರು 75ಕ್ಕೂ ಮಿಕ್ಕಿ ಇದ್ದ ಭಿವಾಡಿ ಕನ್ನಡಿಗ ಸಂಸಾರಗಳ ಸಂಖ್ಯೆ, ಕಳೆದ ಆರೇಳು ವರ್ಷಗಳಲ್ಲಿ ಉದ್ಯೋಗದ ನಿಮಿತ್ತ ಅಥವಾ ಇತರೇ ಕಾರಣಗಳಿಂದ ಹಲವಾರು ಮನೆಯವರು ಭಿವಾಡಿಯಿಂದ ಮರಳಿ ತಾಯ್ನಾಡಿಗೆ ಅಥವಾ ಇತರ ಪ್ರಾಂತಗಳಿಗೆ ತೆರಳಿರುವ ಹಿನ್ನೆಲೆಯಲ್ಲಿ ಇದೀಗ 50ಕ್ಕಿಂತಲೂ ಕಡಿಮೆಯಾಗಿರುವುದು ತೀರಾ ಶೋಚನೀಯ ವಿಚಾರ. ಇಂತಹ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ಭಿವಾಡಿ ಕನ್ನಡ ಸಂಘವು, ಭಿವಾಡಿ ಕನ್ನಡ ಕಲಿಕಾ ಕೇಂದ್ರದ ಜೊತೆಗೂಡಿ ದೇಶದ ಉದ್ದಗಲಕ್ಕೂ ಹರಡಿರುವ ಭಿವಾಡಿ ಕನ್ನಡಿಗರನ್ನು ಒಂದೇ ವೇದಿಕೆ ಮೇಲೆ ತರುವ ಉದ್ದೇಶದಿಂದ ಈ ಬಾರಿಯ ರಾಜ್ಯೋತ್ಸವವನ್ನು ಜಾಲತಾಣದ ಮೂಲಕ ಆಚರಿಸಲು ನಿರ್ಧರಿಸಿತ್ತು.

ಈ ಮುಂಚೆ ನಿರ್ಧಾರಿತವಾದಂತೆ ನವೆಂಬರ್ 17ರ ರವಿವಾರ ಮಧ್ಯಾಹ್ನ 12 ಗಂಟೆಗೆ ಗೂಗಲ್ ಮೀಟ್ ನಿಸ್ತಂತು ಮಾಧ್ಯಮದ ಮೂಲಕ ಆಯೋಜಿಸಲಾಗಿದ್ದ 'ನಮ್ಮ ನಾಡು-ನಮ್ಮ ಮಕ್ಕಳು' ಎಂಬ ಧ್ಯೇಯ ವಾಕ್ಯದೊಂದಿಗೆ ಈ ವಿನೂತನ ಶೈಲಿಯ ಕಾರ್ಯಕ್ರಮವು ಸುಮಾರು 2 ಗಂಟೆಗೂ ಮೀರಿ ನಡೆದಿದ್ದು ಸುಮಾರು 25 ಲಾಗಿನ್‌ಗಳ ಮೂಲಕ ನೂರಕ್ಕೂ ಹೆಚ್ಚು ಕಣ್ಣುಗಳಿಗೆ ತಂಪನ್ನು ಹಾಗೂ ಮನೋರಂಜನೆಯನ್ನು ನೀಡಿದ್ದು ಇನ್ನೂ ವಿಶೇಷವಾಗಿತ್ತು. ಭಿವಾಡಿ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಪ್ರಭು ಪಾಟೀಲ್ ಅವರ ಘನ ಅಧ್ಯಕ್ಷತೆಯಲ್ಲಿ ಸಂಪನ್ನಗೊಂಡ ಈ ಕಾರ್ಯಕ್ರಮದಲ್ಲಿ, ಮುಖ್ಯ ಅತಿಥಿ ದ್ವಯರಾದ ಭಿವಾಡಿ ಕನ್ನಡ ಮಕ್ಕಳ ಅಚ್ಚುಮೆಚ್ಚಿನ ಶಿಕ್ಷಕ ದಂಪತಿಗಳಾದ ಡಾ. ಶ್ರೀಧರ ಎಸ್.ಎನ್. ಮತ್ತು ಸಾಹಿತಿ ಶ್ರೀಮತಿ ಕೆ.ಸಿ. ರತ್ನಶ್ರೀ ಶ್ರೀಧರ್ ಅವರು ಉಪಸ್ಥಿತರಿದ್ದುದು ತುಂಬಾ ಸಂತೋಷ ತಂದಿತ್ತು.

ಒಂದು ವರ್ಷದ ಹಿಂದೆಯೇ ಮಹಾರಾಷ್ಟ್ರದ ಸಂಭಾಜಿ ನಗರಕ್ಕೆ ಉದ್ಯೋಗ ನಿಮಿತ್ತ ತೆರಳಿರುವ ನಮ್ಮ ಪಾದರಸದಂತ ತರುಣ ಶ್ರೀ ನರಸಿಂಹ ಕುಲಕರ್ಣಿ ಅವರ ಚಾಕಚಕ್ಯತೆಯ ನಿರೂಪಣೆಯಲ್ಲಿ ನಡೆದ ಈ ಹಬ್ಬ, ದೆಹಲಿಯಲ್ಲಿ ವಾಸಿಸುವ ಭಿವಾಡಿ ಕನ್ನಡ ಕಲಿಕಾ ಕೇಂದ್ರದ ವಿದ್ಯಾರ್ಥಿಗಳಾದ ಅಣ್ಣ ತಂಗಿ ಹಿಮಾನ್ಷು ಮತ್ತು ಹಂಸಶ್ರೀ ದೇವಿ ಪ್ರಸಾದ್ ಅವರ ಸರಸ್ವತಿ ಸ್ತುತಿಯೊಂದಿಗೆ ಆರಂಭವಾಗಿತ್ತು. ಬಳಿಕ ಈರ್ವರು ಮಕ್ಕಳು ಹಾಡಿದ್ದ ನಾಡಗೀತೆಗೆ ಎಲ್ಲರೂ ಧ್ವನಿಗೂಡಿಸಿ ಶೋಭೆ ತಂದಿದ್ದರು. ಸಂಘದ ಉಪಾಧ್ಯಕ್ಷೆ ಶ್ರೀಮತಿ ವೀಣಾ ದೇಸಾಯಿ ಅವರು ಪ್ರಾಸ್ತಾವಿಕ ನುಡಿಗಳ ಮೂಲಕ ಚಾಲನೆ ನೀಡಿದ್ದರು. ಖಜಾಂಚಿ ಶ್ರೀ ರವಿ ಜಿ.ಎಚ್. ಅವರು ಎಲ್ಲರನ್ನೂ ಕಾರ್ಯಕ್ರಮಕ್ಕೆ ಸ್ವಾಗತಿಸಿದ್ದರು.

ತದನಂತರ ಸುಮಾರು 45 ನಿಮಿಷಗಳಷ್ಟು ಹೊತ್ತು ಭಿವಾಡಿ ಕನ್ನಡ ಕಲಿಕಾ ಕೇಂದ್ರದ ಸ್ಥಳೀಯ ಹಾಗೂ ಹೊರನಾಡ ಸುಮಾರು 20 ಮಕ್ಕಳು ತಮ್ಮ ಬಹುಮುಖ ಪ್ರತಿಭೆಗಳನ್ನು ಚಿತ್ರಕಲೆ, ಹಾಡು, ಭಾಷಣ, ನೃತ್ಯ ಹಾಗೂ ಕಿರು ಸಂದೇಶಗಳ ಮೂಲಕ ಪ್ರಸ್ತುತ ಪಡಿಸಿದ್ದರು. ಎಲ್ಲಾ ಪ್ರಸ್ತುತಿಗಳನ್ನು ಮೊದಲೇ ಧ್ವನಿಮುದ್ರಣ ಮಾಡಿ ಕಳಿಸಲಾಗಿದ್ದು ಅವುಗಳನ್ನು ಒಪ್ಪರೀತಿಯಲ್ಲಿ ಸೇರಿಸಿ ಪ್ರದರ್ಶಿಸಲಾಗಿತ್ತು. ಮಕ್ಕಳ ಪ್ರತಿಯೊಂದು ಭಾಷಣಗಳು, ಕಿರು ಸಂದೇಶಗಳು, ಕಿರು ಗಾಯನಗಳು ತುಂಬಾ ಆಕರ್ಷಿತವಾಗಿದ್ದವು. ಅವು ನೋಡುಗರನ್ನು ಮೂಕ ವಿಸ್ಮಿತರಾಗಿಸಿದ್ದವು, ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ.

ಮುಖ್ಯ ಅತಿಥಿದ್ವಯರನ್ನು ಶ್ರೀಮತಿ ಸುಕನ್ಯಾ ಹಿರೇಮಠ ಹಾಗೂ ಶ್ರೀಮತಿ ವೀಣಾ ದೇಸಾಯಿ ಅವರು ಪರಿಚಯಿಸಿದ್ದರು. ದೂರದ ಚೆನ್ನೈನಲ್ಲಿ ಕುಲಪತಿಗಳಾಗಿ ಉನ್ನತ ಹುದ್ದೆಯಲ್ಲಿದ್ದರೂ ತಮ್ಮ ಅಮೂಲ್ಯವಾದ ಸಮಯವನ್ನು ನೀಡಿ, ನಮ್ಮ ಈ ಕಾರ್ಯಕ್ರಮದಲ್ಲಿ ಅತಿಥಿಗಣ್ಯರಾಗಿ ತಮ್ಮ ಶ್ರೀಮತಿಯೊಂದಿಗೆ ಉಪಸ್ಥಿತರಿದ್ದು ಒಟ್ಟು ಕಾರ್ಯಕ್ರಮಕ್ಕೆ ಇನ್ನೂ ಹೆಚ್ಚಿನ ಶೋಭೆ ತಂದಿದ್ದಾರೆ ಎಂದರೆ ತಪ್ಪಾಗಲಾರದು.

ಮುಖ್ಯ ಅತಿಥಿ ಡಾ. ಶ್ರೀಧರ ಎಸ್.ಎನ್. ಅವರು ಮಾತನಾಡುತ್ತಾ ತಮ್ಮ ಹಳೆಯ ನೆನಪಿನ ಬುತ್ತಿಯನ್ನು ನೆನೆಸಿ ಕಳೆದ ನಾಲ್ಕು ವರ್ಷಗಳಲ್ಲಿ ಮಕ್ಕಳಲ್ಲಿ ಮೂಡಿ ಬಂದಿರುವ ಪ್ರತಿಭೆಗಳನ್ನು ಪ್ರದರ್ಶಿಸಿದ ಎಲ್ಲಾ ಮಕ್ಕಳನ್ನು ಕೊಂಡಾಡಿದ್ದರು. ಹಾಗೂ ಭಿವಾಡಿ ಕನ್ನಡಿಗರನ್ನು ಮತ್ತು ಭಿವಾಡಿ ಕನ್ನಡ ಸಂಘವನ್ನು ಪ್ರಶಂಸಿಸಿ ಹಲವಾರು ಒಳ್ಳೆಯ ಮಾತುಗಳನ್ನು ಹೇಳಿದ್ದಲ್ಲದೆ ಇನ್ನೂ ವಿಶೇಷವಾಗಿ ಮಕ್ಕಳಿಗೋಸ್ಕರ ನೂರಾರು ಪುಸ್ತಕಗಳನ್ನು ಕಳಿಸುತ್ತೇವೆಂದು ಘೋಷಿಸಿದ್ದು ಅತಿ ಸಂತಸದ ವಿಷಯವಾಗಿತ್ತು. ಬಳಿಕ ಅವರ ಮಾತುಗಳನ್ನೇ ಪ್ರತಿಪಾದಿಸಿದ ಅವರ ಪತ್ನಿ ಶ್ರೀಮತಿ ರತ್ನಶ್ರೀ ಶ್ರೀಧರ್ ಅವರು ತಮ್ಮ ಕವಿತೆಯೊಂದನ್ನು ಓದಿದ್ದಲ್ಲದೇ, ಭಿವಾಡಿ ಕನ್ನಡ ಮಕ್ಕಳಿಗಾಗಿಯೇ ಬರೆದು ತಂದು ಓದಿ ಎಲ್ಲರನ್ನೂ ಭಾವುಕರಾಗಿಸಿದ್ದು ಕರತಾಡನಗಳ ಶಬ್ದಗಳಿಂದಲೇ ತಿಳಿದು ಬಂದಿತ್ತು .

ಇದರ ಜೊತೆಗೆ ಇದೇ ಪ್ರಪ್ರಥಮ ಬಾರಿಗೆ ಭಿವಾಡಿ ಕನ್ನಡ ಸಂಘದ ಪರವಾಗಿ ಹೆಮ್ಮೆಯ ಭಿವಾಡಿ ಕನ್ನಡಿಗ (ಹೊರನಾಡು) ಮತ್ತು (ಸ್ಥಳೀಯ) ಎಂಬ ಎರಡು ಪ್ರಶಸ್ತಿಗಳನ್ನು ನೀಡಲು ಆರಂಭಿಸಿದ್ದು ಅಪ್ಯಾಯತೆಯನ್ನು ತಂದಿತ್ತು. ಶ್ರೀಯುತ ಈಶ್ವರಲಿಂಗ ಆರೇರ ಅವರನ್ನು ಹೊರನಾಡಿನ ಹಾಗೂ ಶ್ರೀಯುತ ಶಶಿಧರ ದೇಸಾಯಿ ಅವರನ್ನು ಸ್ಥಳೀಯ ಹೆಮ್ಮೆಯ ಭಿವಾಡಿ ಕನ್ನಡಿಗರಾಗಿ ಆಯ್ಕೆ ಮಾಡಿ ಅವರು ಮಾಡಿದ ತ್ಯಾಗ ಸೇವೆಗಳ ಬಗ್ಗೆ ಹಿಂದಿನ ಸಂಘದ ಹಿರಿಯ ಪದಾಧಿಕಾರಿ ಹಾಗೂ ಮಾರ್ಗದರ್ಶಕರಾದ ಡಾ. ಮುರಳೀಧರ ಭಟ್ ಅವರು ಹಾಗೂ ಹಿಂದಿನ ಕಾರ್ಯದರ್ಶಿಗಳಾಗಿದ್ದ ಶ್ರೀ ಸುಧಾಕರ ಶೆಟ್ಟಿಯವರು ವಿಮರ್ಶಿಸಿದ್ದು ಕೂಡ ಅಷ್ಟೇ ವಿಶೇಷವಾಗಿತ್ತು.

ಭಿವಾಡಿಯಿಂದ ಸಾವಿರಾರು ಮೈಲಿ ದೂರದ ಊರಲ್ಲಿದ್ದರೂ ಸಂಘದ ಹಲವಾರು ಚಟುವಟಿಕೆಗಳಿಗೆ ಸಾಕ್ಷಿಯಾಗಿದ್ದ ಸಂಸ್ಥಾಪಕ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ ಶ್ರೀ ಈಶ್ವರಲಿಂಗ ಅರೇರ ಅವರು ಕೂಡ ಭಿವಾಡಿ ಕನ್ನಡ ಸಂಘದ ಈ ಒಂದು ಅದ್ದೂರಿ ಕಾರ್ಯಕ್ರಮದ ಬಗ್ಗೆ ಒಂದೆರಡು ಹಿತ ನುಡಿಗಳನ್ನಾಡಿದ್ದರು. ಜೊತೆಗೆ ಶ್ರೀ ಶಶಿಧರ್ ದೇಸಾಯಿ ಅವರು ಕೂಡ ತಮ್ಮದೇ ಆದ ಕನ್ನಡ ಶೈಲಿಯಲ್ಲಿ ತಮಗೆ ಲಭಿಸಿದ ಪ್ರಶಸ್ತಿಯ ಬಗ್ಗೆ ಧನ್ಯವಾದ ಸಲ್ಲಿಸುತ್ತಾ ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ನೀಡಿದಂತಾಗಿದೆ ಎಂದು ಹೇಳಿ ಕಾರ್ಯಕ್ರಮದಲ್ಲಿ






ಭಾಗಿಯಾಗಿದ್ದ ಎಲ್ಲಾ ಮಕ್ಕಳಿಗೆ ಹೃತ್ಪೂರ್ವಕವಾಗಿ ಅಭಿನಂದಿಸಿದ್ದರು.

ಭಿವಾಡಿ ಕನ್ನಡ ಸಂಘದ ಈ ಪ್ರಯುತ್ನಕ್ಕೆ ಪ್ರೋತ್ಸಾಹಿಸುತ್ತಾ ಇದರಲ್ಲಿ ಪ್ರೀತಿಯಿಂದ ವೀಕ್ಷಿಸಿದ್ದ ಗುರುಗ್ರಾಮದ ಶ್ರೀ ಸಾಬು ದರ್ಗಾ ಅವರಿಗೂ ಕರ್ನಾಟಕ ರಾಜ್ಯಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕದ ಉಪಾಧ್ಯಕ್ಷೆ ಶ್ರೀಮತಿ ಮಾಲಿನಿ ಪ್ರಹ್ಲಾದ ಮತ್ತು ಮಕ್ಕಳ ಸಾಹಿತಿ ಶ್ರೀ ಪ್ರಸಾದ್ ನಾಯ್ಕ್ ಅವರಿಗೂ ಭಿವಾಡಿ ಕನ್ನಡ ಸಂಘ ಆಭಾರಿಯಾಗಿದೆ.

ಕಾರ್ಯಕ್ರಮದ ಅಂತಿಮ ಘಟ್ಟ ವಾದ ವಂದನಾರ್ಪಣೆಯನ್ನು ಸಂಘದ ಸಕ್ರಿಯ ಕಾರ್ಯದರ್ಶಿಗಳಾದ ಶ್ರೀ ಗೋಪಾಲಕೃಷ್ಣ ಭಟ್ ಅವರು ಸುಸೂತ್ರವಾಗಿ ನೆರವೇರಿಸಿದ್ದರು.

ಒಟ್ಟಾರೆ ಈ ಬಾರಿ ಮಕ್ಕಳ ದಿನಾಚರಣೆ ಜೊತೆಗೆ ಆಚರಿಸಿದ್ದ ಕರ್ನಾಟಕ ರಾಜ್ಯೋತ್ಸವದ ಸಂಭ್ರಮ ಎಲ್ಲರನ್ನೂ ಸಡಗರದ ಉತ್ತುಂಗಕ್ಕೆ ಏರಿಸಿತ್ತು ಎನ್ನಲು ಸಂಶಯವಿಲ್ಲ. ❑

ಸಿರಿಗನ್ನಡಂ ಗೆಲ್ಗೆ

**ಗೋಪಾಲಕೃಷ್ಣ ಭಟ್** ಮತ್ತು
**ಈಶ್ವರಲಿಂಗ ಆರೇರ**

# ಜನಕಪುರಿ ಮಹಿಳಾ ಮಂಡಳಿಯಿಂದ ರಾಜ್ಯೋತ್ಸವದ ಸಂಭ್ರಮಾಚರಣೆ



ಪ್ರತಿ ವರ್ಷ ನವೆಂಬರ್ 1 ರಂದು ಎಲ್ಲೆಡೆಯೂ ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಅಚರಿಸುವುದು ಮತ್ತು ಯುವ ಪೀಳಿಗೆಗೆ ಕನ್ನಡ ನಾಡಿನ ಇತಿಹಾಸ, ಸಂಸ್ಕೃತ, ಕಲೆ, ಭಾಷೆಯ ಬಗ್ಗೆ ಅರಿವು ಮೂಡಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಜನಕಪುರಿ ಮಹಿಳಾ ಮಂಡಳಿಯ ನವೆಂಬರ್ ತಿಂಗಳ ಮಾಸಿಕ ಸಭೆಯು ಮಹಿಳಾ ಮಂಡಳಿಯ ಖಜಾಂಚಿ ಶ್ರೀಮತಿ ಹರ್ಷಿತಾ ಆಚಾರ್ಯ ಅವರ ಮನೆಯಲ್ಲಿ ನಾಡಹಬ್ಬದ ಆಚರಣೆಯೊಂದಿಗೆ ನೆರವೇರಿತು. ಇದೊಂದು ಸಡಗರ ಹಾಗೂ ಸಂಭ್ರಮದ ಹಬ್ಬ. ಎಲ್ಲಾ ಸದಸ್ಯೆಯರು ಅರಿಶಿಣ-ಕುಂಕುಮ ಬಣ್ಣದ ಸೀರೆಗಳನ್ನು ಧರಿಸಿ ಬಂದಿದ್ದರು. ತಾಯಿ ಭುವನೇಶ್ವರಿಗೆ ವಂದಿಸಿ, ನಾಡ ಗೀತೆಯನ್ನು ಸುಮಧುರವಾಗಿ ಹಾಡಿ, ವಿಜೃಂಭಣೆಯಿಂದ ನಾಡ ಹಬ್ಬವನ್ನು ಆಚರಿಸಿದೆವು.

ನಮ್ಮ ಕನ್ನಡ ನಾಡನ್ನು-ಕರುನಾಡು, ಶ್ರೀಗಂಧದ ಬೀಡು, ಕನ್ನಡಾಂಬೆಯ ನಾಡು, ತಾಯಿ ಭುವನೇಶ್ವರಿಯ ನಾಡು ಎಂಬೆಲ್ಲ ಹೆಸರುಗಳಿಂದ ಕರೆಯುತ್ತೇವೆ. ಹಚ್ಚಹಸುರಿನ ಸುಂದರ ಬೆಟ್ಟ ಗುಡ್ಡಗಳ, ಹರಿಯುವ ನದಿಗಳ, ಸಾಧು-ಸಂತರು-ದಾಸರು, ಶಿವಶರಣರು ಮತ್ತು ಕವಿಗಳಿಂದ ಕಂಗೊಳಿಸುತ್ತಿರುವ ನಮ್ಮ ಕನ್ನಡ ನಾಡಿಗೆ ಒಂದು ಧೀಮಂತ ಶಕ್ತಿ ಇದೆ. ಈ ಸುಂದರ, ಸಮೃದ್ಧ ನಾಡಿನಲ್ಲಿ ಜನಿಸಿರುವುದು ನಮ್ಮೆಲ್ಲರ ಅದೃಷ್ಟ.

ಅತ್ಯಂತ ಸಡಗರ-ಸಂಭ್ರಮದಿಂದ ಎಲ್ಲ ಜಾತಿ, ಮತ ಧರ್ಮಗಳ ಜನರು ಸೇರಿ ಒಗ್ಗೂಡಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತೇವೆ. ನಮ್ಮ ಮಹಿಳಾ ಮಂಡಳಿಯಿಂದ ರಾಜ್ಯೋತ್ಸವದ ಆಚರಣೆಯನ್ನು ಕೆಂಪು ಮತ್ತು ಹಳದಿ ಕನ್ನಡ ಧ್ವಜಕ್ಕೆ ವಂದಿಸಿ, ಕನ್ನಡ ನಾಡಗೀತೆ 'ಜಯ ಭಾರತ ಜನನಿಯ ತನುಜಾತೆ. ಜಯಹೇ ಕರ್ನಾಟಕ ಮಾತೆ' ಹಾಡುವುದರೊಂದಿಗೆ ಅತ್ಯಂತ ಸಂತೋಷ ಹಾಗೂ ಸಡಗರದಿಂದ ಆಚರಿಸಲಾಯಿತು.

ಹೊಸ ಕಾರ್ಯಕಾರಿ ಸಮಿತಿಯ ಭಿತ್ತಿಪತ್ರವನ್ನು ಹಿರಿಯ ಸದಸ್ಯೆ ಶ್ರೀಮತಿ ಉಮಾ ರಾವ್ ಅವರ ಕರ ಕಮಲದಿಂದ ಉದ್ಘಾಟಿಸಲಾಯಿತು. ನವೆಂಬರ್ 14ರ ಮಕ್ಕಳ ದಿನಾಚರಣೆಯ ಅಂಗವಾಗಿ ಮಕ್ಕಳ ಸಾಧನೆಯನ್ನು ಪರಿಗಣಿಸಿ ಕು. ಸ್ನೇಹಾ ಆಚಾರ್ಯ, ಕು. ಐಷನಿ ಆಚಾರ್ಯ (ರಾಜ್ಯ ಮಟ್ಟದ ಟ್ಯಾಕೊಂಡುನಲ್ಲಿ ಸುವರ್ಣ ಪದಕ) ಕು. ಅವನಿ ನೆಲ್ಲಿ (ಜಿಮ್ನಾಸ್ಟಿಕ್‌ನಲ್ಲಿ ರಾಜ್ಯ ಮಟ್ಟದ ಸುವರ್ಣ ಪದಕ) ಇವರನ್ನು ಚಿಕ್ಕ ಕಾಣಿಕೆಯೊಂದಿಗೆ ಸನ್ಮಾನಿಸಲಾಯಿತು. ರಾಷ್ಟ್ರ ರಾಜಧಾನಿಯಲ್ಲಿ ಹೆಮ್ಮೆಯ ಕನ್ನಡತಿಯರು ಕನ್ನಡ ಬಾವುಟವನ್ನು ಹಾರಿಸಿ, ವಿವಿಧ ಮನೋರಂಜನೆ ಕಾರ್ಯಕ್ರಮಗಳನ್ನು ಒಳಗೊಂಡ ನಾಡಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದ್ದು ಈ ಬಾರಿಯ ವಿಶೇಷತೆಯಾಗಿತ್ತು. ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಹೃದಯಪೂರ್ವಕ ಶುಭಾಶಯಗಳು. ಜೈ ಕನ್ನಡಾಂಬೆ... ಜೈ ಭಾರತ ಮಾತೆ ❑

***ನಯನಾ ಮಾನಕಾಪುರೆ***

ಅಧ್ಯಕ್ಷೆ, ಜನಕಪುರಿ ಮಹಿಳಾ ಮಂಡಳಿ

# ನವದೆಹಲಿಯ ಕರ್ನಾಟಕ ಭವನದಲ್ಲಿ ಕನಕ ಜಯಂತಿ ಆಚರಣೆ



ನವದೆಹಲಿಯ ಕರ್ನಾಟಕ ಭವನದಲ್ಲಿ ದಾಸ ಶ್ರೇಷ್ಠ ಶ್ರೀ ಕನಕದಾಸ ಜಯಂತಿಯನ್ನು ಪುಷ್ಪ ನಮನ ಸಲ್ಲಿಸುವುದರ ಮೂಲಕ ಬಹಳ ಭಕ್ತಿ ಭಾವದಿಂದ ಆಚರಿಸಲಾಯಿತು, ಶ್ರೀ ಭಕ್ತ ಕನಕದಾಸರವರು ನಡೆದು ಬಂದ ಚರಿತ್ರೆಯನ್ನು ಸವಿಸ್ತಾರವಾಗಿ ಸಹಾಯಕ ನಿವಾಸಿ ಆಯುಕ್ತರಾದ ಶ್ರೀ ಸಿ. ಮೋಹನ್ ಕುಮಾರ್ ಅವರು ವಿವರಿಸಿದರು. ಈ ಸುಸಂದರ್ಭದಲ್ಲಿ ಅಪರ ನಿವಾಸಿ ಆಯುಕ್ತರಾದ ಶ್ರೀಮತಿ ಆಕೃತಿ ಬನ್ಸಲ್ ಐಎಎಸ್, ವೈದ್ಯಾಧಿಕಾರಿಗಳಾದ ಡಾ. ಟಿ. ಕಾರ್ತಿಕ್, ಭವನದ ಅಧಿಕಾರಿ ವರ್ಗದವರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

***ಎಸ್ ರಮೇಶ,*** ಕರ್ನಾಟಕ ಭವನ

## ಸಂಘದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಶ್ರೀಮತಿ ಡಾ. ಸುಧಾ ಮೂರ್ತಿ ಅವರೊಂದಿಗೆ ವಿವಿಧ ನೃತ್ಯ ಪ್ರದರ್ಶನ ನೀಡಿದ 'ದೆಹಲಿ ಕನ್ನಡಿಗರ ದೃಶ್ಯ ಸಂಭ್ರಮ'








# ಶುಭ ವಿವಾಹ




**ಸಂಘದ ಆಜೀವ ಸದಸ್ಯ ಹಾಗೂ ಅಭಿಮತ ಸಂಪಾದಕ ಮಂಡಳಿಯ ಸದಸ್ಯರಾಗಿರುವ ಶ್ರೀ ಯಲ್ಲಾಲಿಂಗ ಕೊಪ್ಪದ ಹಾಗು ಡಾ. ಲಿಖಿತಾ ಶ್ರೀ ಅವರ ಆರತಕ್ಷತೆ ಹಾಗು ವಿವಾಹವು ದಿನಾಂಕ 24.11.2024 ರಂದು ಬೆಂಗಳೂರಿನಲ್ಲಿ ನಡೆಯಿತು. ಈ ಸಂದರ್ಭ ಸಂಘದ ಅಧ್ಯಕ್ಷರು, ಅನೇಕ ಸದಸ್ಯರು, ಹಿತೈಷಿಗಳು ಭಾಗಿಯಾಗಿದ್ದರು.**

**ಹೊಸ ಬದುಕಿಗೆ ಮುನ್ನಡಿಯಿಟ್ಟ ನವದಂಪತಿಗಳಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹೃತ್ಪೂರ್ವಕ ಶುಭಾಶಯಗಳು ಹಾಗೂ ಅವರ ವೈವಾಹಿಕ ಜೀವನಕ್ಕೆ ಶುಭ ಹಾರೈಕೆಗಳು.**



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆ ಹಾಗು ದೆಹಲಿ ಕನ್ನಡ ಶಾಲೆಯಲ್ಲಿ ಶಿಕ್ಷಕಿಯಾಗಿರುವ ಪೂರ್ಣಿಮಾ ಅಡಿಗ ಅವರು ಇತ್ತೀಚೆಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಅವರ ಮತ್ತು ಶ್ರೀ ಗೋಪಾಲ ರಾವ್ ವಿವಾಹವು ದಿನಾಂಕ 10.11.2024 ರಂದು ಹೊಸನಗರದಲ್ಲಿ ನೆರವೇರಿದೆ.

**ನವ ವಿವಾಹಿತರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಶುಭಾಶಯಗಳು ಹಾಗು ಅವರ ಸುಖಮಯ ದಾಂಪತ್ಯ ಜೀವನಕ್ಕೆ ಶುಭ ಕಾಮನೆಗಳು.**

Delhi Karnataka Sangha Abhimata
Dec-2024, Vol. No.35, Issue No. 3, Price Rs.1/-
RNI Regn. No. 53405/91, DL-SW-01/4016/22-24
Date of Publication : Dec 8th / 9th, Posting Date : 10th / 11th, Total Pages-32 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: K.Sreenivasa Murthy

## ದಿನಾಂಕ 24.11.2024 ರಂದು ಸಂಘದ ಸಭಾಂಗಣದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ಭಾಗವಹಿಸಿ ನೃತ್ಯ ಪ್ರದರ್ಶನ ನೀಡಿದ ವಿವಿಧ ತಂಡದ ಸದಸ್ಯರು, ಮುಖ್ಯ ಅತಿಥಿ ಶ್ರೀಮತಿ ಡಾ. ಸುಧಾ ಮೂರ್ತಿ ಅವರೊಂದಿಗೆ ಅವಿಸ್ಮರಣೀಯ ಛಾಯಾ ಚಿತ್ರಗಳು










